1 August 2026 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮಗು ಜನಿಸಿದಾಗ ತಾಯಿ ತಾನು ಪಟ್ಟ ಯಮ ಯಾತನೆಯನ್ನು ಮರೆತು ನಗುತ್ತಾಳೆ, ಅಂದರೆ ಸಂತೃಪ್ತಿ ಸಿಕ್ಕರೆ ನೋವು ಶಮನ!

-ಸ್ನೇಹಾ ಆನಂದ್

info.varthaman@gmail.com



ಕುರ್ಚಿ ಕಿತ್ತಾಟದಲ್ಲಿ ಕಾವೇರಿ ಮರೆತರು: ಬಿ.ವೈ. ವಿಜಯೇಂದ್ರ ಆಕ್ರೋಶ
ಪುಟ ಸಂ. 2



ತಮಿಳುನಾಡಿಗೆ ಕಾವೇರಿ ನೀರು: ರಾಮನಗರದಲ್ಲಿ ಪಂಜಿನ ಮೆರವಣಿಗೆ
ಪುಟ ಸಂ. 3



ವಿವೇಕ ಸ್ಮಾರಕ ಉದ್ಘಾಟನೆಗೆ ಮೋದಿ ಆಗಮಿಸದಿರಲು ಆಗ್ರಹ
ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 241 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಸರ್ವಪಕ್ಷ ಸಭೆಯಲ್ಲಿ ತೀರ್ಮಾನ: ಸಚಿವ ರಾಮಲಿಂಗಾರೆಡ್ಡಿ ಹೇಳಿಕೆ

**ಬೆಂಗಳೂರು:** ಸರ್ವಪಕ್ಷ ಸಭೆಯಲ್ಲಿ ತೀರ್ಮಾನ ಆಗುವವರೆಗೂ ತಮಿಳುನಾಡಿಗೆ ನೀರು ಬಿಡಲ್ಲ ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.



ವಿಧಾನಸೌಧದಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ತಮಿಳುನಾಡಿಗೆ 15 ದಿನಗಳ ಕಾಲ 3,500 ಕ್ಯೂಸೆಕ್ ನೀರು ಹರಿಸಬೇಕೆಂಬ ಕಾವೇರಿ ಪ್ರಾಧಿಕಾರ ಆದೇಶ ಕುರಿತು ಪ್ರತಿಕ್ರಿಯಿಸಿದರು. ಸದ್ಯಕ್ಕೆ ಕುಡಿಯುವ ನೀರಿಗೆ ಸಮಸ್ಯೆಯಿಲ್ಲ. ಆದರೆ ರೈತರಿಗೆ ಬೆಳೆ ಬೆಳೆಯೋಕೆ ನೀರು ಕೊಡಲು ಆಗಲ್ಲ ಎಂದರು.

ಕಳೆದ 30 ವರ್ಷಗಳಿಂದ ವಾದ ಮಾಡಿದ್ದವರೇ ಈಗಲೂ ವಾದ ಮಾಡಿದ್ದಾರೆ. ಮುಖ್ಯಮಂತ್ರಿಗಳು ಸರ್ವಪಕ್ಷ ಸಭೆ ಕರೆದಿದ್ದಾರೆ. ವಿಪಕ್ಷಗಳ ಸಲಹೆ ಪಡೆದು ಮುಂದಿನ ತೀರ್ಮಾನ ಮಾಡ್ತೀವಿ. ಸಭೆ ಆಗುವವರೆಗೂ ನೀರು ಬಿಡಲ್ಲ ಎಂದು ಹೇಳಿದರು.

## ಚಾಮುಂಡಿಬೆಟ್ಟದಲ್ಲಿ ಸಂಭ್ರಮ

### ಚಾಮುಂಡೇಶ್ವರಿ ದರ್ಶನಕ್ಕೆ ಭಕ್ತ ಸಮೂಹ ಹೈರಾಣ

**ಮೈಸೂರು:** ಚಾಮುಂಡಿಬೆಟ್ಟದಲ್ಲಿ ಆಷಾಢ ಶುಕ್ರವಾರದ ಅಂಗವಾಗಿ ಚಾಮುಂಡೇಶ್ವರಿಗೆ ಗಜಲಕ್ಷ್ಮೀ ಅಲಂಕಾರ ಮಾಡಲಾಗಿತ್ತು. ಸಾವಿರಾರು ಭಕ್ತರು ದೇವಿ ದರ್ಶನ ಪಡೆದು ಕಣ್ತುಂಬಿಕೊಂಡರು.

ಆಷಾಢ ಶುಕ್ರವಾರಕ್ಕೆ ಬರುವ ಭಕ್ತರ ಸಂಖ್ಯೆ ಗಣನೀಯವಾಗಿ ಏರಿಕೆ ಆಗುತ್ತಿರುವ ಹಿನ್ನೆಲೆಯಲ್ಲಿ ಮೂರನೇ ವಾರವೂ ಸಾಗರೋಪಾದಿಯಲ್ಲಿ ಭಕ್ತರ ದಂಡು ಹರಿದು ಬಂತು.

ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ದೇವಾಲಯದ ಹೊರಗೆ ಹಾಗೂ ಒಳಗೆ ಮಾವು, ಕಿತ್ತಳೆ ಹಣ್ಣು ಬಳಸಿ ಅತ್ಯಾಕರ್ಷಕ ಅಲಂಕಾರ ಮಾಡಲಾಗಿತ್ತು. ಗರ್ಭ ಗುಂಡಿ ಆವರಣದಲ್ಲೂ ಸಹ ಮಣಿ



ಹಾರದ ಮಾಲೆಗಳಿಂದಲೇ ದೇವಾಲಯ ಕಂಗೊಳಿಸಿತು. ಶ್ರೀ ಚಾಮುಂಡೇಶ್ವರಿ ಮೂಲ ಮೂರ್ತಿ ಕೆಂಪು ಸೀರೆಯಿಂದ ಕಂಗೊಳಿಸಿದರೆ,

ಪುಟ 2ಕ್ಕೆ



## ಇಂದು ಮೈಸೂರಿಗೆ ಸಿಎಂ

**ಮೈಸೂರು:** ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಡಿ.ಕೆ.ಶಿವಕುಮಾರ್ ಅವರು ಶನಿವಾರ ನಗರಕ್ಕೆ ಭೇಟಿ ನೀಡುತ್ತಿದ್ದಾರೆ. ಬೆಳಿಗ್ಗೆ 10.45ಕ್ಕೆ ವಿಶೇಷ ವಿಮಾನದಲ್ಲಿ ಬರುವರು. ಬೆಳಿಗ್ಗೆ 11.30ಕ್ಕೆ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದರ್ಶನ



ಮತ್ತು ಪೂಜೆ ನೆರವೇರಿಸುವರು. ಮಧ್ಯಾಹ್ನ 3.15ಕ್ಕೆ ಒವೆಲ್ ಮೈದಾನದ ಹೆಲಿಪ್ಯಾಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸುವರು. ಮಧ್ಯಾಹ್ನ 3.30ಕ್ಕೆ ವಿವೇಕ ಸ್ಮಾರಕ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಭಾಗವಹಿಸುವರು. ಸಂಜೆ 4.25ಕ್ಕೆ ಯಾದವಗಿರಿ ಶ್ರೀರಾಮಕೃಷ್ಣ ವಿದ್ಯಾಶಾಲಾ ಸ್ಟೇಡಿಯಂನಲ್ಲಿ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಜೆ 6ಕ್ಕೆ ಮೈಸೂರಿನಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಲಿದ್ದಾರೆ.

## ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿಗೆ ಬಿಗ್ ರಿಲೀಫ್

### ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಹೈಕೋರ್ಟ್ ಜಾಮೀನು



**ಬೆಂಗಳೂರು:** ಕಾಂಗ್ರೆಸ್ ಶಾಸಕ, ಮಾಜಿ ಸಚಿವ ವಿನಯ್ ಕುಲಕರ್ಣಿಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ. ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಶುಕ್ರವಾರ ಜಾಮೀನು ನೀಡಿದೆ.

ಕೊಲೆ ಪ್ರಕಕಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ವಿನಯ್ ಕುಲಕರ್ಣಿ ತಮಗೆ

ಪುಟ 2ಕ್ಕೆ

## ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿ: ಯಡಿಯೂರಪ್ಪ



**ಮೈಸೂರು:** ತಮಿಳುನಾಡಿಗೆ ಕಾವೇರಿ ನೀರು ಬಿಡಿ ಎಂಬ ಆದೇಶದ ವಿರುದ್ಧ ತಕ್ಷಣ ಸುಪ್ರೀಂ ಕೋರ್ಟ್ ಗೆ ಅಪೀಲ್ ಹೋಗಬೇಕು ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ

ಪುಟ 2ಕ್ಕೆ

## ವಿಧಾನ ಪರಿಷತ್ ಚುನಾವಣೆ: ಗಾಯತ್ರಿಗೆ 9 ಮತಗಳ ಗೆಲುವು

**ಬೆಂಗಳೂರು:** ವಿಧಾನಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳಲ್ಲಿ ನಡೆದ ಸುದೀರ್ಘ ಕಾನೂನು ಹೋರಾಟದ ನಂತರ ಕಾಂಗ್ರೆಸ್ ಅಭ್ಯರ್ಥಿ ಗಾಯತ್ರಿ ಶಾಂತೇಗೌಡ ಅವರು ಬಿಜೆಪಿ ಅಭ್ಯರ್ಥಿ ಹಾಗೂ ಪರಿಷತ್ ಉಪಸಭಾಪತಿ ಎಂ.ಕೆ. ಪ್ರಾಣೇಶ್ ವಿರುದ್ಧ 9

ಪುಟ 2ಕ್ಕೆ

# ತ.ನಾಡಿಗೆ ಸದ್ಯಕ್ಕೆ ನೀರು ಬಿಡಲ್ಲ

## ಕರ್ನಾಟಕ ಬಂದ್ ಕೈಬಿಡಿ: ಸಿಎಂ ಡಿ.ಕೆ.ಶಿವಕುಮಾರ್ ಮನವಿ



**ಬೆಂಗಳೂರು:** ರಾಜ್ಯದ ಹಿತ ಕಾಪಾಡಲು ಸರ್ಕಾರ ಸಿದ್ಧವಿದೆ. ದಯವಿಟ್ಟು ಬಂದ್ ಕೈಬಿಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ನಾವೇ ನಿಮ್ಮ ಪರವಾಗಿದ್ದೇವೆ. ಕಾವೇರಿ ನೀರು ಬಿಡುವ ಬಗ್ಗೆ ಸರ್ವಪಕ್ಷ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಲಾಗುವುದು. ಅಲ್ಲಿಯವರೆಗೂ ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಭರವಸೆ ನೀಡಿದರು.

ಸಿಡಬ್ಲ್ಯೂಎಂಎ 4.5 ಟಿಎಂಸಿ ನೀರು ಬಿಡುವಂತೆ ರಾಜ್ಯಕ್ಕೆ ಸೂಚಿಸಿದೆ. ಇದೇ ಭಾನುವಾರ ಸರ್ವಪಕ್ಷಗಳ ಸಭೆ ಕರೆದಿದ್ದೇನೆ. ಸಭೆಯಲ್ಲಿ ಚರ್ಚೆ ಮಾಡಿದ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ರೈತ ಪರ, ಕನ್ನಡಪರ ಸಂಘಟನೆಗಳು ಹೋರಾಟ ಮಾಡುತ್ತಿವೆ ಹೋರಾಟ ಮಾಡೋದು ತಪ್ಪಲ್ಲ, ಆದರೆ ವಾಸ್ತವಾಂಶ ಗೊತ್ತಿರಲಿ. ರಾಜ್ಯದ ಹಿತರಕ್ಷಣೆಗೆ ನಾವಿದ್ದೇವೆ. ನೀವೆಲ್ಲ ಸೇರಿ ನಮಗೆ ಅಧಿಕಾರ ಕೊಟ್ಟಿದ್ದೀರಿ. ನಿಮ್ಮ ವಿರುದ್ಧ ಯಾವುದೇ ಕಾರಣಕ್ಕೂ ಕೆಲಸ ಮಾಡಲ್ಲ. ದಯವಿಟ್ಟು ಬಂದ್ ವಿಚಾರ ಕೈಬಿಡಬೇಕು ಎಂದು ಕನ್ನಡಪರ ಹೋರಾಟಗಾರರಿಗೆ ಸಿಎಂ ಮನವಿ ಮಾಡಿದರು.

ಕರ್ನಾಟಕ ಬಂದ್ ಮಾಡುವುದರಿಂದ ಯಾವುದೇ ಪರಿಹಾರ ಸಿಗಲ್ಲ. ಕಾನೂನು ವ್ಯವಸ್ಥೆ ಬೇರೆ ಇದೆ. ಕೋರ್ಟ್ ಆದೇಶ ಬೇರೆ ಇದೆ. ಬಂದ್ ಮಾಡಿದರೆ ಜನರಿಗೆ ಎಷ್ಟು ತೊಂದರೆ ಆಗುತ್ತದೆ ಅನ್ನೋದು ನಿಮಗೂ ಗೊತ್ತಿದೆ. ನೀವೂ ಆಲೋಚನೆ ಮಾಡಬೇಕು. ಆದ್ದರಿಂದ ಬಂದ್ ಮಾಡಬೇಕೆಂಬ ನಿಮ್ಮ ತೀರ್ಮಾನ ದಯವಿಟ್ಟು ಹಿಂತೆಗೆದುಕೊಳ್ಳಿ ಎಂದು ಮನವಿ ಮಾಡಿದರು.

ನಮ್ಮ ಸರ್ಕಾರ ಎಲ್ಲ ಸಮಯದಲ್ಲಿ ಬದ್ಧತೆ ತೋರಿಸಿದೆ. ಬಿಜೆಪಿ ಪ್ರತಿಭಟನೆ ಅವಶ್ಯಕತೆ ಇರಲಿಲ್ಲ. ಅವರ ಸಂಸದರು ಕೂಡ ಪ್ರಯತ್ನಿಸಿದ್ದಾರೆ. ಸರ್ವಪಕ್ಷ ಸಭೆಯಲ್ಲಿ ರಾಜ್ಯದ

ಪುಟ 2ಕ್ಕೆ

## ಈಗ ವಾತಾವರಣ ಸರಿಯಿಲ್ಲ: ವಿಜಯ್ ಭೇಟಿ ಬೇಡ–ಸಿಎಂ

**ಬೆಂಗಳೂರು:** ರಾಜ್ಯದಲ್ಲಿ ಕಾವೇರಿ ನೀರು ಹಂಚಿಕೆ ವಿವಾದದಿಂದ ಪ್ರತಿಭಟನೆ ಭುಗಿಲೆದ್ದಿರುವ ಹಿನ್ನೆಲೆಯಲ್ಲಿ ನಿಗದಿತ ಕರ್ನಾಟಕ ಭೇಟಿಯನ್ನು ಮುಂದೂಡುವಂತೆ ಎಂದು ತಮಿಳುನಾಡು ಸಿಎಂ ಸಿ. ಜೋಸೆಫ್ ವಿಜಯ್‌ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ತಮಿಳುನಾಡು ಸಿಎಂ ವಿಜಯ್ ಅವರ ಬೆಂಗಳೂರು ಭೇಟಿ ಆಗಸ್ಟ್ 3ಕ್ಕೆ ನಿಗದಿಯಾಗಿತ್ತು. ರಾಜ್ಯದಲ್ಲಿ ಈಗ ವಾತಾವರಣ ಸರಿಯಿಲ್ಲ ಎಂದು ಸಿಎಂ ಹೇಳಿದ್ದಾರೆ.

ತಮಿಳುನಾಡಿಗೆ ಪ್ರತಿದಿನ 3,500 ಕ್ಯುಸೆಕ್ ನೀರು ಬಿಡಬೇಕು ಎನ್ನುವ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಎತ್ತಿ ಹಿಡಿದಿದೆ. ಇದರ ಬೆನ್ನಲ್ಲೇ ಡಿ.ಕೆ ಶಿವಕುಮಾರ್ ಈ ಮನವಿ ಮಾಡಿದ್ದಾರೆ.

ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಶಿವಕುಮಾರ್, ಈಗಾಗಲೇ ಮುಖ್ಯಮಂತ್ರಿ ವಿಜಯ್ ಅವರೊಂದಿಗೆ ಮಾತನಾಡಿದ್ದೇನೆ. ಆಗಸ್ಟ್ 3ರ ಬದಲಿಗೆ ಮತ್ತೊಂದು ದಿನಾಂಕ ನಿಗದಿಪಡಿಸುವಂತೆ ಮತ್ತೆ ಮನವಿ ಮಾಡಲಾಗುವುದು. ನಿಗದಿಯಾಗಿರುವ ಭೇಟಿಯನ್ನು ಸ್ವಲ್ಪ ಸಮಯದವರೆಗೆ ಮುಂದೂಡಬೇಕೆಂದು ಮನವಿ ಮಾಡಿದ್ದೇನೆ. ಈಗ ಪರಿಸ್ಥಿತಿ ನಿಧಾನವಾಗಿ

ಪುಟ 2ಕ್ಕೆ

## ಆ.13ಕ್ಕೆ ಕರ್ನಾಟಕ ಬಂದ್: ಕನ್ನಡಪರ ಸಂಘಟನೆಗಳ ಕರೆ

**ಬೆಂಗಳೂರು:** ತಮಿಳುನಾಡಿಗೆ ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕಾವೇರಿ ಜಲ ನಿಯಂತ್ರಣ ಸಮಿತಿ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ವಿರೋಧಿಸಿ ವಿವಿಧ ಕನ್ನಡಪರ ಸಂಘಟನೆಗಳು ಕರ್ನಾಟಕ ಬಂದ್ ಗೆ ಕರೆ ನೀಡಿವೆ.

ಕರ್ನಾಟಕದಿಂದ ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ನೀಡಿರುವ ಆದೇಶ ವಿರೋಧಿಸಿ, ವಿವಿಧ ಕನ್ನಡಪರ ಸಂಘಟನೆಗಳು ಆಗಸ್ಟ್ 13ರಂದು ಬೆಳಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ರಾಜ್ಯವ್ಯಾಪಿ ಬಂದ್‌ಗೆ ಕರೆ ನೀಡಿವೆ.

ಕರ್ನಾಟಕ ರಾಜ್ಯ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಮಾತನಾಡಿ, ರಾಜ್ಯದಾದ್ಯಂತ ವ್ಯಾಪಾರಿಗಳು, ವಿವಿಧ ಸಂಘ–ಸಂಸ್ಥೆಗಳು ಮತ್ತು ಸಾರ್ವಜನಿಕರು ಬಂದ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಿದರು.

ಪುಟ 2ಕ್ಕೆ

## ಕೆಆರ್‌ಎಸ್‌ಗೆ ಒಳಹರಿವು ಹೆಚ್ಚಳ

### ಕೊಡಗಿನಲ್ಲಿ ಎರಡು ದಿನದಿಂದ ಉತ್ತಮ ಮಳೆ



**ಮೈಸೂರು:** ಕೊಡಗಿನಲ್ಲಿ ಎರಡು ದಿನದಿಂದ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೃಷ್ಣರಾಜಸಾಗರ ಹಾಗೂ ಹಾರಂಗಿ ಜಲಾಶಯಕ್ಕೆ ಹೆಚ್ಚಿನ ನೀರು ಹರಿದು ಬರುತ್ತಿದೆ.

ರಾಜ್ಯದ ಅತ್ಯಂತ ಕಡಿಮೆ ತುಂಬಿರುವ ಜಲಾಶಯಗಳ ಪಟ್ಟಿಯಲ್ಲಿರುವ ಕೃಷ್ಣರಾಜಸಾಗರಕ್ಕೆ ಒಳಹರಿವು ಹೆಚ್ಚಿರುವುದರಿಂದ ನೀರಿನ ಮಟ್ಟ ಏರಿಕೆಯಾಗುತ್ತಿದೆ. ಕೃಷ್ಣರಾಜಸಾಗರ ಜಲಾಶಯಕ್ಕೆ ಶುಕ್ರವಾರ 7058 ಕ್ಯೂಸೆಕ್ ನೀರು ಹರಿದು

ಪುಟ 2ಕ್ಕೆ

# ಕೆಆರ್‌ಎಸ್‌ಗೆ ಬಿಜೆಪಿ ಮುತ್ತಿಗೆ ಯತ್ನ

## ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಆಗ್ರಹಿಸಿ ಪ್ರತಿಭಟನೆ

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವ ಆದೇಶವನ್ನು ಖಂಡಿಸಿ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯಕ್ಕೆ ಮುತ್ತಿಗೆ ಹಾಕಲು ಮುಂದಾದ ರಾಜ್ಯ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ಶುಕ್ರವಾರ ಮುನ್ನೆಚ್ಚರಿಕಾ ಕ್ರಮವಾಗಿ ವಶಕ್ಕೆ ಪಡೆದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಹಲವು ಬಿಜೆಪಿ ನಾಯಕರನ್ನು ಪೊಲೀಸರು ವಶಕ್ಕೆ ಪಡೆದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಕಾವೇರಿ ಜಲ ನಿಯಂತ್ರಣ ಸಮಿತಿ ಶಿಫಾರಸ್ಸನ್ನು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಎತ್ತಿಹಿಡಿದಿರುವುದನ್ನು ತೀವ್ರವಾಗಿ ಖಂಡಿಸಿದರು.

ರಾಜ್ಯದಲ್ಲಿ ಮಳೆ ಕೊರತೆ ಹಾಗೂ ತೀವ್ರ ಬರ



ಪರಿಸ್ಥಿತಿ ಇದ್ದರೂ, 15 ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡುವಂತೆ ಆದೇಶಿಸಿರುವುದು ಕರ್ನಾಟಕ ರೈತರ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಅವರು ಆರೋಪಿಸಿದರು.

ಕೆಆರ್‌ಎಸ್ ಸಮೀಪದಲ್ಲಿ ಮೊದಲು ಧರಣಿ ನಡೆಸಿದ ಬಿಜೆಪಿ ನಾಯಕರು ಬಳಿಕ ಅಣೆಕಟ್ಟಿನತ್ತ ಮೆರವಣಿಗೆ ನಡೆಸಲು ಮುಂದಾದಾಗ ಪೊಲೀಸರು ತಡೆದು ವಶಕ್ಕೆ ಪಡೆದರು. ಪ್ರತಿಭಟನೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಮಾಜಿ ಸಂಸದೆ ಸುಮಲತಾ ಅಂಬರೀಷ್ ಕೂಡ ಭಾಗವಹಿಸಿದ್ದರು.

## ನೀರು ಹರಿಸಿದರೆ ಸರ್ವಪಕ್ಷ ಸಭೆ ಬಹಿಷ್ಕಾರ: ವಿಜಯೇಂದ್ರ

ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವುದಿಲ್ಲ ಎಂದು ಸ್ಪಷ್ಟ ಭರವಸೆ ನೀಡದಿದ್ದರೆ ಆಗಸ್ಟ್ 2ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆದಿರುವ ಸರ್ವಪಕ್ಷ ಸಭೆಯನ್ನು ಬಹಿಷ್ಕರಿಸುವುದಾಗಿ ಬಿಜೆಪಿ ಎಚ್ಚರಿಕೆ ನೀಡಿದೆ.



ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್ ಸರ್ಕಾರ ರೈತರ ಹಿತಾಸಕ್ತಿಯನ್ನು ಸಂಪೂರ್ಣ ನಿರ್ಲಕ್ಷಿಸಿದೆ ಎಂದು ಆರೋಪಿಸಿದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದ ನಂತರ ರೈತರನ್ನು ಮರೆತಿದ್ದಾರೆ. ಸರ್ಕಾರ ರೈತರ ಸಮಸ್ಯೆಗಳಿಗಿಂತ ಮುಖ್ಯಮಂತ್ರಿ ಕುರ್ಚಿಯ ರಾಜಕೀಯದಲ್ಲೇ ತೊಡಗಿದೆ ಎಂದು ವಾಗ್ದಾಳಿ ನಡೆಸಿದರು.

ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಮೊದಲು ಕಾನೂನು ತಜ್ಞರು, ರಾಜಕೀಯ ಪಕ್ಷಗಳು ಹಾಗೂ ಸಂಬಂಧಿತ ವಲಯಗಳೊಂದಿಗೆ ಯಾವುದೇ ಗಂಭೀರ ಸಮಾಲೋಚನೆ ನಡೆಸಿಲ್ಲ. ಸರ್ವಪಕ್ಷ ಸಭೆಯನ್ನು ಸಿಡಬ್ಲ್ಯುಎಂಎ ಆದೇಶದ ಬಳಿಕ ಕರೆಯುವುದರ ಬಗ್ಗೆ ಪ್ರಶ್ನಿಸಿದ ವಿಜಯೇಂದ್ರ, ಹಾನಿಯಾದ ನಂತರ ಕೋಪಗೊಂಡರೆ ಏನು ಪ್ರಯೋಜನ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಲ್ಲಿ ತಮಿಳುನಾಡಿನಿಂದ ಯಾವುದೇ ಅಧಿಕೃತ ಬೇಡಿಕೆ ಬಾರದಿದ್ದರೂ, ಯಾವುದೇ ರಾಜಕೀಯ ಪಕ್ಷಗಳೊಂದಿಗೆ ಚರ್ಚಿಸದೇ ಹಾಗೂ ವಿಧಾನಮಂಡಲದಲ್ಲೂ ವಿಷಯ ಪ್ರಸ್ತಾಪಿಸದೇ 3.5 ಟಿಎಂಸಿ ನೀರನ್ನು ಬಿಡುಗಡೆ ಮಾಡಲಾಗಿದೆ ಎಂದು ಅವರು ಆರೋಪಿಸಿದರು.

ರಾಜಕೀಯಕ್ಕಿಂತ ಕರ್ನಾಟಕದ ರೈತರಿಗೆ ನ್ಯಾಯ ದೊರಕುವುದು ಮುಖ್ಯ. ಮೊದಲು ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಸರ್ಕಾರ ಘೋಷಿಸಲಿ. ನಂತರವೇ ನಾವು ಸರ್ವಪಕ್ಷ ಸಭೆಯಲ್ಲಿ ಭಾಗವಹಿಸುವ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇವೆ ಎಂದು ವಿಜಯೇಂದ್ರ ಹೇಳಿದರು.

## ಬರ ನಿರ್ವಹಣೆ: ಸರ್ಕಾರ ವಿಫಲ

### ಸಂಪುಟ ವಿಸ್ತರಣೆ ಚಿಂತೆ: ಎಚ್‌ಡಿಕೆ ಕಿಡಿ

**ಮಂಡ್ಯ:** ರಾಜ್ಯದ ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಮಂಡ್ಯ ತಾಲೂಕಿನ ಹಟ್ನ ಬೇವುಕಲ್ಲು ಗ್ರಾಮದಲ್ಲಿ ಸಾಲ ಬಾಧೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದ ರೈತ ದಂಪತಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಬಳಿಕ ಮಾಧ್ಯಮಗಳ ಜತೆ ಮಾತನಾಡಿದರು.

ಈಗಾಗಲೇ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ಆರಂಭವಾಗಿವೆ. ಕೂಡಲೇ ಸರ್ಕಾರ ಅಮೂಲ್ಯ ಜೀವಗಳ ಸಾವನ್ನು ತಡೆಯುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಸಾಕಷ್ಟು ಕಡೆ ಸಂಪೂರ್ಣ ಬೆಳೆ ಹಾನಿಯಾಗಿದೆ. ಈ ಸರ್ಕಾರ ರೈತರ ನೆರವಿಗೆ ಹೋಗುವುದನ್ನು

ಪುಟ 2ಕ್ಕೆ



## ಎಸಿ ರೂಂನಲ್ಲಿ ಕುಳಿತು ಆದೇಶ: ಪ್ರಾಧಿಕಾರದ ವಿರುದ್ಧ ಎಚ್‌ಡಿಕೆ ಕಿಡಿ

**ಹಾಸನ:** ತಮಿಳುನಾಡಿಗೆ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ನೀಡಿದ್ದ ಆದೇಶ ಎತ್ತಿಹಿಡಿದಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು. ಮಾಧ್ಯಮಗಳ ಜೊತೆ ಮಾತನಾಡಿದ ಅವರು, ದೆಹಲಿಯ ಎಸಿ ರೂಮ್‌ಗಳಲ್ಲಿ ಕುಳಿತು ಈ ನಿರ್ಧಾರವನ್ನು ತೆಗೆದುಕೊಳ್ಳುವ ಬದಲು, ಸಿಡಬ್ಲ್ಯುಎಂಎ ಸದಸ್ಯರು ಕರ್ನಾಟಕ ಮತ್ತು ತಮಿಳುನಾಡಿನ ಜಲಾಶಯಗಳಾದ ಕೆಆರ್‌ಎಸ್, ಹಾರಂಗಿ, ಕಬಿನಿ, ಹೇಮಾವತಿ ಮತ್ತು ಮೆಟ್ಟೂರು ಪ್ರದೇಶಗಳಿಗೆ ಭೇಟಿ ನೀಡಿ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಿ ಆನಂತರ ನಿರ್ಧರಿಸಿ ಎಂದು ಸಲಹೆ ನೀಡಿದರು.

ಕರ್ನಾಟಕದಲ್ಲಿ ಸದ್ಯ ಲಭ್ಯವಿರುವ 54ರಿಂದ 55 ಟಿಎಂಸಿ ನೀರಲ್ಲಿ, 10 ಟಿಎಂಸಿ ಡೆಡ್ ಸ್ಟೋರೇಜ್

ಪುಟ 2ಕ್ಕೆ

## ಕಾವೇರಿ ಪರಿಸ್ಥಿತಿ: ಸಿಎಂ ಉನ್ನತ ಮಟ್ಟದ ಸಭೆ



**ಬೆಂಗಳೂರು:** ರಾಜ್ಯದಲ್ಲಿನ ಕಾವೇರಿ ನೀರಿನ ಪರಿಸ್ಥಿತಿಯ ಬಗ್ಗೆ ಪರಿಶೀಲಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಉನ್ನತ ಮಟ್ಟದ ಸಭೆ ನಡೆಸಿದರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕರ್ನಾಟಕದ ಮನವಿಯನ್ನು ತಿರಸ್ಕರಿಸಿ, ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಎತ್ತಿಹಿಡಿದು, ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಿದ ಬೆನ್ನಲ್ಲೇ ಈ ಸಭೆ ನಡೆಯಿತು.

ಸಭೆಯ ನಂತರ ಮಾತನಾಡಿದ ಅವರು, ತಮಿಳುನಾಡಿಗೆ ಹೆಚ್ಚಿನ ನೀರು ಬಿಟ್ಟಿಲ್ಲ. ಸಹಜವಾಗಿ ಹರಿದುಹೋಗುವ ನೀರು ತಮಿಳು ನಾಡಿಗೆ ಹೋಗುತ್ತಿದೆಯಷ್ಟೆ ಎಂದು ಸ್ಪಷ್ಟಪಡಿಸಿದರು.

ಮೇಕೆದಾಟು ಯೋಜನೆ ಕುರಿತು ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ಈಗಾಗಲೇ ಸ್ಪಷ್ಟವಾದ ತೀರ್ಪು ನೀಡಿದೆ. ನಾವು ನ್ಯಾಯಾಲಯದ ಆದೇಶವನ್ನು ಪಾಲಿಸಲೇಬೇಕು. ಯಾವುದೇ ಆದೇಶವನ್ನು ಉಲ್ಲಂಘಿಸುವ ಉದ್ದೇಶ ನಮ್ಮದಲ್ಲ ಎಂದರು.

ಮೇಕೆದಾಟು ಜಲಾಶಯ ಯೋಜನೆಯಿಂದ ಕರ್ನಾಟಕಕ್ಕಿಂತ ತಮಿಳುನಾಡಿಗೇ ಹೆಚ್ಚಿನ ಲಾಭವಾಗಲಿದೆ. ವಿದ್ಯುತ್ ಉತ್ಪಾದನೆ ಅಂಶವನ್ನು ಹೊರತುಪಡಿಸಿದರೆ, ಈ ಯೋಜನೆಯಿಂದ ತಮಿಳುನಾಡಿಗೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಸಿಎಂ ತಿಳಿಸಿದರು.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಸಲೀಂ ಅಹ್ಮದ್, ಹಿರಿಯ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು.

# ಮೊದಲ ಪುಟದಿಂದ

## ವಿಜಯ್ ಭೇಟಿ ಬೇಡ-ಸಿಎಂ

ಸುಧಾರಿಸುತ್ತಿದೆ. ಜಲಾಶಯಗಳಿಗೆ ಒಳಹರಿವು ಹೆಚ್ಚುತ್ತಿದೆ. ಹೆಚ್ಚು ಅನುಕೂಲಕರ ಹಾಗೂ ಸೌಹಾರ್ದಯುತ ವಾತಾವರಣದಲ್ಲಿ ನಮ್ಮ ಸಭೆ ನಡೆಸೋಣ ಎಂದು ತಿಳಿಸಿದ್ದಾರೆ. ಯಾವುದೇ ಅತಿಥಿ ನಮ್ಮ ರಾಜ್ಯಕ್ಕೆ ಬಂದಾಗ ಅವರನ್ನು ಆತ್ಮೀಯತೆ ಮತ್ತು ಸೌಹಾರ್ದದಿಂದ ಸ್ವಾಗತಿಸಬೇಕು. ಕರ್ನಾಟಕ ದೇಶದ ಎಲ್ಲ ಭಾಗದ ಜನರನ್ನು ಸದಾ ಸ್ವಾಗತಿಸಿದೆ. ಯಾರ ಭಾವನೆಗಳಿಗೂ ಧಕ್ಕೆ ಉಂಟಾಗಬಾರದು ಎಂದು ಶಿವಕುಮಾರ್ ಹೇಳಿದರು. ಈ ವರ್ಷ ಕರ್ನಾಟಕ ಎದುರಿಸುತ್ತಿರುವ ಸಂಕಷ್ಟವನ್ನು ತಮಿಳುನಾಡಿಗೆ ಮನವರಿಕೆ ಮಾಡಿಕೊಡುವುದು ನಮ್ಮ ಕರ್ತವ್ಯ. ಭಾನುವಾರ ಸರ್ವಪಕ್ಷ ಸಭೆ ನಡೆಸುತ್ತೇವೆ. ಬಳಿಕ ಪರಿಸ್ಥಿತಿ ಶಾಂತವಾದ ನಂತರ ತಮಿಳುನಾಡು ಮುಖ್ಯಮಂತ್ರಿಯನ್ನು ಮತ್ತೊಮ್ಮೆ ಪರಸ್ಪರ ಅನುಕೂಲಕರ ದಿನಾಂಕದಲ್ಲಿ ಮಾತುಕತೆಗೆ ಆಹ್ವಾನಿಸುತ್ತೇನೆ ಎಂದು ಹೇಳಿದರು.

## ಬರ ನಿರ್ವಹಣೆ: ಸರ್ಕಾರ ವಿಫಲ

ಬಿಟ್ಟು ಹೊಲದಲ್ಲಿ ನಿಂತು ಫೋಟೋಗೆ ಫೋಸ್ ಕೊಟ್ಟು ಬರುತ್ತಿದ್ದಾರೆ. ರೈತರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು. ಸಾಲ ಪಡೆದಿರುವ ರೈತರಿಗೆ ಬ್ಯಾಂಕುಗಳು ನೋಟಿಸ್ ಕೊಡಲು ಶುರು ಮಾಡಿವೆ. ರಾಜ್ಯ ಸರ್ಕಾರ ಏನು ಮಾಡುತ್ತಿದೆ ಎಂಬುದೇ ಅರ್ಥವಾಗುತ್ತಿಲ್ಲ. ದುರಂತವೆಂದರೆ ಈ ರಾಜ್ಯದಲ್ಲಿ ಈಗ ಕೃಷಿ ಸಚಿವರೇ ಇಲ್ಲ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಸರ್ಕಾರ ಇದೆ ಎಂದು ಭಾವನೆಯನ್ನೇ ಮಾಡಿಲ್ಲ. ಈ ಸರ್ಕಾರ ಟೇಕಾಫ್ ಆಗಿಯೇ ಇಲ್ಲ. ಮಂತ್ರಿಗಿರಿ, ಸಂಪುಟ ವಿಸ್ತರಣೆ ಇವೆಲ್ಲವುಗಳನ್ನು ಪಕ್ಕಕ್ಕಿಟ್ಟು ಮೊದಲು ಸರ್ಕಾರ ರೈತರ ನೆರವಿಗೆ ಧಾವಿಸಬೇಕು ಎಂದು ಕುಮಾರಸ್ವಾಮಿ ಅವರು ಒತ್ತಾಯ ಮಾಡಿದರು.

ಕಾವೇರಿ ವಿಷಯಕ್ಕಾಗಿ ಮುಖ್ಯಮಂತ್ರಿ ಸರ್ವಪಕ್ಷ ಸಭೆ ಕರೆದಿದ್ದಾರೆ. ರಾಜ್ಯದ ರೈತರಹಿತಕ್ಕಾಗಿ ನಾವು ಸಭೆಯಲ್ಲಿ ಪಾಲ್ಗೊಳ್ಳುತ್ತೇವೆ. ನಮ್ಮ ವಾದವನ್ನು ಪ್ರಬಲವಾಗಿ ಮಂಡಿಸುತ್ತೇವೆ ಎಂದ ತಿಳಿಸಿದರು.

## ಚಾಮುಂಡಿಬೆಟ್ಟದಲ್ಲಿ ಸಂಭ್ರಮ

ಉತ್ಸವ ಮೂರ್ತಿಗೆ ಗಿಳಿ ಹಸಿರು ಬಣ್ಣಗಳಿಂದ ಅಲಂಕಾರ ಮಾಡಲಾಗಿತ್ತು.

ದೇವಾಲಯದ ಪ್ರಧಾನ ಅರ್ಚಕರಾದ ಶಶಿಶೇಖರ ದೀಕ್ಷಿತರ ನೇತೃತ್ವದಲ್ಲಿ ಬೆಳಗಿನ ಜಾವದಿಂದಲೇ ವಿಶೇಷ ಪೂಜೆಗಳು, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ ನಡೆಯಿತು. ಬೆಳಗ್ಗೆ 5.30ರ ಬಳಿಕ ರಾತ್ರಿ 10ಯವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಸರತಿ ಸಾಲಿನಲ್ಲಿ ಆಗಮಿಸುವವರಿಗೆ ಅಲ್ಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು.

ಬಸ್ ನಲ್ಲಿ ಬರುವವರಿಗೆ 8 ತಾಸಿನ ಬಳಿಕ ದರ್ಶನವಾದರೆ, ಮೆಟ್ಟಿಲು ಹತ್ತಿ ಬಂದವರಿಗೂ 6 ತಾಸಿನ ಬಳಿಕ ದರ್ಶನ ಆಗುತ್ತಿದ್ದರ ಬಗ್ಗೆ ಭಕ್ತರೂ ಬೇಸರ ವ್ಯಕ್ತಪಡಿಸಿದರು.

ಮಾಜಿ ಸಿಎಂ ಯಡಿಯೂರಪ್ಪ, ಪುತ್ರ ವಿಜಯೇಂದ್ರ ಕುಟುಂಬ ಸಮೇತರಾಗಿ ಆಗಮಿಸಿದ್ದರು. ಮಾಜಿ ಸಚಿವ ಸಿ.ಟಿ.ರವಿ, ಶಾಸಕ ಕೆ.ಹರೀಶ್ ಗೌಡ ಸೇರಿ ಅನೇಕ ಗಣ್ಯರು ಚಾಮುಂಡೇಶ್ವರಿ ದರ್ಶನ ಪಡೆದರು.

## ವಿನಯ್‌ಗೆ ಬಿಗ್ ರಿಲೀಫ್

ವಿಧಿಸಿದ್ದ ಶಿಕ್ಷೆಗೆ ತಡೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಜನಪ್ರತಿನಿಧಿಗಳ ಕೋರ್ಟ್ ವಿಧಿಸಿದ್ದ ಜೀವಾವಧಿ ಶಿಕ್ಷೆಗೆ ತಡೆಯಾಜ್ಞೆ ಮತ್ತು ಜಾಮೀನು ನೀಡಿ ಹೈಕೋರ್ಟ್ ಮಹತ್ವದ ಮಧ್ಯಂತರ ತೀರ್ಪು ನೀಡಿದೆ. ವಿನಯ್ ಕುಲಕರ್ಣಿ ಸೇರಿದಂತೆ 10 ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಚನ್ನಕೇಶವ ಟಿಂಗರಿಕರ್‌ಗೂ ಜಾಮೀನು ದೊರೆತಿದೆ.

ವಿನಯ್ ಕುಲಕರ್ಣಿಗೆ ಕೆಳ ನ್ಯಾಯಾಲಯ ವಿಧಿಸಿದ್ದ ಜೀವಾವದಿ ಶಿಕ್ಷೆಗೆ ಹೈಕೋರ್ಟ್ ತಡೆ ನೀಡಿದೆ. ಶಿಕ್ಷೆ ಅಮಾನತನಲ್ಲಿಟ್ಟು ಜಾಮೀನು ಮಂಜೂರು ಮಾಡಿದೆ. ಐದು ಲಕ್ಷ ಬಾಂಡ್ ಹಾಗೂ ಇಬ್ಬರ ಶ್ಯೂರಿಟಿ ಮೇರೆಗೆ ಜಾಮೀನು ನೀಡಲಾಗಿದೆ. ನ್ಯಾಯಮೂರ್ತಿ ಬಸವರಾಜ್ ಹಾಗೂ ಮೊಹಮ್ಮದ್ ನವಾಜ್ ಅವರ ವಿಭಾಗೀಯ ಪೀಠ ಮಹತ್ವದ ಆದೇಶ ನೀಡಿದೆ. ಇದರಿಂದ ಅವರ ಶಾಸಕ ಸ್ಥಾನಕ್ಕೆ ಮತ್ತೆ ಜೀವ ಸಿಕ್ಕಿದೆ. ವಿನಯ್ ಕುಲಕರ್ಣಿಗೆ ಧಾರವಾಡ ಜಿಲ್ಲೆ ಪ್ರವೇಶಿಸದಂತೆ ನಿರ್ಬಂಧ ವಿಧಿಸುವ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ. ಹೈಕೋರ್ಟ್ ಅನುಮತಿ ಇಲ್ಲದೆ ಭಾರತದಿಂದ ಹೊರಗೆ ಪ್ರಯಾಣಕ್ಕೆ ಅವಕಾಶವಿಲ್ಲ.

ಧಾರವಾಡದಲ್ಲಿ 2016ರ ಜೂನ್‌ನಲ್ಲಿ ಬಿಜೆಪಿ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೇಶ್ ಗೌಡ ಹತ್ಯೆಯಾಗಿತ್ತು. ಕಳೆದ ಏಪ್ರಿಲ್‌ನಲ್ಲಿ ಬೆಂಗಳೂರಿನ ವಿಶೇಷ ನ್ಯಾಯಾಲಯ ವಿನಯ್ ಕುಲಕರ್ಣಿ ಸೇರಿದಂತೆ 17 ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿ ಜೀವಾವಧಿ ಶಿಕ್ಷೆ ವಿಧಿಸಿತ್ತು. ಇದರ ಪರಿಣಾಮವಾಗಿ ವಿನಯ್ ಕುಲಕರ್ಣಿ ಶಾಸಕ ಸ್ಥಾನದಿಂದ ಅನರ್ಹರಾಗಿದ್ದರು.

ಹೈಕೋರ್ಟ್ ಶಿಕ್ಷೆ ಮತ್ತು ದೋಷಾರೋಪಣೆ ಆದೇಶಕ್ಕೆ ತಾತ್ಕಾಲಿಕ ತಡೆ ನೀಡಿ ಜಾಮೀನು ಮಂಜೂರು ಮಾಡಿರುವುದರಿಂದ ವಿನಯ್ ಕುಲಕರ್ಣಿಗೆ ಅವರ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ಪೂರ್ಣಗೊಳ್ಳುವವರೆಗೆ ಮಧ್ಯಂತರ ಕಾನೂನು ಪರಿಹಾರ ದೊರೆತಿದೆ.

## ಗಾಯತ್ರಿಗೆ 9 ಮತಗಳ ಗೆಲುವು

ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ತೀರ್ಪಿನ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಗಾಯತ್ರಿ ಅವರು, ವಿಧಾನಪರಿಷತ್ ಚುನಾವಣೆಯಲ್ಲಿ ನಾನು ಪ್ರಾಣೇಶ್ ಅವರ ವಿರುದ್ಧ ಕೇವಲ 6 ಮತಗಳಿಂದ ಸೋತಿದ್ದೆ. ಅದನ್ನು ಪ್ರಶ್ನಿಸಿ ನಾನು ಹೈಕೋರ್ಟ್ ಮೆಟ್ಟಿಲೇರಿದ್ದೆ. ಹೈಕೋರ್ಟ್‌ನಲ್ಲಿ ನಡೆದ ವಿಚಾರಣೆ ಮತ್ತು ಮರು ಎಣಿಕೆ ಫಲಿತಾಂಶ ಮುಚ್ಚಿದ ಲಕೋಟೆಯಲ್ಲಿ ನೀಡಲಾಗಿದೆ. ನಾನು 9 ಮತಗಳಿಂದ ವಿಜೇತರಾಗಿದ್ದೇನೆ ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರು ಪರಿಷತ್ ಚುನಾವಣೆಯಲ್ಲಿ ಮತದಾನ ಮಾಡುವಂತಿಲ್ಲ ಎಂದು ಕೋರ್ಟ್ ಸ್ಪಷ್ಟ ತೀರ್ಪು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಪ್ರಾಣೇಶ್ ಅವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದರು. ಆದರೆ ಸುಪ್ರೀಂ ಕೋರ್ಟ್ ಅವರ ಅರ್ಜಿಯನ್ನು ವಜಾಗೊಳಿಸಿತು.

### ಜಲಾಶಯಗಳ ನೀರಿನ ಮಟ್ಟ

| | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 93.55 ಅಡಿ |
| ಒಳಹರಿವು | 10504 ಕ್ಯುಸೆಕ್ |
| ಹೊರ ಹರಿವು | 1403 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2277.05 ಅಡಿ |
| ಒಳಹರಿವು | 8580 ಕ್ಯುಸೆಕ್ |
| ಹೊರ ಹರಿವು | 500 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2857.98 ಅಡಿ |
| ಒಳಹರಿವು | 13000 ಕ್ಯುಸೆಕ್ |
| ಹೊರ ಹರಿವು | 13000 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2907.50 ಅಡಿ |
| ಒಳಹರಿವು | 5445 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

# ಹೆದ್ದಾರಿ ತಡೆದು ಪ್ರತಿಭಟನೆ



ಚಾಮರಾಜನಗರ, ನಗರದ ಹೊರವಲಯದ ಸೋಮವಾರಪೇಟೆ ಬಳಿ ಹಾದುಹೋಗುವ ಬೆಂಗಳೂರು-ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿಯನ್ನು ಕಬ್ಬು ಬೆಳೆಗಾರರ ಸಂಘಟ ಕಾರ್ಯಕರ್ತರು ತಡೆದು ತಮಿಳುನಾಡಿಗೆ ಕಾವೇರಿ ನೀರು ಹರಿಸಬಾರದು ಎಂದು ಆಗ್ರಹಿಸಿದರು.

ರಾಜ್ಯದ ಜನರೇ ಸಂಕಷ್ಟ ಪರಿಸ್ಥಿತಿಯಲ್ಲಿದ್ದು ತಮಿಳುನಾಡಿಗೆ ನೀರು ಹರಿಸಲಾಗದ ಸ್ಥಿತಿಯಲ್ಲಿ ರಾಜ್ಯವಿದೆ. ಕುಡಿಯಲು ನೀರಿಲ್ಲದೇ ಪರದಾಡುತ್ತಿರುವಾಗ ಬೆಳೆಗಳಿಗೆ ನೀರು ಹರಿಸಲು ಸಾಧ್ಯವಿಲ್ಲ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲನೆ ಮಾಡಲಾಗಲ್ಲ, ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಒತ್ತಾಯಿಸಿದರು.

ಬರಪೀಡಿತ ಎಂದು ಘೋಷಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು, ಚಾಮರಾಜನಗರದ ಚಾಮರಾಜೇಶ್ವರ ದೇಗುಲದಿಂದ ಜಿಲ್ಲಾಡಳಿತ ಭವನದ ತನಕ ಪ್ರತಿಭಟನಾ ಮೆರವಣಿಗೆ ನಡೆಸಿ ಚಾಮರಾಜನಗರ ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಬೇಕು. ಗೋಶಾಲೆಗಳನ್ನು ತೆರೆದು ಮೇವು ಪೂರೈಸಬೇಕು, ತಮಿಳುನಾಡಿಗೆ ನೀರು ಹರಿಸಬಾರದು ಎಂದು ಆಗ್ರಹಿಸಿ ಜಿಲ್ಲಾಧಿಕಾರಿ ಮೂಲಕ ರಾಜ್ಯ ಸರ್ಕಾರಕ್ಕೆ ಹಕ್ಕೊತ್ತಾಯ ಸಲ್ಲಿಸಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಮಹೇಶ್ ಪ್ರಭು, ಸಿದ್ದರಾಜು ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ವರದಾನ



ಗುಂಡ್ಲುಪೇಟೆ:ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಉಚಿತ ತರಬೇತಿ ಅತ್ಯಂತ ಸಹಕಾರಿಯಾಗಿದ್ದು, ಇಂತಹ ಅವ ಕಾಶಗಳನ್ನು ಸದುಪಯೋಗಪಡಿಸಿಕೊಂಡು ಸರ್ಕಾರಿ ಸೇವೆಗೆ ಸೇರುವ ಗುರಿಯೊಂದಿಗೆ ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ಶಿಕ್ಷಣ ತಜ್ಞರು ಕರೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೊಲೀಸ್ ಕಾನ್ಸ್ಟೇಬಲ್ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಪಡೆದ ಮೊದಲ ತಂಡದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಕೆ.ಎಸ್.ಎನ್. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಬಾಲಸುಬ್ರಹ್ಮಣ್ಯ, ಸ್ಥಳೀಯ ಮಟ್ಟದಲ್ಲೇ ಅನುಭವಿ ಅಧ್ಯಾಪಕರಿಂದ ಉಚಿತವಾಗಿ ನೀಡಲಾಗುತ್ತಿರುವ ಈ ತರಬೇತಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಅಪರೂಪದ ಅವಕಾಶವಾಗಿದೆ. ಹೆಚ್ಚಿನ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದು ಉತ್ತಮ ಅಧಿಕಾರಿಗಳಾಗಿ ಸಮಾಜ ಸೇವೆ ಮಾಡುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎ.ಆರ್. ಮದನ್ ಕುಮಾರ್ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗ ಪಡೆದು ಆರ್ಥಿಕವಾಗಿ ಸ್ವಾವಲಂಬಿಗಳಾಗುವುದು ಅತ್ಯಗತ್ಯವಾಗಿದೆ. ಯಶಸ್ಸಿನ ಹಾದಿಯಲ್ಲಿ ನಿರಂತರ ಪರಿಶ್ರಮ, ಶಿಸ್ತು ಮತ್ತು ಗುಣಮಟ್ಟದ ತರಬೇತಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಲಕ್ಷ್ಮೀ ಎಸ್.ಎಸ್. ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ಹೆಚ್ಚಿನ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡುವಂತೆ ಕರೆ ನೀಡಿದರು. ಐಕ್ಯೂಎಸಿ ಸಂಚಾಲಕ ವಿಜಯಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಭೂಗೋಳಶಾಸ್ತ್ರ ವಿಭಾಗದ ಕೃಷ್ಣಮೂರ್ತಿ ಸ್ವಾಗತಿಸಿದರು. ಶಿವಸುಂದರ್ ವಂದಿಸಿದರು. ಕಾಲೇಜಿನ ಅಧ್ಯಾಪಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕುರ್ಚಿ ಕಿತ್ತಾಟದಲ್ಲಿ ಸರ್ಕಾರ

## ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆ



ಮೈಸೂರು: ಏಪ್ರಿಲ್, ಮೇ ತಿಂಗಳಿನಲ್ಲಿಯೇ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿತ್ತು. ಈಗ ನೀರು ಬಿಟ್ಟು ಕೈಕಟ್ಟಿ ಕುಳಿತುಕೊಳ್ಳುವ ರೀತಿ ಆಗಿದೆ. ಆ ಸಮಯದಲ್ಲಿ ಅವರಿಗೆ ಮುಖ್ಯಮಂತ್ರಿ ಕುರ್ಚಿ ಕಿತ್ತಾಟದಲ್ಲಿಯೇ ಮಾಜಿ ಹಾಗೂ ಹಾಲಿ ಮುಖ್ಯಮಂತ್ರಿಗಳು ನಿರತರಾಗಿ ಕಾವೇರಿ ಮರೆತರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, ತಮಿಳುನಾಡಿಗೆ ನೀರು ಬಿಟ್ಟು ಈಗ ಸರ್ವಪಕ್ಷ ಸಭೆ ಕರೆಯುತ್ತೇನೆ ಎಂದೇ ಏನು ಅರ್ಥ?,

ಬಿಜೆಪಿ ಪಕ್ಷ ಹಾಗೂ ಅನೇಕ ರೈತ ಸಂಘಟನೆಗಳು ಸೇರಿ ಕೆಆರ್ ಎಸ್ ಜಲಾಶಯದಲ್ಲಿ ಪ್ರತಿಭಟಿಸುತ್ತಿವೆ. ನಾನು ರಾಜ್ಯದ ಮುಖ್ಯಮಂತ್ರಿ ಡಿಕೆ ಶಿವಕುಮಾರಗೆ ಒತ್ತಾಯ ಮಾಡುತ್ತೇನೆ, ಕಾವೇರಿ ನದಿಗೆ ನೀರು ಬಿಡಬೇಕು ಎನ್ನುವ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ಗೆ ಮೇಲ್ಮನವಿ ಸಲ್ಲಿಸಬೇಕು. ಮುಖ್ಯಮಂತ್ರಿಗಳು ಕಾವೇರಿ ಕೊಳ್ಳದ ರೈತರ ಪರವಾಗಿ ನಿಲ್ಲಬೇಕು. ನಮ್ಮಲ್ಲೇ ನೀರು ಇಲ್ಲದೇ ಮೇಲೆ ತಮಿಳುನಾಡಿಗೆ ನೀರು ಬಿಡುವುದು ಹೇಗೆ ಎಂದರು.

## ಡಿಕೆಶಿ ವಾಟರ್ ಮೆನ್ ಆಗದಿರಲಿ



**ಮೈಸೂರು:** ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಮಿಳುನಾಡಿನ ವಾಟರ್ ಮ್ಯಾನ್ ಕೆಲಸ ಮಾಡಬಾರದು ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ಚಾಮುಂಡೇಶ್ವರಿ ದರ್ಶನ ಪಡೆದ ಕಾವೇರಿ ನದಿ ನೀರು ಹಂಚಿಕೆ ಕುರಿತು ಪ್ರತಿಕ್ರಯಿಸಿದ ಅವರು, ಡಿ.ಕೆ.ಶಿವಕುಮಾರ್ ವಿಪಕ್ಷದಲ್ಲಿ ಇದ್ದಾಗ, ನಮ್ಮ ನೀರು ನಮ್ಮ ಹಕ್ಕು ಎಂದು ಹೋರಾಟ ಮಾಡಿದರು. ಈಗ ಜಲಾಶಯದ ನೀರನ್ನು ಬೆಳೆಗೆ ಬೆಳೆಸಬೇಡಿ ಎಂದು ಹೇಳಿಕೆ ಕೊಡುತ್ತಾರೆ. ಮಂಡ್ಯ, ಮೈಸೂರು, ಬೆಂಗಳೂರು ಜನರಿಗೆ ಕೆಆರ್ ಎಸ್ ನಲ್ಲಿ ಕುಡಿಯುವುದಕ್ಕೆ ನೀರು ಎಷ್ಟಿದೆ ಎನ್ನುವದನ್ನು ಅವರು ಮೊದಲು ಬಾಯಿ ಬಿಡಬೇಕು. ರಾಜ್ಯದ ಮುಖ್ಯಮಂತ್ರಿ ತಮಿಳು ನಾಡಿನ ವಾಟರ್ ಮ್ಯಾನ್ ರೀತಿ ಕೆಲಸ ಮಾಡಬಾರದು. ರಾಜ್ಯದ ಜನರ ರಕ್ಷಣೆಗೆ ನೀವು ನಿಂತುಕೊಳ್ಳಿ, ನಿಮ್ಮ ಬೆಂಬಲಕ್ಕೆ ನಾವು ನಿಲ್ಲುತ್ತೇವೆ, ಬಂಗಾರಪ್ಪರ ರೀತಿ ನಿರ್ಧಾರ ತೆಗೆದುಕೊಳ್ಳಿ ಎಂದರು.

ತಮಿಳುನಾಡಿನ ಸಿಎಂ ವಿಜಯ್ ಕರ್ನಾಟಕಕ್ಕೆ ಭೇಟಿ ವಿಚಾರ ಕುರಿತು ಪ್ರತಿಕ್ರಯಿಸಿ, ಮಾತುಕತೆ ಮಾಡಿದರೆ ಒಳ್ಳೆಯದ್ದು, ನಮ್ಮ ಜಲಾಶಯದ ವಸ್ತುಸ್ಥಿತಿಯ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಿ. ಕಾಂಗ್ರೆಸ್ ಹಾಗೂ ಟಿವಿಕೆ ಎರಡು ಮಿತ್ರ ಪಕ್ಷಗಳೇ ಅಲ್ಲವೇ ನಿಮ್ಮ ಮಿತ್ರರಿಗೆ ಮನವರಿಕೆ ಮಾಡಿಕೊಡುವುದಕ್ಕೆ ಅಗುವುದಿಲ್ಲ ಎಂದರೇ ಹೇಗೆ ಎಂದು ಪ್ರಶ್ನಿಸಿದರು.

### ಸ್ವಾಭಿಮಾನ ಎಲ್ಲಿ ಹೋಯಿತು

ಸಂಪುಟ ಪುನರ್ರಚನೆ ವಿಚಾರ ಕುರಿತು ಪ್ರತಿಕ್ರಯಿಸಿ, ಸಂಪುಟ ಪುನರ್ರಚನೆಗೆ ಒಂದೆರಡು ದಿನ ಕಾಯುವುದು ಸಹಜ. ಎರಡು ತಿಂಗಳುಗಳಿಂದ ದೆಹಲಿಯ ಭಾಗಿಲನ್ನು ಕಾಯುವುದು ಸ್ವಾಭಿಮಾನದ ರಾಜಕಾರಣ ಅಲ್ಲ. ಸಿದ್ದರಾಮಯ್ಯ ಸ್ವಾಭಿಮಾನ ರಾಜಕಾರಣಿ ಎಂದು ಕೊಂಡಿದ್ದೆ, ಅವರು ಸೇರಿ ರಾಜ್ಯದ ಕಾಂಗ್ರೆಸ್ ನಾಯಕರ ಸ್ವಾಭಿಮಾನ ಎಲ್ಲದೇ ಹೋಯಿತೆ, ನಮ್ಮ ರಾಜ್ಯದ ಕಾಂಗ್ರೆಸ್ ನಾಯಕರು ಜೀತದಾಳಿನ ರೀತಿ ಹೋಗಿ ಕಾಯುವುದನ್ನು ಮೊದಲು ನಿಲ್ಲಿಸಿ ಎಂದರು.

ರಾಜ್ಯದಲ್ಲಿ ವಿಪಕ್ಷಗಳ ವೈಫಲ್ಯ ವಿಚಾರ ಕುರಿತು ಮಾತನಾಡಿ, ರಾಜ್ಯದಲ್ಲಿ ವಿರೋಧ ಪಕ್ಷದವರಾಗಿ ನಮ್ಮ ಪ್ರಯತ್ನ ನಾವು ಮಾಡುತ್ತಿದ್ದೇವೆ. ಬಂಡತನ ಮೊಂಡತನಕ್ಕೆ ಏನು ಮಾಡುವುದಕ್ಕೆ ಅಗುವುದಿಲ್ಲ. ನಮ್ಮ ಸಾಮರ್ಥ್ಯದಲ್ಲಿ ನಾವು ಹೋರಾಟ ಮಾಡುತ್ತಿದ್ದೇವೆ. ಮತ್ತಷ್ಟು ಹೆಚ್ಚು ಮಾಡಬೇಕು ಎನ್ನುವ ಆಶಯ ರಾಜ್ಯದ ಜನರದ್ದು, ನಮ್ಮ ಜನರ ನಿರೀಕ್ಷೆ ಹುಸಿ ಮಾಡದೇ ಮತ್ತಷ್ಟು ಹೋರಾಟ ಮಾಡುತ್ತೇವೆಂದರು.

# ಮೊದಲ ಪುಟದಿಂದ

## ಆ.13ಕ್ಕೆ ಕರ್ನಾಟಕ ಬಂದ್

ಜಲಾಶಯಗಳಿಗೆ ಸಮರ್ಪಕ ನೀರಿನ ಹರಿವು ಇಲ್ಲದಿರುವುದು, ಕುಡಿಯುವ ನೀರು ಹಾಗೂ ನೀರಾವರಿಗೆ ತೊಂದರೆಯಾಗುವ ಆತಂಕದ ನಡುವೆ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ ಎಂದು ರೈತರು ಹಾಗೂ ಕನ್ನಡಪರ ಸಂಘಟನೆಗಳು ಪ್ರತಿಭಟನೆ ತೀವ್ರಗೊಳಿಸಿರುವ ಹಿನ್ನೆಲೆಯಲ್ಲಿ ಬಂದ್‌ಗೆ ಕರೆ ನೀಡಲಾಗಿದೆ. ಈ ಬಂದ್‌ಗೆ ರಾಜ್ಯದ ಜನರು ಸಂಪೂರ್ಣ ಸಹಕಾರ ನೀಡಬೇಕು. ಬೆಳಗಾವಿಯಿಂದ ಚಾಮರಾಜನಗರದವರೆಗೆ ಕರ್ನಾಟಕ ಬಂದ್ ಅನ್ನು ಯಶಸ್ವಿಗೊಳಿಸೋಣ ಎಂದು ಮನವಿ ಮಾಡಿದರು. ಕಾವೇರಿ ವಿಚಾರವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ ಎಲ್ಲಾ ರಾಜಕೀಯ ಪಕ್ಷಗಳ ವಿರುದ್ಧವೂ ಅವರು ವಾಗ್ದಾಳಿ ನಡೆಸಿದರು. ಕರ್ನಾಟಕದಲ್ಲೇ ತೀವ್ರ ನೀರಿನ ಕೊರತೆ ಇರುವ ಸಂದರ್ಭದಲ್ಲಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಿದರೆ ರಾಜ್ಯದ ರೈತರಿಗೆ ತೀವ್ರ ಅನ್ಯಾಯವಾಗಲಿದೆ ಎಂದು ಕನ್ನಡಪರ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ.

## ತ.ನಾಡಿಗೆ ನೀರು ಬಿಡಲ್ಲ

ಹಿತಕ್ಕೆ ಬದ್ಧರಾಗಿರೋಣ ಎಂದು ತಿಳಿಸಿದರು. ತಮಿಳುನಾಡಿಗೆ ಜುಲೈ ತಿಂಗಳಲ್ಲಿ 100 ವರ್ಷದಲ್ಲಿ ಇದೇ ಮೊದಲು ಕಡಿಮೆ ನೀರು ಬಿಡಲಾಗಿದೆ. ಜುಲೈ ತಿಂಗಳಲ್ಲಿ ಕೇವಲ 0.6 ಟಿಎಂಸಿ ನೀರು ಮಾತ್ರ ನೀರು ಬಿಟ್ಟಿದ್ದೇವೆ. ಇದು ಕಳೆದ ನೂರು ವರ್ಷದ ಇತಿಹಾಸದಲ್ಲಿ ಕಡಿಮೆ ಎಂದು ಹೇಳಿದರು.

## ಪ್ರಾಧಿಕಾರದ ವಿರುದ್ಧ ಕಿಡಿ

ಆಗಿದೆ. ಉಳಿದ 44 ಟಿಎಂಸಿಯಲ್ಲಿ ಬೆಂಗಳೂರು ನಗರದ ಕುಡಿಯುವ ನೀರಿಗಾಗಿ 30 ಟಿಎಂಸಿ ಮತ್ತು ಪರಿಸರ ಸಂರಕ್ಷಣೆಗೆ 10 ಟಿಎಂಸಿ ಅಗತ್ಯವಿದೆ.

ಇಂತಹ ಸಂದರ್ಭದಲ್ಲಿ, ಮುಂದೆ ಹರಿಯುವ ನೀರನ್ನು ಆಧರಿಸಿ, ಅಂದಾಜು ಲೆಕ್ಕಾಚಾರದ ಮೇಲೆ ನೀರು ಬಿಡುಗಡೆ ಮಾಡಲು ಆದೇಶಿಸುವುದು ಸರಿಯಲ್ಲ ಎಂದು ಎಚ್‌ಡಿಕೆ ಆಕ್ಷೇಪ ವ್ಯಕ್ತಪಡಿಸಿದರು.

## ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿ

ತಿಳಿಸಿದರು. ಈಗಾಗಲೇ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಜನರಿಗೆ ನ್ಯಾಯ ಒದಗಿಸಬೇಕು. ಕುಡಿಯುವ ನೀರಿಗೆ ಹಾಹಾಕಾರ ಇದೆ. ಇಂತಹ ಸಂದರ್ಭದಲ್ಲಿ ನೀರು ಬಿಡಿ ಎನ್ನುವ ಆದೇಶ ಸರಿಯಲ್ಲ. ಈ ಬಗ್ಗೆ ಸಿಎಂ ಕೂಡಲೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಬೇಕು ಎಂದು ಹೇಳಿದರು.

# ಮೊದಲ ಪುಟದಿಂದ

## ಕೆಆರ್‌ಎಸ್‌ಗೆ ಒಳಹರಿವು ಹೆಚ್ಚಳ

ಬರುತ್ತಿದೆ. ಇನ್ನೂ ಹೆಚ್ಚುವ ನಿರೀಕ್ಷೆಯಿದೆ. ಸದ್ಯ ಹಾರಂಗಿ ಜಲಾಶಯದಿಂದಲೂ 3700 ಕ್ಯೂಸೆಕ್ ನೀರು ಹೊರ ಬಿಡುತ್ತಿರುವುದರಿಂದ ಕೆಆರ್‌ಎಸ್ ಒಳಹರಿವು ಹೆಚ್ಚಲು ಕಾರಣವಾಗಿದೆ. ಕೆಆರ್‌ಎಸ್ ಹೊರ ಹರಿವು 1706 ಕ್ಯೂಸೆಕ್ ಇದೆ. ಜಲಾಶಯದಲ್ಲಿ 17.71 ಟಿಎಂಸಿ ನೀರು ಮಾತ್ರ ಲಭ್ಯವಿದೆ. ಜಲಾಶಯ ಶೇ 36ರಷ್ಟು ಭರ್ತಿಯಾಗಿದೆ. ಕಳೆದ ವರ್ಷ ಇದೇ ದಿನ 45 ಟಿಎಂಸಿ ನೀರಿತ್ತು. ಜಲಾಶಯದ ನೀರಿನ ಮಟ್ಟವು 92.85 ಅಡಿ ನೀರಿದೆ. ಕಳೆದ ವರ್ಷ 121.65 ಟಿಎಂಸಿ ನೀರಿತ್ತು. ಹಿಂದಿನ ವರ್ಷ ಈ ಹೊತ್ತಿಗೆ ಜಲಾಶಯ ಭರ್ತಿಯಾಗಿತ್ತು. ಈ ವರ್ಷ ಮಳೆ ಪ್ರಮಾಣ ಕಡಿಮೆಯಾಗಿದೆ. ಹಾರಂಗಿ ಜಲಾಶಯಕ್ಕೆ 4008 ಕ್ಯೂಸೆಕ್ ಒಳಹರಿವು ಇದೆ. ಶೇ 96ರಷ್ಟು ಭರ್ತಿಯಾಗಿದೆ. ಸದ್ಯ 8.12 ಟಿಎಂಸಿ ನೀರು ಸಂಗ್ರಹವಿದೆ. ಹೇಮಾವತಿ ಜಲಾಶಯಕ್ಕೆ 5445 ಕ್ಯೂಸೆಕ್ ನೀರು ಒಳಹರಿವು ಇದ್ದು ಶೇ 67ರಷ್ಟು ಭರ್ತಿಯಾಗಿದೆ. ಸದ್ಯ 25.02 ಟಿಎಂಸಿ ನೀರು ಸಂಗ್ರಹವಿದೆ. ಕಬಿನಿ ಜಲಾಶಯಕ್ಕೆ 9133 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಶೇ 83ರಷ್ಟು ಭರ್ತಿಯಾಗಿದೆ. 16.13 ಟಿಎಂಸಿ ನೀರು ಸಂಗ್ರಹವಿದೆ. ಕಾವೇರಿ ಕಣಿವೆಯ ನಾಲ್ಕು ಪ್ರಮುಖ ಜಲಾಶಯಗಳಿಗೆ ಶುಕ್ರವಾರ ಒಟ್ಟು ಒಳಹರಿವಿನ ಪ್ರಮಾಣ 21444 ಕ್ಯೂಸೆಕ್ ಇದೆ. ಹೊರ ಹರಿವು 6400 ಕ್ಯೂಸೆಕ್ ನಷ್ಟಿದೆ. ಸದ್ಯ ಜಲಾಶಯಗಳಲ್ಲಿ 66.98 ಟಿಎಂಸಿ ನೀರು ಸಂಗ್ರಹವಿದ್ದು ಶೇ 58ರಷ್ಟು ನೀರು ಲಭ್ಯವಿದೆ. ಕಳೆದ ವರ್ಷ ಇದೇ ದಿನ 106 ಟಿಎಂಸಿ ನೀರಿತ್ತು.

# ಯಾವುದೇ ಕಾರಣಕ್ಕೂ ನೀರು ಬಿಡಕೂಡದು

**ಮೈಸೂರು:** ಕಾವೇರಿ ನೀರು ನಿರ್ವಹಣಾ ಮಂಡಳಿಯು ತಮಿಳುನಾಡಿಗೆ ನೀರು ಬಿಡಲು ಹೊರಡಿಸಿರುವ ಆದೇಶವನ್ನು ರಾಜ್ಯ ಸರ್ಕಾರ ತಿರಸ್ಕಾರ ಮಾಡಿ ನೀರನ್ನು ಯಾವುದೇ ಕಾರಣಕ್ಕೂ ಹರಿಸಬಾರದೆಂದು ಕಾವೇರಿ ಕ್ರಿಯಾ ಸಮಿತಿಯ ಅಧ್ಯಕ್ಷ ಹಾಗೂ ಚಲನಚಿತ್ರ ನಟ ಎಸ್.ಜಯಪ್ರಕಾಶ್ ಕರ್ನಾಟಕ ಸರ್ಕಾರವನ್ನು ಒತ್ತಾಯಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕಳೆದ ಬಾರಿ ಮಾಡಿದ ತಪ್ಪಿಂದಾಗಿ ಡಿಕೆ ಶಿವಕುಮಾರ್ ರವರ ನೇತೃತ್ವದ ಸರ್ಕಾರ ಈ ಸಮಸ್ಯೆಯನ್ನು ಎದುರಿಸುತ್ತಿದೆ ಎಂದು ತಿಳಿಸಿದರು. ಮೈಸೂರಿನ ಟೌನ್ ಹಾಲ್ ಮುಂಭಾಗದಲ್ಲಿ ಕಳೆದ ಬಾರಿ ಕಾವೇರಿ ಕ್ರಿಯಾ ಸಮಿತಿಯು ಸತತವಾಗಿ 100 ದಿನಗಳ ಕಾಲ ಧರಣಿ ನಡೆಸಿದರು ಸಿದ್ದರಾಮಯ್ಯ ಅಥವಾ ಜಿಲ್ಲಾ ಉಸ್ತುವಾರಿ ಸಚಿವರುಗಳು, ಧರ್ಮೇಶ್ ತಾಳಕ್ಕೆ ಸೌಜನ್ಯಕ್ಕಾದರೂ ಭೇಟಿ ಮಾಡದಿರುವುದು ಈ ರಾಜ್ಯದ ಜೀವನದಿಯಾದ ಕಾವೇರಿ ನ



ಸಂರಕ್ಷಣೆ ಮಾಡುವಲ್ಲಿ ವಿಫಲರಾದರು.

ಜಲ ಸಂಪನ್ಮೂಲ ಕೇಂದ್ರ ಸಚಿವ ಎಸ್.ಕೆ.ಪಾಟೀಲ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ನೇತೃತ್ವದಲ್ಲಿ ಬಿಜೆಪಿ ಸಂಸದರು ಭೇಟಿ ಮಾಡಿ ಕರ್ನಾಟಕ ರಾಜ್ಯಕ್ಕೆ ಕಾವೇರಿ ನೀರಿನ ವಿಷಯದಲ್ಲಿ ನ್ಯಾಯ ದೊರಕಿಸಿ ಕೊಡುವಂತೆ ಕೋರಿರುವುದನ್ನು ಕ್ರಿಯಾ ಸಮಿತಿಯು ಸ್ವಾಗತಿಸಿದೆ. ಅದೇ ರೀತಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸರ್ವ ಪಕ್ಷದ ಸಭೆ ಕರೆದಿರುವುದು. ಸೋಮವಾರದವರೆಗೂ ನೀರನ್ನು ಬಿಡದಿರಲು ತೀರ್ಮಾನಿಸಿರುವುದನ್ನು ಸಹ ಕ್ರಿಯಾ ಸಮಿತಿಯು ಸ್ವಾಗತಿಸಿದೆ. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಹರಿಸಬಾರದು ಎಂದು ಆಗ್ರಹಿಸುತ್ತಿದ್ದೇವೆಂದರು. ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಸೋಮೇಗೌಡ, ಶಿವಲಿಂಗಯ್ಯ, ಮಂಜುಳಾ, ಗೋಲ್ಡನ್ ಸುರೇಶ್, ಪ್ರಭುಶಂಕರ, ಹನುಮಂತಯ್ಯ, ರಘು ಆಚಾರ್, ಮಧು, ಮಹೇಶ್, ಕೃಷ್ಣಪ್ಪ , ಹನುಮಂತೇಗೌಡ, ಪ್ರಭಾಕರ್, ಶಿವರಾಂ, ಚಂದ್ರಶೇಖರ್, ತ್ಯಾಗರಾಜ್, ದರ್ಶನ ಗೌಡ, ರವೀಶ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ಕರವೇ (ಸ್ವಾಭಿಮಾನಿ ಬಣ) ಎಚ್ಚರಿಕೆ

# ಕಾವೇರಿ ಹರಿದರೆ, ಶಾಸಕರು, ಸಂಸದರ ಮನೆಗೆ ಬೀಗ

ರಾಮನಗರ: ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿದರೆ ರಾಜ್ಯದ ಸಂಸದರು, ಶಾಸಕರುಗಳ ಮನೆಗಳಿಗೆ ಬೀಗ ಜಡಿದು ಪ್ರತಿಭಟನೆ ಮಾಡುವುದಾಗಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ರಾಜ್ಯ ವಕ್ತಾರ ಶಿವುಗೌಡ ಎಚ್ಚರಿಸಿದ್ದಾರೆ.

ನಗರದ ಐಜೂರು ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ಕಾರ್ಯಕರ್ತರು ಕಾವೇರಿ ನದಿ ನೀರಿನ ಉಳಿವಿಗಾಗಿ ಹಮ್ಮಿಕೊಂಡಿದ್ದ ಪ್ರತಿಭಟನೆಯ ವೇಳೆ ಅವರು ಮಾತನಾಡಿದರು. ಸಿಡಬ್ಲುಆರ್‌ಸಿ ಆದೇಶ ಕರ್ನಾಟಕ ಜನರ ಮರಣ ಶಾಸನದಂತಿದೆ. ಮೊದಲಿನಿಂದಲೂ ಕೇಂದ್ರ ಮತ್ತು ರಾಜ್ಯ ಸರ್ಕಾರ ತಮಿಳುನಾಡು ಸರ್ಕಾರಕ್ಕೆ ಶಕ್ತಿ ತುಂಬುವ ಕೆಲಸವನ್ನೇ ರೂಢಿಸಿಕೊಂಡು ಬಂದಿದೆ ಎಂದು




ಅಸಮಾಧಾನ ವ್ಯಕ್ತಪಡಿಸಿದರು.

ನಾಡಿನ ನೀರನ್ನು ರಕ್ಷಣೆ ಮಾಡದೇ ಮೌನಕ್ಕೆ ಶರಣಾಗುವ ಜನಪ್ರತಿನಿಧಿಗಳನ್ನು ನಾಡಿನ ಜನತೆ ಕ್ಷಮಿಸುವುದಿಲ್ಲ. ಹಾಲಿ ಸರ್ಕಾರ ಮೇಕೆದಾಟು ಅಣೆಕಟ್ಟುವುದಾಗಿ ಭರವಸೆ ನೀಡಿತ್ತು. ಅಣೆಕಟ್ಟು ಸಂಪೂರ್ಣವಾಗಿ ನೆರವೇರಿದ್ದರೆ ರಾಜ್ಯದ ಎಲ್ಲಾ ಸಮಸ್ಯೆ ನೀಗುತ್ತಿತ್ತು. ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಅಣೆಕಟ್ಟು ಕಟ್ಟುವುದಾಗಿ ಜನರಿಗೆ ಹೇಳಿ ಮತಪಡೆದು ಮುಖ್ಯಮಂತ್ರಿಗಳ ಸ್ಥಾನ ಅಲಂಕರಿಸಿದ್ದೀರಿ. ಕೂಡಲೇ ಅಣೆಕಟ್ಟು ಕಟ್ಟಲು ಬೇಕಾದ ಎಲ್ಲಾ ರೀತಿಯ ಪೂರ್ವ ತಯಾರಿಗಳನ್ನು ಮಾಡಿಕೊಂಡು ಮೇಕೆದಾಟು ಅಣೆಕಟ್ಟು ಯೋಜನೆಯನ್ನು ಸಂಪೂರ್ಣಗೊಳಿಸಲೇಬೇಕೆಂದು ನಮ್ಮ ಒತ್ತಾಯವಾಗಿದೆ ಎಂದರು.

### ತಮಿಳುನಾಡಿನ ಅನುಮತಿ ಬೇಕಿಲ್ಲ

### ಎಂದಿದೆ ಕೇಂದ್ರ

ಕೇಂದ್ರ ಸರ್ಕಾರದ ಅಧಿಸೂಚನೆಯಂತೆ ಯಾವುದೇ ಕುಡಿಯುವ ನೀರಿನ ಯೋಜನೆಗಳಿಗೆ ಅಕ್ಕಪಕ್ಕದ ರಾಜ್ಯ ಸರ್ಕಾರಗಳ ಅನುಮತಿ ಬೇಕಿಲ್ಲ ಎಂದು ಹೇಳಿದೆ. ಈ ಹಿಂದಿನ ಸರ್ಕಾರ ಅಣೆಕಟ್ಟು ನಿರ್ಮಾಣಕ್ಕೆ ಒಂದು ಸಾವಿರ ಕೋಟಿ ಹಣವನ್ನು ಬಿಡುಗಡೆ ಮಾಡಿದೆ. ಅದನ್ನು ಪಡೆದು ಉಳಿದಿರುವ ಎರಡು ವರ್ಷಗಳ ಅವಧಿಯೊಳಗೆ ಯೋಜನೆ ಪೂರ್ಣಗೊಳಿಸಬೇಕು. ಡಿ.ಕೆ.ಶಿವಕುಮಾರ್ ಅವರಿಗೆ ಇದೊಂದು ಸುವರ್ಣಾವಕಾಶವಾಗಿದೆ. ನಿಮ್ಮನ್ನು ನಾವು ನಮ್ಮ ಕೊನೆ ಉಸಿರು ಇರುವವರೆಗೂ ಸ್ಮರಿಸುತ್ತೇವೆ. ಮೇಕೆದಾಟು ಯೋಜನೆಗೆ ಜನಪ್ರತಿನಿಧಿಗಳು ಯಾರೆ ಆದರೂ ತೊಂದರೆ ನೀಡಿದರೆ ಅಂತಹವರ ಮನೆಗೆ ಬೀಗ ಜಡಿಯುತ್ತೇವೆ ಎಂದರು.

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಕಿರಣ್‌ಗೌಡ, ಜಿಲ್ಲಾ ಉಸ್ತುವಾರಿ ಅಧ್ಯಕ್ಷ ಬಸವರಾಜ್, ತಾಲೂಕು ಅಧ್ಯಕ್ಷ ಸಿದ್ದರಾಜು, ಸಂಘಟನಾ ಕಾರ್ಯದರ್ಶಿ ವಿನಯ್ ಮುಖಂಡರುಗಳಾದ ರಮೇಶ್, ಸ್ವಾಮಿ, ರಾಜೀವ್, ಮನು, ಲಿಂಗೇಶ್, ವಾಸು, ರಘು, ರಾಜು, ಪ್ರತಾಪ್, ತರುಣ್, ನಿಂಗರಾಜು, ಚಿದಾನಂದ್ ಮುಂತಾದವರಿದ್ದರು.

# ತಮಿಳುನಾಡಿಗೆ ಕಾವೇರಿ ನೀರು: ರಾಮನಗರದಲ್ಲಿ ಪಂಜಿನ ಮೆರವಣಿಗೆ ಪ್ರತಿಭಟನೆ



ರಾಮನಗರ: ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಮತ್ತೆ ಆದೇಶ ಬಂದಿದೆ. ಹಾಗಾಗಿ ಕನ್ನಡಿಗರು ಯಾರು ಕೈಕಟ್ಟಿ ಕೂರುವುದಕ್ಕೆ ಆಗಲ್ಲ. ನಮಗೇ ಕುಡಿಯಲು ನೀರು ಕೊರತೆ ಇರುವಾಗ, ಬೆಳೆ ಬೆಳೆಯಲು ತಮಿಳುನಾಡಿಗೆ ನೀರು ಹರಿಸಬೇಕೇ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್‌ಶೆಟ್ಟಿ ಬಣ)ಯ ರಾಜ್ಯಾಧ್ಯಕ್ಷ ಪ್ರವೀಣ್ ಶೆಟ್ಟಿ ಪ್ರಶ್ನಿಸಿದರು.

ಕಾವೇರಿ ನೀರು ನಿರ್ವಹಣಾ ಮಂಡಳಿಯ ಸೂಚನೆಯನ್ನು ಖಂಡಿಸಿ ನಗರದ ಐಜೂರು ವೃತ್ತದಲ್ಲಿ ಕರವೇ (ಪ್ರವೀಣ್ ಶೆಟ್ಟಿ ಬಣ), ಕರುನಾಡ ಸೇನೆ ಮತ್ತು ಕನ್ನಡ ಪರ ವಿವಿಧ ಸಂಘಟನೆಗಳು ಆಯೋಜಿಸಿದ್ದ ಪಂಜಿನ ಮೆರವಣಿಗೆ ಪ್ರತಿಭಟನೆಯ ವೇಳೆ ಅವರು ಮಾತನಾಡಿದರು. ಮಂಡ್ಯ ಮೈಸೂರು ಭಾಗದ ರೈತರು ವ್ಯವಸಾಯಕ್ಕೆ ನೀರು ಕೇಳಿದರೆ ಕೊಡುತ್ತಿಲ್ಲ ಈ ಭಾಗಗಳಲ್ಲಿ ಕುಡಿಯೋದಕ್ಕೆ ನೀರಿಲ್ಲ, ಎಲ್ಲಾ ಡ್ಯಾಂಗಳಿಲ್ಲಿ ನೀರಿನ ಕೊರತೆ ಎದುರಾಗುತ್ತಿದೆ. ಇನ್ನೊಂದೆಡೆ ಮಳೆಯ ಕೊರತೆಯ ಆತಂಕವೂ ಇದೆ. ಆದರೂ ಸಹ ಕಾವೇರಿ ನ್ಯಾಯ ಮಂಡಳಿ ಆದೇಶವನ್ನು ನೀಡಿದೆ. ನಮ್ಮ ರಾಜಕಾರಣಿಗಳು, ಸಂಸದರು, ಕೇಂದ್ರದ ಸಚಿವರು, ಪ್ರಧಾನಿ ಮೇಲೆ ಒತ್ತಡ ಹಾಕಿ ಪ್ರಧಾನಿ ಮಧ್ಯಸ್ಥಿಕೆ ವಹಿಸಬೇಕು ಎಂದರು.

ಬೆಂಗಳೂರು ನಗರವನ್ನು ಹೇಗೆ ಅಭಿವೃದ್ಧಿ ಮಾಡಬೇಕು ಎಂಬುದು ಆಗಿನ ಕಾಲದಲ್ಲಿ ಯೋಜನೆ ಇರಲಿಲ್ಲ. ಆದರೆ ಬೆಂಗಳೂರು ಇಂದು ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಕನಕಪುರದವರೆಗೆ ಹಬ್ಬಿದೆ. ಇವರೆಲ್ಲರಿಗೂ ನೀರು ಕೊಡಬೇಕಾಗಿದೆ, ತಮಿಳುನಾಡಿಗೆ ನೀರು ಹರಿಸುತ್ತಿದ್ದರೆ, ಇವರಿಗೆಲ್ಲ ನೀರು ಕೊಡೋದು ಹೇಗೆ ಎಂದರು.

### ನಿರ್ವಹಣಾ ಮಂಡಳಿಯಿಂದ ರಾಜ್ಯಕ್ಕೆ ಪದೇ ಪದೇ ಅನ್ಯಾಯ – ಎಂ.ಎನ್.ಆರ್.ರಾಜು

ಕ.ರ.ವೇ. ಜಿಲ್ಲಾಧ್ಯಕ್ಷ ಎಂ.ಎನ್.ಆರ್. ರಾಜು ಮಾತನಾಡಿ ಕಾವೇರಿ ನೀರು ನಿರ್ವಹಣಾ ಮಂಡಳಿ ಕಾವೇರಿ ನೀರಿನ ವಿಚಾರದಲ್ಲಿ ಪದೇ ಪದೇ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ. ನಮಗೆ ಕುಡಿಯಲು ನೀರಿಲ್ಲ. ತಮಿಳುನಾಡಿಗೆ ಬೆಳೆ ಬೆಳೆಯಲು ಅದರಲ್ಲೂ ಎರಡನೇ ಬೆಳೆ ಬೆಳೆಯಲು ನೀರು ಬಿಡುವಂತೆ ಆದೇಶ ನೀಡಿರುವುದು ಮಲತಾಯಿ ಧೋರಣೆಯಾಗಿದೆ ಎಂದರು.

ಕಾವೇರಿ ನೀರಿನ ವಿಚಾರದಲ್ಲಿ ನಿರ್ವಹಣಾ ಮಂಡಳಿ ಪದೇ ಪದೇ ರಾಜ್ಯಕ್ಕೆ ಅನ್ಯಾಯ ಮಾಡುತ್ತಲೇ ಬರುತ್ತಿದೆ. ಇದನ್ನು ಖಂಡಿಸಿ ರಾಮನಗರದಲ್ಲಿ ಪಂಜಿನ ಮೆರವಣಿಗೆ ಮಾಡುತ್ತಿದ್ದೇವೆ. ಇದು ಸಾಂಕೇತಿಕವಾಗಿದೆ. ಮುಂದಿನ ದಿನದಲ್ಲಿ ರಾಜ್ಯಾಧ್ಯಕ್ಷ ನೇತೃತ್ವದಲ್ಲಿ ಬಂದ್‌ಗೆ ಕರೆ ನೀಡಲಾಗುತ್ತದೆ ಎಂದರು. ಜಿಲ್ಲೆಯವರೇ ಆದ ಡಿ.ಕೆ. ಶಿವಕುಮಾರ್ ಅವರ ರಾಜ್ಯದ ನೂತನ ಮುಖ್ಯಮಂತ್ರಿಯಾಗಿದ್ದಾರೆ. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು. ಇದು ಮುಂದಿನ ಚುನಾವಣಾ ವೇಳೆ ಸಾಕಷ್ಟು ಪರಿಣಾಮ ಬೀರಲಿದೆ. ಈ ಬಗ್ಗೆ ಡಿ.ಕೆ. ಶಿವಕುಮಾರ್ ಅವರು ಗಮನ ಹರಿಸಬೇಕು ಎಂದು ಆಗ್ರಹಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಹಿಂದೆ ಬಂಗಾರಪ್ಪನವರು ಸುಗ್ರಿವಾಜ್ಞೆ ನೀಡಿದ್ದರೋ ಅದೇ ರೀತಿ ಸುಗ್ರೀವಾಜ್ಞೆ ತಂದು ನೀರನ್ನು ನಿಲ್ಲಿಸಬೇಕು. ನೀರು ನಿಲ್ಲಸಿಲ್ಲವೆಂದರೆ ಕೇವಲ ಕನ್ನಡಪರ ಹೋರಾಟಗಾರರಲ್ಲ, ರೈತರ ಪರ ಹೋರಾಟಗಾರರು, ಕಾರ್ಮಿಕ ಸಂಘಟನೆ, ಎಲ್ಲಾ ರಾಜಕೀಯ ಮುಖಂಡರು ಸೇರಿ ಕರ್ನಾಟಕ ಬಂದ್ ಮಾಡುತ್ತೇವೆ ಎಂದರು. ಸಂಘಟನೆ ಮುಖಂಡರಾದ ವಿನೋದ್‌ರಾಜ್, ಎಸ್.ಟಿ. ಸುರೇಶ್, ಸಿ.ಆರ್. ಪ್ರದೀಪ್ ಮಹೇಶ್‌ಗೌಡ, ನಾಗರಾಜು, ಜಯಕುಮಾರ್, ಶಶಿಕುಮಾರ್, ಚೇತನ್‌ಪ್ರಸನ್ನ, ಸಾಗರ್, ವಿನೋದ್, ನಂಜುಂಡಸ್ವಾಮಿ, ಪರಮೇಶ್ ಕರುನಾಡ ಸೇನೆ ರಾಜ್ಯ ಉಪಾಧ್ಯಕ್ಷ ಐಜೂರು ಎಂ.ಜಗದೀಶ್ ಮುಂತಾದವರಿದ್ದರು.

## ನಾಳೆ ಪಾತಿ ಫೌಂಡೇಶನ್ ನಿಂದ ಗೀತ ನಮನ



ಮೈಸೂರು: ನಗರದ ಪಾತಿ ಫೌಂಡೇಶನ್ ವತಿಯಿಂದ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಆ.2ರಂದು ಸಂಜೆ 5ಕ್ಕೆ ಎಸ್.ಜಾನಕಿ ಅವರಿಗೆ ಗೀತ ನಮನ ಹಮ್ಮಿಕೊಳ್ಳಲಾಗಿದೆ ಎಂದು ಎಂ.ಡಿ.ಪಾರ್ಥ ಸಾರಥಿ ಹೇಳಿದರು.

ಅತಿಥಿಗಳಾಗಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಆರ್. ರಘು ಕೌಟಿಲ್ಯ, ವೆಂಕಟ್ ರಾಮ್, ಇಳೈ ಆಳ್ವಾರ್ ಸ್ವಾಮೀಜಿ, ಶೆಲ್ವಪಿಳ್ಳೆ ಅಯ್ಯಂಗಾರ್ ಭಾಗವಹಿಸುವರು ಎಂದರು. ಗಾಯಕರಾದ ಕೃಷ್ಣಮೂರ್ತಿ, ಅಶ್ವಿನಿ, ಮಹೇಂದ್ರ, ನೀತೂ ಮಹೇಶ್, ಯೋಗೇಶ್ವರಿ, ಸೋಮಶೇಖರ್, ರಮೇಶ್ ಹಾಡುವರು ಎಂದು ತಿಳಿಸಿದರು.


**ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರುಜಿಲ್ಲೆ**
**E- Mail ID:ka.krnagar.tmc@gmail.com,**
**Phone(O): 08223-262242, Fax: 08223-262241**
ಸಂ:ಪುಸಕೃ/ಆವಿ/ಕೋ.ಪ್ರ/12/2026–27 ದಿನಾಂಕ: 29.07.2026

**ಕೊಟೇಷನ್ ಪ್ರಕಟಣೆ**

ಕೆ.ಆರ್.ನಗರ ಪುರಸಭೆಯ ವ್ಯಾಪ್ತಿಯಲ್ಲಿ ಇರುವ ನಮ್ಮ ಕ್ಲೀನಿಕ್‌ಗಳಿಗೆ ಕೆಳಕಂಡಂತಹ ಮುದ್ರಣಾ ಮತ್ತು ವೈದ್ಯಕೀಯ ಸಾಮಗ್ರಿಗಳನ್ನು ಸರಬರಾಜು ಮಾಡಲು ಆಸಕ್ತ, ಅಧಿಕೃತ ಸರಬರಾಜುದಾರರಿಂದ ದರ ಪಟ್ಟಿಗಳನ್ನು ಮುಚ್ಚಿದ ಲಕೋಟೆಯಲ್ಲಿ ದಿ:07.08.2026ರಂದು ಸಂಜೆ 5.30 ಗಂಟೆಗಳ ಒಳಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಸಲ್ಲಿಸಲು ಆಹ್ವಾನಿಸಿದೆ.

| ಕ್ರ.ಸಂ | ಸಾಮಗ್ರಿ ಹೆಸರು |
|---|---|
| 01 | ಒಪಿಡಿ ಮತ್ತು ಇತರೆ ನೋಂದಣಿ ಪುಸ್ತಕ |
| 02 | ಸರಿಯಾದ ಆಹಾರ ಸೇವನೆ ಕುರಿತ ಪೋಸ್ಟರ್‌ಗಳು |
| 03 | ಪೋಷಕಾಂಷಗಳ ಪಟ್ಟಿ |
| 04 | ಉಪಶಮನಕಾರಿ ಮತ್ತು ವೃದ್ದಾಪ್ಯ ಆರೈಕೆಗೆ ಸಂಬಂದಿಸಿದ ವೈದ್ಯಕೀಯ ಸಾಮಗ್ರಿಗಳು |
| 05 | ಯುಎವಿಕೆ ನಾಮ ಫಲಕ |

**ವಿಶೇಷ ಸೂಚನೆ:** ಮೇಲ್ಕಂಡ ಸಾಮಗ್ರಿಗಳ ವೈಶಿಷ್ಟ್ಯತೆ ಮತ್ತು ಪ್ರಮಾಣವನ್ನು ಕಛೇರಿಯಿಂದ ಪಡೆದುದರ ಪಟ್ಟಿ ಸಲ್ಲಿಸುವುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕೃಷ್ಣರಾಜನಗರ

DIPR/DDMYS/515/KSMCA/337/2026-27


# ಮಾನವ ಕಳ್ಳಸಾಗಣೆ ತಡೆಗೆ ಜಾಗೃತಿ

## ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ್ ಹೇಳಿಕೆ



ಗುಂಡ್ಲುಪೇಟೆ: ಮಾನವ ಕಳ್ಳಸಾಗಣೆಯು ಸಮಾಜದ ಮುಂದೆ ನಿಂತಿರುವ ಅತ್ಯಂತ ಗಂಭೀರ ಸವಾಲಾಗಿದ್ದು, ಯುವಜನರು ಯಾವುದೇ ಆಮಿಷಗಳಿಗೆ ಬಲಿಯಾಗದೆ ಕಾನೂನುಗಳ ಬಗ್ಗೆ ಸರಿಯಾದ ಅರಿವು ಹೊಂದಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ್ ಕರೆ ನೀಡಿದರು.

ಪಟ್ಟಣದ ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಿದ್ದ 'ವಿಶ್ವ ಮಾನವ ಕಳ್ಳಸಾಗಣೆ ತಡೆ ದಿನಾಚರಣೆ–2026' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿ ವರ್ಷ ಜುಲೈ 30ರಂದು ಆಚರಿಸಲಾಗುವ ಈ ದಿನಾಚರಣೆಯ ಮುಖ್ಯ ಉದ್ದೇಶವೇ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು, ಸಂತ್ರಸ್ತರ ಹಕ್ಕುಗಳನ್ನು ರಕ್ಷಿಸುವುದು ಹಾಗೂ ಅಪರಾಧ ತಡೆಯುವುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಮಂಜುಳ ಬಿ., ಸಿಡಿಪಿಒಗಳಾದ ಹೇಮಾವತಿ, ಸರಸ್ವತಿ, ಕಾಲೇಜಿನ ಪ್ರಾಂಶುಪಾಲೆ ಡಾ. ಮಹದೇವಮ್ಮ ಪಿ. ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಕಠಿಣ ಕಾನೂನುಗಳು, ವಿದ್ಯಾರ್ಥಿಗಳಿಗೆ ಸಲಹೆ

ಬಲವಂತದ ದುಡಿಮೆ, ವೇಶ್ಯಾವಾಟಿಕೆ, ಬಾಲಕಾರ್ಮಿಕ ಪದ್ಧತಿ, ಭಿಕ್ಷಾಟನೆ, ಅಂಗಾಂಗ ಕಳ್ಳಸಾಗಣೆ, ಬಲವಂತದ ವಿವಾಹ ಹಾಗೂ ಲೈಂಗಿಕ ಶೋಷಣೆಗಳು ಮಾನವ ಕಳ್ಳಸಾಗಣೆಯ ಪ್ರಮುಖ ರೂಪಗಳಾಗಿವೆ ಎಂದು ನ್ಯಾಯಾಧೀಶರು ವಿವರಿಸಿದರು. ಇವುಗಳನ್ನು ತಡೆಗಟ್ಟಲು ಭಾರತೀಯ ನ್ಯಾಯ ಸಂಹಿತೆ, ಮಕ್ಕಳ ರಕ್ಷಣಾ ಕಾಯ್ದೆ ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ ಸೇರಿದಂತೆ ಹಲವು ಕಠಿಣ ಕಾನೂನುಗಳು ಜಾರಿಯಲ್ಲಿವೆ. ವಿದ್ಯಾರ್ಥಿಗಳು ತಮ್ಮ ಮೊದಲ ಆದ್ಯತೆಯನ್ನು ಶಿಕ್ಷಣಕ್ಕೆ ನೀಡಬೇಕು. ಕುಡಿತ, ಮಾದಕ ವಸ್ತುಗಳ ವ್ಯಸನ, ಸಾಮಾಜಿಕ ಜಾಲತಾಣಗಳ ದುರ್ಬಳಕೆ ಹಾಗೂ ಸುಳ್ಳು ಉದ್ಯೋಗದ ಆಮಿಷಗಳಿಂದ ಸಂಪೂರ್ಣವಾಗಿ ದೂರವಿರಬೇಕು. ಪೋಷಕರು ಕೂಡ ತಮ್ಮ ಮಕ್ಕಳ ದಿನನಿತ್ಯದ ಚಟುವಟಿಕೆಗಳ ಮೇಲೆ ಹೆಚ್ಚಿನ ನಿಗಾ ವಹಿಸುವುದು ಅಗತ್ಯ ಎಂದು ಅವರು ಸಲಹೆ ನೀಡಿದರು.

### ಗಡಿ ಜಿಲ್ಲೆಗಳಲ್ಲಿ ಡಿಜಿಟಲ್ ಮೋಸ– ಮುನ್ನೆಚ್ಚರಿಕೆ

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು, ಗಡಿ ಜಿಲ್ಲೆಗಳಲ್ಲಿ ಕಾರ್ಮಿಕರು, ಮಹಿಳೆಯರು ಹಾಗೂ ಯುವಜನರನ್ನೇ ಗುರಿಯಾಗಿಸಿಕೊಂಡು ಮಾನವ ಕಳ್ಳಸಾಗಣೆ ಮತ್ತು ವಂಚನೆ ಪ್ರಕರಣಗಳು ಹೆಚ್ಚುತ್ತಿರುವುದು ಅತ್ಯಂತ ಆತಂಕಾರಿ ಬೆಳವಣಿಗೆಯಾಗಿದೆ ಎಂದರು. ಪ್ರಸ್ತುತ ಡಿಜಿಟಲ್ ಯುಗದಲ್ಲಿ ಆನ್ಲೈನ್ ಮೂಲಕವೂ ಮೋಸ ಜಾಲ ವಿಸ್ತರಿಸುತ್ತಿರುವುದರಿಂದ ಪ್ರತಿಯೊಬ್ಬರೂ ತೀವ್ರ ಎಚ್ಚರಿಕೆಯಿಂದ ಇರಬೇಕಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ಮಕ್ಕಳಿಗೆ ಸರ್ಕಾರದ ವಿವಿಧ ಉಚಿತ ಸಹಾಯವಾಣಿಗಳ ಸೌಲಭ್ಯವಿದ್ದು, ಯಾವುದೇ ಅನುಮಾನಾಸ್ಪದ ಘಟನೆಗಳು ಕಂಡುಬಂದಲ್ಲಿ ತಕ್ಷಣವೇ ಪೊಲೀಸ್ ಇಲಾಖೆಗೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ತಲುಪಿಸಬೇಕು ಎಂದು ಮನವಿ ಮಾಡಿದರು.

### ಹೆಣ್ಣು ಮಕ್ಕಳ ಮೇಲಿನ ಶೋಷಣೆ ತಡೆಗೆ ಜಾಗೃತಿ

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಅವರು ಮಾತನಾಡಿ, ಬಡತನ, ನಿರುದ್ಯೋಗ ಹಾಗೂ ಅನಕ್ಷರತೆಯನ್ನು ದುರುಪಯೋಗಪಡಿಸಿಕೊಂಡು ಕಿಡಿಗೇಡಿಗಳು ಮಾನವ ಕಳ್ಳಸಾಗಣೆ ನಡೆಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು. ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಮೇಲಿನ ಶೋಷಣೆ ಹೆಚ್ಚುತ್ತಿದ್ದು, ಇದನ್ನು ತಡೆಯಲು ಪೋಷಕರು ಮಕ್ಕಳ ಸುರಕ್ಷತೆ ಹಾಗೂ ಆನ್ಲೈನ್ ಮೋಸಗಳ ಬಗ್ಗೆ ಹೆಚ್ಚು ಜಾಗರೂಕರಾಗಿರಬೇಕು. ಇಡೀ ಸಮಾಜವೇ ಒಂದಾಗಿ ಮಾನವ ಕಳ್ಳಸಾ ಗಣೆ ವಿರುದ್ಧ ಜಾಗೃತಿ ಮೂಡಿಸಲು ಕೈಜೋಡಿ ಸಬೇಕು ಎಂದು ಅವರು ಕರೆ ನೀಡಿದರು.

## ಬಾಲ ಹಕ್ಕುಗಳ ರಕ್ಷಣೆಗೆ ಕಾನೂನು ಅರಿವು ಅಗತ್ಯ

▸▸ ವಕೀಲ ಸಿದ್ದಯ್ಯ

ಗುಂಡ್ಲುಪೇಟೆ,:–ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಬಾಲನ್ಯಾಯ ಕಾಯ್ದೆಯ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಸಮಗ್ರ ಅರಿವು ಮೂಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ವಕೀಲ ಸಿದ್ದಯ್ಯ ಹೇಳಿದರು.

ತಾಲೂಕಿನ ಹುಂಡೀಪುರ ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆ. ತಾಲೂಕು ಕಾನೂನು ಸೇವೆಗಳ ಸಮಿತಿ ಹಾಗೂ ವಕೀಲರ ಘಟಕ, ಗುಂಡ್ಲುಪೇಟೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬಾಲನ್ಯಾಯ ಮತ್ತು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು. ಮಕ್ಕಳಿಗೆ ಶಿಕ್ಷಣ, ರಕ್ಷಣೆ ಮತ್ತು ಗೌರವಯುತ ಜೀವನ ನಡೆಸುವ ಹಕ್ಕುಗಳನ್ನು ಕಾನೂನು ಒದಗಿಸಿದ್ದು, ಮಕ್ಕಳ ಮೇಲಿನ ದೌರ್ಜನ್ಯ, ಬಾಲಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ ಹಾಗೂ ಇತರೆ ಶೋಷಣೆಯಂತಹ ಪ್ರಕರಣಗಳು ಕಂಡುಬಂದರೆ ತಕ್ಷಣ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು. ನಂತರ ಮಾತನಾಡಿದ ವಕೀಲ ಎನ್ ಅರವಿಂದ್ ಕುಮಾರ್ ವಿದ್ಯಾರ್ಥಿಗಳು ತಮ್ಮ ಹಕ್ಕುಗಳ ಜೊತೆಗೆ ಕರ್ತವ್ಯಗಳ ಬಗ್ಗೆಯೂ ಅರಿವು ಹೊಂದಬೇಕು. ಕಾನೂನು ಜ್ಞಾನವು ಉತ್ತಮ ನಾಗರಿಕರನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ವೆಂಕಟೇಶ್.ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯನಿ ಸುಮ ಭಜರಂಗಿ .,ಸಿಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ರಾಮಲಿಂಗಾ ರೆಡ್ಡಿಗೆ ಅ.5ರಂದು ಬಿರುದು ಪ್ರದಾನ



ಸರಗೂರು/ಎಚ್.ಡಿ.ಕೋಟೆ: ತಾಲೂಕಿನ ಅಧಿದೇವತೆ ಶ್ರೀಚಿಕ್ಕದೇವಮ್ಮನ ಬೆಟ್ಟದ ಪಾರುಪತ್ತೇದಾರ್ ಮಹದೇವ ಸ್ವಾಮಿ ಸೇರಿದಂತೆ ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರು, ಆಗಮಿಕರು ಮತ್ತು ನೌಕರರ ಸಂಘದ ನಿಯೋಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಿದೆ.

ಆ.5ರಂದು ಬೆಂಗಳೂರಿನ ವಸಂತನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬೆ.11ಗಂಟೆಗೆ ನಡೆಯುವ ಕರ್ನಾಟಕ ಮುಜರಾಯಿ ದೇವಾಲಯಗಳ ಅರ್ಚಕರ ಬೃಹತ್ ಸಮಾವೇಶ, ಮುಜರಾಯಿ ಇಲಾಖೆ ಮಾಜಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಅಯೋಜಿಸಿರುವ ಅಭಿನಂದನಾ ಸಮಾರಂಭದ ಆಹ್ವಾನ ಪತ್ರಿಕೆ ನೀಡಿ ಆಹ್ವಾನಿಸಲಾಗಿದೆ.

ರಾಮಲಿಂಗಾರೆಡ್ಡಿ ಅವರು, 1200 ಅರ್ಚಕರು ಉತ್ತರ ಭಾರತದ ಪುಣ್ಯಕ್ಷೇತ್ರಗಳಿಗೆ ತೆರಳಲು ಅನುವುಮಾಡಿಕೊಟ್ಟಿದ್ದಾರೆ.ಅರ್ಚಕರ ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ ನೀಡಲು ಆದೇಶಿಸಿದ್ದಾರೆ. ಮರಣ ಹೊಂದಿದ ಸಿ ವರ್ಗದ ದೇವಾಲಯದ ಅರ್ಚಕರ ಕುಟುಂಬಗಳಿಗೆ 2ಲಕ್ಷರೂ.ಪರಿಹಾರದ ಮೊತ್ತ ನೀಡಿದ್ದಾರೆ. ಖಾಯಿಲೆಗಳಿಂದ ಬಳಲುವ, ವಯಸ್ಸಾದ ಅರ್ಚಕರ ಹುದ್ದೆಯನ್ನು ತಮ್ಮ ಮಕ್ಕಳಿಗೆ ವರ್ಗಾವಣೆ ಮಾಡುವ ಅಧಿಕಾರವನ್ನು ತಹಶೀಲ್ದಾರ್ ಗೆ ನೀಡಿದ್ದಾರೆ. ವಿವಿಧ ಕೆಲಸ ಕಾರ್ಯಕ್ಕೆ ಅರ್ಚಕರು ವಿಧಾನ ಸೌಧ, ವಿಕಾಸ ಸೌಧಕ್ಕೆ ಅಲೆಯುವುದನ್ನು ತಪ್ಪಿಸಲು ಧಾರ್ಮಿಕ ಸೌಧ ಸ್ಥಾಪಿಸಿದ್ದಾರೆ. ಶಿಥಿಲಗೊಂಡಿದ್ದ ದೇವಾಲಯಗಳ ಜೀರ್ಣೋದ್ಧಾರಕ್ಕೆ ಅನುದಾನ ನೀಡಿದ್ದಾರೆ. ರಾಜ್ಯದ ದೇವಾಲಯಗಳಿಗೆ ಸೇರಿದ್ದ ಸಾವಿರಾರು ಎಕರೆ ಒತ್ತುವರಿ ಜಮೀನನ್ನು ತೆರವುಗೊಳಿಸಿ ಭೂ ವರಹ ಯೋಜನೆ ಮೂಲಕ ಕಾಂಪೌಂಡ್ ನಿರ್ಮಿಸಿದ್ದಾರೆ. ಆಗಮ ವಿದ್ಯಾರ್ಥಿಗಳಿಗಾಗಿ ಘಟಿಕೋತ್ಸವ ಮಾಡಲು ಆದೇಶಿಸಿದ್ದಲ್ಲದೇ, ಮೈಸೂರು, ಬೆಂಗಳೂರು ನಗರಗಳಲ್ಲಿ ವಿದ್ಯಾರ್ಥಿಗಳಿಗೆ ಆಗಮ ಪ್ರಮಾಣಪತ್ರ ನೀಡುವುದರೊಂದಿಗೆ ಹಿಂದಿನ ಯಾವ ಮುಜರಾಯಿ ಸಚಿವರು ಮಾಡದ ಕೆಲಸವನ್ನು ಸಚಿವ ರಾಮಲಿಂಗಾರೆಡ್ಡಿ ಮಾಡಿದ್ದಾರೆ.

ಆದ್ದರಿಂದ, ರಾಜ್ಯ ಅರ್ಚಕರ ಕಣ್ಮಣಿ ಎಂಬ ಬಿರು ದನ್ನು, ರಾಜ್ಯದ 35000 ಅರ್ಚಕರು ಸಚಿವರಿಗೆ ನೀಡುತ್ತಿದ್ದೇವೆ ಎಂದು ಪಾರುಪತ್ತೇದಾರ್ ಮಹದೇವಸ್ವಾಮಿ ತಿಳಿಸಿದರು. ಸಂಘದ ರಾಜ್ಯಾಧ್ಯಕ್ಷ ಆಗಮ ವಿದ್ವಾನ್ ಶ್ರೀವತ್ಸ, ಉಪಾಧ್ಯಕ್ಷರಾದ ಚಾಮುಂಡಿ ಬೆಟ್ಟದ ಶಶಿಶೇಖರ ದೀಕ್ಷಿತ್, ಬಿ.ಕೆ.ರಾಮಚಂದ್ರ, ತಪ್ಪೇಸ್ವಾಮಿ, ವಿ.ರಾಮತೀರ್ಥನ್, ಕಾರ್ಯದರ್ಶಿ ಕೆ.ವಿ.ಸುರೇಶ್ ಮೂರ್ತಿ, ಡಾ.ಗುರುಮೂರ್ತಿ ದೀಕ್ಷಿತ್, ರಾಜದಾಸ್ ಆಚಾರ್ಯ, ಸದಾಶಿವ ಆರಾಧ್ಯ, ಷಣ್ಮುಗಪ್ಪ, ಜನಾರ್ಧನ ಹೆಬ್ಬಾರ್, ಮಲ್ಲಿಕಾರ್ಜುನ್ ಸ್ವಾಮಿ, ವಿಶ್ವನಾಥ್ ಸೇರಿದಂತೆ ಮತ್ತಿತರರಿದ್ದಾರೆ.

# ಸೈನಿಕರ ವೇಷದಲ್ಲಿ ವಿದ್ಯಾರ್ಥಿಗಳ ಮೆರವಣಿಗೆ



ಚಾಮರಾಜನಗರ, ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಸೇವಾ ಭಾರತಿ ಕನ್ನಡ ಮಾಧ್ಯಮ ಪ್ರೌಢ ಶಾಲೆಯ ವತಿಯಿಂದ ಸುಮಾರು 60 ವಿದ್ಯಾರ್ಥಿಗಳಿಗೆ ಭಾರತೀಯ ಸೈನಿಕರ ವೇಷಭೂಷಣ ತೊಡಿಸಿ ನಗರದ ಪ್ರಮುಖ ಬೀದಿಗಳಲ್ಲಿ ದೇಶಭಕ್ತಿ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಗೆ ಸಂಸ್ಥೆಯ ಕಾರ್ಯದರ್ಶಿ ವಾಸುದೇವರಾವ್ ಹಾಗೂ ಶಾಲೆಯ ಮುಖ್ಯೋಪಾಧ್ಯಾಯ ಶ್ರೀನಿವಾಸ್ ಚಾಲನೆ ನೀಡಿದರು. ನಂತರ ವಿದ್ಯಾರ್ಥಿಗಳು ಸೈನಿಕರ ವೇಷದಲ್ಲಿ ಶಿಸ್ತುಬದ್ಧವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಾರ್ವಜನಿಕರ ಗಮನ ಸೆಳೆದರು.

ಕಾರ್ಗಿಲ್ ಯುದ್ಧದಲ್ಲಿ ದೇಶ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿದ ವೀರ ಯೋಧರಿಗೆ ಗೌರವ ನಮನ ಸಲ್ಲಿಸುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ರಾಷ್ಟ್ರಪ್ರೇಮ ಹಾಗೂ ಸೈನಿಕರ ತ್ಯಾಗದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಈ ಮೆರವಣಿಗೆಯನ್ನು ಆಯೋಜಿಸಲಾಗಿತ್ತು. ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿ ವಿದ್ಯಾರ್ಥಿ ಗಳನ್ನು ಪ್ರೋತ್ಸಾಹಿಸಿದರು.

ಕಾಡಾಧ್ಯಕ್ಷ ಪಿ.ಮರಿಸ್ವಾಮಿ ಬಣ್ಣನೆ | ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ ಹಾಗೂ ಗಿಡ ನೆಡುವ ಕಾರ್ಯಕ್ರಮ

# ಧ್ರುವನಾರಾಯಣ್ ದೇಶ ಕಂಡ ಅತ್ಯಂತ ಸರಳ, ಸಜ್ಜನ ರಾಜಕಾರಣಿ



ಚಾಮರಾಜನಗರ: ದಿವಂಗತ ಆರ್. ಧ್ರುವನಾರಾಯಣ್ ಅವರು ದೇಶ ಕಂಡ ಅತ್ಯಂತ ಸರಳ ಹಾಗೂ ಸಜ್ಜನಿಕೆಯ ಅಜಾತಶತ್ರು ರಾಜಕಾರಣಿಯಾಗಿದ್ದರು ಎಂದು ಕಾಡಾಧ್ಯಕ್ಷ ಪಿ.ಮರಿಸ್ವಾಮಿ ಗುಣಗಾನ ಮಾಡಿದರು. ನಗರದ ರೋಟರಿ ಭವನದಲ್ಲಿ ಧ್ರುವನಾರಾಯಣ್ ಅಭಿಮಾನಿಗಳ ಬಳಗ ಹಾಗೂ ರೋಟರಿ ಸಂಸ್ಥೆಯ ವತಿಯಿಂದ ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರ 65ನೇ ಜನ್ಮದಿನೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ ಹಾಗೂ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಎರಡು ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದರಾಗಿ, ಶಾಸಕರಾಗಿ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಧ್ರುವನಾರಾಯಣ್ ಅವರು ಪಕ್ಷಾತೀತವಾಗಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಅವರ ಶಿಸ್ತು, ಪಕ್ಷ ಸಂಘಟನೆ ಮತ್ತು ಜಿಲ್ಲೆಯ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆಗಳು ಎಂದಿಗೂ ಸ್ಮರಣೀಯ ಎಂದರು.

### ದೂರದೃಷ್ಟಿಯ ನಾಯಕ ಮತ್ತು ಸಮಾಜಮುಖಿ ಆಚರಣೆ

ರೋಟರಿ ಸಂಸ್ಥೆಯ ಮಾಜಿ ಜಿಲ್ಲಾ ಗವರ್ನರ್ ಡಾ. ನಾಗಾರ್ಜುನ ಮಾತನಾಡಿ, ಧ್ರುವನಾರಾಯಣ್ ಅವರೊಬ್ಬ ದೂರದೃಷ್ಟಿ ಹೊಂದಿದ್ದ ನಾಯಕರಾಗಿದ್ದು, ಸಿಎಸ್‌ಆರ್ ಅನುದಾನದಲ್ಲಿ 2.2 ಕೋಟಿ ರೂಪಾಯಿ ಬಿಡುಗಡೆಗೊಳಿಸಿ ಜಿಲ್ಲೆಯ ಎಲ್ಲಾ ಶಾಲೆಗಳಲ್ಲೂ ಶೌಚಾಲಯ ನಿರ್ಮಿಸಿಕೊಟ್ಟಿದ್ದರು. ಅವರ ನೆನಪಿನಲ್ಲಿ ಅಬಿಮಾನಿಗಳ ಬಳಗವು ಇಂತಹ ಅರ್ಥಪೂರ್ಣ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು. ನಂತರ ಮಾತನಾಡಿದ ಅಭಿಮಾನಿ ಬಳಗದ ಅಧ್ಯಕ್ಷ ಕಾಗಲವಾಡಿ ಚಂದ್ರು, ಕಳೆದ 18 ವರ್ಷಗಳಿಂದ ಧ್ರುವನಾರಾಯಣ್ ಅವರ ಹುಟ್ಟುಹಬ್ಬವನ್ನು ಜನಪರ ಹಾಗೂ ಸಾಮಾಜಿಕ ಕಾರ್ಯಗಳ ಮೂಲಕ ಆಚರಿಸಿಕೊಂಡು ಬರಲಾಗುತ್ತಿದೆ. ಅದರ ಭಾಗವಾಗಿ ಈ ವರ್ಷ ಆರೋಗ್ಯ ತಪಾಸಣೆ, ಗಿಡ ನೆಡುವುದು ಹಾಗೂ ಡಯಾಲಿಸಿಸ್ ಕೇಂದ್ರಕ್ಕೆ ನೆರವು ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಜಿ.ಪಂ. ಮಾಜಿ ಸದಸ್ಯ ಸದಾಶಿವಮೂರ್ತಿ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಮಾಜಿ ಶಾಸಕರು, ಸ್ಥಳೀಯ ಜನಪ್ರತಿನಿಧಿಗಳು, ಕಾಂಗ್ರೆಸ್ ಪ್ರಮುಖರು ಹಾಗೂ ಧ್ರುವನಾರಾಯಣ್ ಅಭಿಮಾನಿ ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

### 65 ಗಿಡಗಳ ನೆಡುವಿಕೆ, ಉಚಿತ ಆರೋಗ್ಯ ಶಿಬಿರ

ಕಾರ್ಯಕ್ರಮದ ಅಂಗವಾಗಿ ಧ್ರುವನಾರಾಯಣ್ ಅವರ ಅಭಿಮಾನಿಗಳ ಬಳಗ, ರೋಟರಿ ಸಂಸ್ಥೆ ಹಾಗೂ ಈಶ್ವರಿ ಟ್ರಸ್ಟ್ ವತಿಯಿಂದ ನಗರದ ವರ್ತಕರ ಭವನದಿಂದ ರಾಮಸಮುದ್ರದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಯವರೆಗಿನ ರಸ್ತೆಯ ಎರಡೂ ಬದಿಗಳಲ್ಲಿ ಅವರ 65ನೇ ಜನ್ಮದಿನದ ಸಂಕೇತವಾಗಿ 65 ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಇದರೊಂದಿಗೆ ರೋಟರಿ ಸಂಸ್ಥೆ ನಡೆಸುತ್ತಿರುವ ಡಯಾಲಿಸಿಸ್ ಕೇಂದ್ರಕ್ಕೆ ಧ್ರುವನಾರಾಯಣ್ ಅವರ ನೆನಪಿನಲ್ಲಿ ಒಂದು ದಿನದ ಸಂಪೂರ್ಣ ವೆಚ್ಚವನ್ನು ಕೊಡುಗೆಯಾಗಿ ನೀಡಲಾಯಿತು. ಶಿಬಿರದಲ್ಲಿ ರಕ್ತಹೀನತೆ (ಅನಿಮಿಯಾ) ತಪಾಸಣೆ ನಡೆಸಿ ಉಚಿತವಾಗಿ ಔಷಧಿ ವಿತರಿಸಲಾಯಿತು. ಈ ಉಚಿತ ಆರೋಗ್ಯ ತಪಾಸಣಾ ಶಿಬಿರದ ಪ್ರಯೋಜನವನ್ನು ಒಟ್ಟು 268 ಮಂದಿ ಪಡೆದುಕೊಂಡರು.

# ಹಳೆಯ ದ್ವೇಷದ ಹಿನ್ನೆಲೆ ಲಾಂಗ್ ಹಿಡಿದು ಹಲ್ಲೆಗೆ ಯತ್ನ

### ಯುವಕನ ವಿರುದ್ಧ ದೂರು

ಗುಂಡ್ಲುಪೇಟೆ: ತಾಲ್ಲೂಕಿನ ಪಂಜನಹಳ್ಳಿ ಗ್ರಾಮದಲ್ಲಿ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಲಾಂಗ್ ಹಿಡಿದು ಹಲ್ಲೆಗೆ ಯತ್ನಿಸಿದ ಆರೋಪದಡಿ ಯುವಕನ ವಿರುದ್ಧ ಗುಂಡ್ಲುಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂಜನಹಳ್ಳಿ ಗ್ರಾಮದ ಮುಕುಂದ ವಿ. (ವೆಂಕಟಸ್ವಾಮಿ ಪುತ್ರ) ಅವರು ನೀಡಿದ ದೂರಿನ ಪ್ರಕಾರ, ಜುಲೈ 28ರಂದು ಸಂಜೆ ಸುಮಾರು 4.45ಕ್ಕೆ ಅದೇ ಗ್ರಾಮದ ಭರತ್ (ಕರಿಶೆಟ್ಟಿ ಪುತ್ರ) ಲಾಂಗ್ ಹಿಡಿದು ಅವರ ಮನೆಯ ಬಳಿ ಬಂದು, ಈ ಹಿಂದೆ ತನ್ನ ವಿರುದ್ಧ ದೂರು ನೀಡಿ ಜೈಲಿಗೆ ಕಳುಹಿಸಿದ್ದೀಯೆಂದು ಆರೋಪಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ, 'ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಾ ಹಲ್ಲೆಗೆ ಯತ್ನಿಸಿದ್ದಾನೆ ಎನ್ನಲಾಗಿದೆ. ಈ ವೇಳೆ ಜಗಳ ಬಿಡಿಸಲು ಬಂದ ಮುಕುಂದ ಅವರ ಚಿಕ್ಕಮ್ಮ ಮಹದೇವಮ್ಮ ಅವರುಗಳ ಮೇಲೂ ಆರೋಪಿಯು ಹಲ್ಲೆ ನಡೆಸಿ, ಮುಖ, ಕೆನ್ನೆ, ತುಟಿ ಹಾಗೂ ಮೂಗಿನ ಭಾಗಕ್ಕೆ ಗಾಯಪಡಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ನಂತರ ಮುಕುಂದ ಅವರ ಪತ್ನಿ ಮಲ್ಲಿಕಾ ಹಾಗೂ ತಂದೆ ವೆಂಕಟಸ್ವಾಮಿ ಮಧ್ಯಪ್ರವೇಶಿಸಿ ಜಗಳವನ್ನು ಶಾಂತಗೊಳಿಸಿದ್ದಾರೆ ಎನ್ನಲಾಗಿದೆ.

ಗಾಯಗೊಂಡ ಮಹದೇವಮ್ಮ ಅವರನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದ್ದು, ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಇದೇ ಆರೋಪಿಯು ಈ ಹಿಂದೆಯೂ ತಮ್ಮ ಕುಟುಂಬದವರೊಂದಿಗೆ ಗಲಾಟೆ ನಡೆಸಿ ಬೆದರಿಕೆ ಹಾಕಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಘಟನೆಯ ಬಳಿಕ ಗ್ರಾಮಸ್ಥರು ನ್ಯಾಯ ಪಂಚಾಯಿತಿ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಸಲಹೆ ನೀಡಿದ್ದರಿಂದ ದೂರು ನೀಡಲು ವಿಳಂಬವಾಯಿತು. ಆದರೆ ಆರೋಪಿಯು ಗ್ರಾಮದ ಹಿರಿಯರ ಮಾತಿಗೂ ಒಪ್ಪದ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ ಎಂದು ಮುಕುಂದ ತಿಳಿಸಿದ್ದಾರೆ. ಈ ಸಂಬಂಧ ಭರತ್ ವಿರುದ್ಧ ಗುಂಡ್ಲುಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ವಿವೇಕ ಸ್ಮಾರಕ ಉದ್ಘಾಟನೆಗೆ ಮೋದಿ ಆಗಮಿಸದಿರಲು ಆಗ್ರಹ



ಮೈಸೂರು: ಮೈಸೂರು ಸಂಸ್ಥಾನದ ಮೊದಲ ಹೆಣ್ಣು ಮಕ್ಕಳ ಶಾಲೆ ಮುಚ್ಚಿಸಿ, ನಿರ್ಮಾಣ ಮಾಡಿರುವ ವಿವೇಕ ಸ್ಮಾರಕವನ್ನು ಉದ್ಘಾಟಿಸಲು ಪ್ರಧಾನ ಮಂತ್ರಿಗಳು ಮೈಸೂರಿಗೆ ಆಗಮಿಸಬಾರದು ಎಂದು ಎಐಡಿಎಸ್ಒ, ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ರಾಮಕೃಷ್ಣ ಆಶ್ರಮಕ್ಕೆ ಧಿಕ್ಕಾರ, ಕನ್ನಡ ದ್ರೋಹಿಗಳು, ವಚನ ಭ್ರಷ್ಟ ಸ್ವಾಮೀಜಿಗಳಿಗೆ ಧಿಕ್ಕಾರ, ಸ್ವಾಮೀ ವಿವೇಕಾನಂದ ಹೆಸರಿಗೆ ಮಸಿ ಬಳಿದಿದ್ದಾರೆ, ಬೇರೆ ರಾಜ್ಯದವರಿಗೆ ಕನ್ನಡ ಶಾಲೆ ಮಾರಾಟ ಮಾಡಿದ್ದಾರೆ ಎಂಬಿತ್ಯಾದಿ ನಾಮಫಲಕ ಹಿಡಿದು ಆಕ್ರೋಶ ಹೊರಹಾಕಿದರು. ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮೈಸೂರಿನ ಪ್ರಥಮ ಮಹಿಳಾ ಶಾಲೆ ಉಳಿಸಲು 14 ವರ್ಷದಿಂದ ನಿರಂತರವಾಗಿ ವಿವಿಧ ಸಂಘಟನೆ ಪ್ರಗತಿಪರರು, ಸಾಹಿತಿಗಳು ಎಲ್ಲರೂ ಒಗ್ಗೂಡಿ ನಡೆಸಿದ್ದರೂ, ಮೈಸೂರು ಸಂಸ್ಥಾನದ ನಾಲ್ವಡಿ ಅವರ ತಾಯಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ನಿರ್ಮಿಸಿದ್ದ ಶಾಲೆಯನ್ನು ಇಂದು ರಾಜಕಾರಣಿಗಳು ಸ್ವಾಮೀಜಿಗಳು ಕನ್ನಡ ದ್ರೋಹಿಗಳು ಮಾರಾಟ ಮಾಡಿದ್ದಾರೆ ಎಂದು ಕಿಡಿಕಾರಿದರು.

ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಹಣ ಮಾಡಲು 7 ಕೋಟಿ ಕನ್ನಡಿಗರಿಗೆ ದ್ರೋಹ ಮಾಡಿದ್ದಾರೆ. ಬೇರೆ ರಾಜ್ಯದಿಂದ ಬಂದವರು ಇಲ್ಲಿ ಕನ್ನಡ ಶಾಲೆಯನ್ನು ಮುಚ್ಚಿಸಿ ಸ್ಮಾರಕ ಮಾಡಿದ್ದಾರೆ. ಮೋದಿ ಅವರು ಇದರ ಉದ್ಘಾಟನೆಗೆ ಬರಬಾರದು. ಮತ್ತೊಂದೆಡೆ ಮೈಸೂರು ಸಂಸ್ಥಾನದ ಕೊನೆಯ ದತ್ತು ಪುತ್ರ ಯದುವೀರ್ ಕೃಷ್ಣರಾಜ ಒಡೆಯರ್ ಅವರು ಸಾಥ್ ನೀಡಬಾರದು ಎಂದು ಆಗ್ರಹಿಸಿದರು.

ರಾಜ್ಯ ಅತ್ಯಂತ ಶ್ರೀಮಂತ ಮಠ ಸುತ್ತೂರು ಶ್ರೀಗಳು, ಮಾಜಿ ಸಂಸದ ಶ್ರೀನಿವಾಸ್ ಸಮ್ಮುಖದಲ್ಲಿ ಎರಡು ಸಭೆ ನಡೆಸಲಾಯಿತು. ಅದರಲ್ಲಿ 50:50 ಎಂದು ತೀರ್ಮಾನ ಮಾಡಿ ಈಗ ರಾಮಕೃಷ್ಣ ಮಠದವರು ವಚನ ಭ್ರಷ್ಟರಾಗಿದ್ದಾರೆ ಎಂದರು.

ನಾಳೆ(ಆ.1)ಪೊಲೀಸರು ಮೋದಿ ಅವರನ್ನು ಭೇಟಿ ಮಾಡಲು ಅವಕಾಶ ನೀಡುವುದಿಲ್ಲ. ಆದ್ದರಿಂದ ಪೊಲೀಸರು, ಜಿಲ್ಲಾಡಳಿತ ನಮಗೆ ಎನ್‌ಟಿ ಎಂಎಸ್ ಶಾಲೆಯ ಇತಿಹಾಸವನ್ನು ಮೋದಿ ಅವರಿಗೆ ತಿಳಿಸಲು ಭೇಟಿ ಅವಕಾಶ ಕಲ್ಪಿಸಿಕೊಡಬೇಕು ಎಂದು ಆಗ್ರಹಿಸಿದರು. ಈ ವೇಳೆ ಕನ್ನಡ ಪರ ಹೋರಾಟಗಾರ ಮೋಹನ್ ಕುಮಾರ್‌ಗೌಡ ಮಾತನಾಡಿ, ರಾಷ್ಟ್ರದ ಪ್ರಧಾನ ಮಂತ್ರಿಗಳೇ ನೀವು ನೀಡಿದಂತ ಸ್ಲೋಗನ್ ಭೇಟಿ ಪಡಾವೋ ಬೇಟಿ ಬಚಾವೋ ಅನ್ನೋ ವಾಗ್ದಾನದಂತೆ ಇಂದು ರಾಮಕೃಷ್ಣ ಆಶ್ರಮ ಏಷ್ಯಾ ಖಂಡದಲ್ಲಿ ಪ್ರಥಮವಾಗಿ ಹೆಣ್ಣು ಮಕ್ಕಳ ಶಾಲೆಯನ್ನು ಕಿತ್ತುಕೊಂಡು ಸಂಧಾನ ಸಭೆ ನಾಲ್ಕು ಬಾರಿ ಸಂಧಾನ ನಡೆದು ಅಂತಿಮವಾಗಿ ಅರ್ಧ ಜಾಗದಲ್ಲಿ ಶಾಲೆ ಅರ್ಧ ಜಾಗದಲ್ಲಿ ವಿವೇಕಾನಂದ ಸ್ಮಾರಕ ಎಂದು ವಾಗ್ದಾನ ನೀಡಿ ಇಂದು ಮಾತಿಗೆ ತಪ್ಪಿ ವಚನಭ್ರಷ್ಟರಾಗಿದ್ದಾರೆ ಇಂತಹ ವಚನಭ್ರಷ್ಟರ ಸಂಸ್ಥೆಯನ್ನು ಉದ್ಘಾಟಿಸಲು ಆಗಮಿಸುತ್ತಿರುವ ಪ್ರಧಾನ ಮಂತ್ರಿಗಳು ಈ ವಿಚಾರ ತಮ್ಮ ಗಮನಕ್ಕೆ ಇಲ್ಲವೆಂದು ಭಾವಿಸಿರುತ್ತೇವೆ ಈ ವಿಚಾರವನ್ನು ತಿಳಿದುಕೊಂಡು ಉದ್ಘಾಟನೆ ಕಾರ್ಯಕ್ರಮಕ್ಕೆ ಭಾಗವಹಿಸದೇ ಇರುವುದು ಸೂಕ್ತ ಎಂದರು.

ಪ್ರತಿಭಟನೆಯಲ್ಲಿ ರೈತ ಸಂಘದ ಬಸವರಾಜ್, ಪಿ.ಮರಂಕಯ್ಯ, ರವಿ ಗೌಡ, ಭೂಮಿ ನಾಗರಾಜ್, ರವೀಂದ್ರ, ಚೋರನಹಳ್ಳಿ ಶಿವಣ್ಣ, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಪರಶುರಾಮ್, ಬಾಲಕೃಷ್ಣ, ಪ್ರಕಾಶ್ ಕೆ.ಆರ್.ನಗರ, ಮನ್ಸೂರ್ ಅಹ್ಮದ್, ಸವಿತಾ ಮಲ್ಲೇಶ್, ಕಾಳಪ್ಪ, ರಮೇಶ್, ಬಿ.ಮಹದೇವ್, ಸಿದ್ದೇಗೌಡ, ಮಾದಪ್ಪ, ಗೋಪಾಲ್ ಕೃಷ್ಣ, ರಮೇಶ್, ಪುಟ್ಟರಾಜು, ಗೋವಿಂದಯ್ಯ ಪಾಲ್ಗೊಂಡಿದ್ದರು.

# ಗೆಲುವು-ಸೋಲು ಶಾಶ್ವತವಲ್ಲ

## ಸಿ.ಎಂ.ಲಿಂಗಪ್ಪ ಕಿವಿಮಾತು | ತಾಲ್ಲೂಕು ಮಟ್ಟದ ಕ್ರೀಡಾಕೂಟದ ಉದ್ಘಾಟನೆ

ರಾಮನಗರ: ಗೆಲುವು ಮುಖ್ಯವಲ್ಲ. ಸೋಲು ಶಾಶ್ವತವಲ್ಲ. ಕ್ರೀಡಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವಿಕೆ ಸಂತೋಷ ಮತ್ತು ಜೀವನಾನುಭವ ಕೊಡುತ್ತದೆ ಎಂದು ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಹೇಳಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ, ಬಿಡದಿ ಜ್ಞಾನ ವಿಕಾಸ ವಿದ್ಯಾ ಸಂಘ ಹಾಗೂ ಶ್ರೀ ಬಸವೇಶ್ವರಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು ಸಂಯುಕ್ತವಾಗಿ ಏರ್ಪಡಿಸಿದ್ದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರ ರಾಮನಗರ ತಾಲ್ಲೂಕು ಮಟ್ಟದ ಕ್ರೀಡಾಕೂಟದ ಉದ್ಘಾಟನಾ ಸನಾರಂಭದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

### ಕ್ರೀಡಾ ಸ್ಪರ್ಧೆಗಳಿಂದ ಜೀವನಾನುಭವ



### ಗೆಲ್ಲುವ ಛಲವನ್ನು ಸೋಲು ತಂದುಕೊಡುತ್ತದೆ

ಗೆಲ್ಲಲು ಚಾಕಚಕ್ಯತೆ, ಧೈರ್ಯ, ಮುನ್ನುಗ್ಗುವ ಮನಸ್ಸು ಬಹಳ ಅಗತ್ಯ. ಸೋಲು ಗೆಲ್ಲುವ ಛಲ ತಂದು ಕೊಡುತ್ತದೆ ಎಂದು ನೆರೆದಿದ್ದ ಕ್ರೀಡಾ ಸ್ಪರ್ಧಿಗಳನ್ನು ಪ್ರೋತ್ಸಾಹಿಸಿದರು.

ಕ್ರೀಡಾ ಸ್ಪರ್ಧೆಗಳಲ್ಲಿ ತರಬೇತಿ, ನಿರಂತರ ಅಭ್ಯಾಸ ಮಾಡಿ ಆಟವುದು ಗೆಲ್ಲುವ ಅವಕಾಶ ಹೆಚ್ಚಿಸುತ್ತದೆ. ಕ್ರೀಡಾಪಟುಗಳು ಉತ್ತಮ ದೈಹಿಕ ಸಾಮರ್ಥ್ಯ ಹೊಂದಿರುತ್ತಾರೆ. ಯಾವುದೇ ಶ್ರಮದಾಯಕ ಕೆಲಸಕ್ಕೆ ಸಮರ್ಥರಾಗುತ್ತಾರೆ. ಇತರರಿಗಿಂತ ಕ್ರೀಡಾಪಟುಗಳಲ್ಲಿ ಕರ್ತವ್ಯ ನಿಷ್ಠೆ ಹೆಚ್ಚಾಗಿರುತ್ತದೆ. ದೇಶ ಕಟ್ಟುವ ಕಾಯಕದಲ್ಲಿ ಕ್ರೀಡಾ ಪಟುಗಳಿಗೆ ಗೌರವದ ಸ್ಥಾನವಿದೆ. ಸೋಲು ಗೆಲುವನ್ನು ಲೆಕ್ಕಿಸದೆ ಕ್ರೀಡಾ ಪಂದ್ಯಗಳಲ್ಲಿ ಪಾಲ್ಗೊಂಡು ಸ್ವ ಪ್ರಯೋಜನ ಪಡೆಯುವ ಹಾಗೂ ರಾಜ್ಯ ಮತ್ತು ರಾಷ್ಟ್ರಕ್ಕೆ ನೆರವಾಗುವತ್ತ ಸಾಗಬೇಕು ಎಂದು ತಿಳಿಸಿದರು.

### ಕ್ರೀಡೆ: ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಸಹಕಾರಿ

ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ) ಮಾತನಾಡಿ ಆತ್ಮವಿಶ್ವಾಸ ಬೆಳೆಸಿಕೊಳ್ಳಲು, ಸ್ವಂತ ಪ್ರತಿಭೆಯನ್ನು ಪ್ರದರ್ಶಿಸಿ ಬಹುಮಾನಗಳಿಸಲು ಕ್ರೀಡೆ ಸಹಕಾರಿ. ಎಲ್ಲರೂ ಗೆಲ್ಲಲಾಗಲ್ಲ. ಸಮಯಕ್ಕೆ ಸರಿಯಾಗಿ ಶ್ರಮಿಸುವವರು ಗೆಲ್ಲುತ್ತಾರೆ. ಸೋಮಾರಿಗಳಿಗೆ ಅದು ಸಾಧ್ಯವಿಲ್ಲ. ಎದುರಾಳಿಯನ್ನು ಗೌರವಿಸುವ ಗುಣವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಆಗ ಮಾತ್ರ ಕ್ರೀಡಾಪಟು ಕೀರ್ತಿವಂತರಾಗುತ್ತಾರೆ ಎಂದರು. ಕ್ರೀಡೆಗಳಲ್ಲಿ ಭಾಗವಹಿಸುವವರ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಉತ್ತಮ ಕ್ರೀಡಾಪಟುಗಳು ದಕ್ಷ ಆಡಳಿತಗಾರರು, ಜೀವನ ಮೌಲ್ಯ ಅಳವಡಿಸಿ ಕೊಳ್ಳಲು, ನಮ್ಮ ಮನೆ, ನಮ್ಮ ಗ್ರಾಮ ಹಾಗೂ ನಮ್ಮ ಪೋಷಕರು ಅವರ ಗೌರವ ಉಳಿಸಬೇಕು ಎಂದು ಕೆಲಸ ಮಾಡಲು ಸಹಕಾರಿ ಯಾಗುತ್ತದೆ ಎಂದರು. ಯುವಕರು ದೇಶದ ಭವಿಷ್ಯದ ನಾಯಕರು. ನೀಟ್ ಪರೀಕ್ಷೆಯ ರದ್ದು ಹಾಗೂ ಅವ್ಯವಹಾರದ ವಿರುದ್ಧ ದೆಹಲಿಯಲ್ಲಿ ವಿದ್ಯಾರ್ಥಿ ಸಮೂಹ ನಡೆಸಿದ ಹೋರಾಟ ದೇಶಾದ್ಯಂತ ಸಂಚಲನ ಸೃಷ್ಟಿಸಿದೆ. ಅನ್ಯಾಯದ ವಿರುದ್ಧ ನ್ಯಾಯಕ್ಕೆ ಜಯ ಸಿಕ್ಕಿದೆ. ವಿದ್ಯಾರ್ಥಿಗಳ ಹೋರಾಟಕ್ಕೆ ಗೌರವ ಸಂದಿದೆ. ಎಂಥಾ ದೊಡ್ಡ ಸಂಕಷ್ಟಗಳು ಬಂದರು ಹೆದರದೆ ಜನತೆಯ ಹಿತಕ್ಕಾಗಿ ಮತ್ತು ದೇಶಕ್ಕೆ ಗೌರವ ತರುವಂಥ ಕೆಲಸ ಮಾಡಲು ಯುವಕರು ಮುಂದಾಗಬೇಕು ಎಂದು ಹೇಳಿದರು.

ಕ್ರೀಡಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವಿಕೆ ಸಂತೋಷ ಮತ್ತು ಜೀವನಾನುಭವ ಕೊಡುತ್ತದೆ. ನಮ್ಮನ್ನು ಚಪ್ಪಾಳೆ ಹೊಡೆದು, ಬೆನ್ನುತಟ್ಟಿ ಪ್ರೋತ್ಸಾಹ ಮಾಡುವ ಸನ್ನಿವೇಶ ಜೀವನೋತ್ಸಾಹವನ್ನು ತಂದು ಕೊಡುತ್ತದೆ. ನಮ್ಮ ಕಾಲೇಜನ್ನು ಸೇರಿ ರಾಮನಗರ ತಾಲ್ಲೂಕಿನ 29 ಪದವಿ ಪೂರ್ವ ಕಾಲೇಜುಗಳ 1,600 ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಂಡಿರುವುದು ಖುಷಿ ತಂದಿದೆ ಎಂದರು. ಸಮಾರಂಭದಲ್ಲಿ ಯೋಜನಾ ನಿರ್ದೇಶಕ ಶೇಖರ್, ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಜಿಲ್ಲಾ ಉಪ ನಿರ್ದೇಶಕ ಎಂ ಮರಿಸ್ವಾಮಿ, ಸಂಸ್ಥೆಯ ನಿರ್ದೇಶಕರುಗಳಾದ ಎಲ್.ಸತೀಶ್ ಚಂದ್ರ, ಬಿ.ಸಿ.ರೇಣುಕಾ ಪ್ರಸಾದ್, ಸುಶೀಲಾ ಜೈನ್, ವಿ.ಹೆಚ್.ಪುಟ್ಟರಾಜು, ಪ್ರಾಂಶುಪಾಲರುಗಳಾದ ಮಮತಾ, ಸರವಣ್ಣ, ಖಜಾಂಚಿ ಬಿ.ಎನ್. ಗಂಗಾಧರಯ್ಯ, ಸಂಘಟಕ ಮೋನಿಷ್ ಪ್ರಾಂಶುಪಾಲರ ಸಂಘದ ಜಿಲ್ಲಾಧ್ಯಕ್ಷ ಜಿ.ಶಿವಣ್ಣ, ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಎಂ.ಎನ್. ಪ್ರದೀಪ್, ಡಾ.ದೊಡ್ಡ ಬೋರಯ್ಯ, ಕ್ರೀಡಾ ತರಬೇತುದಾರ ಶರತ್ ಕುಮಾರ್ ಕೆ, ದೇವರಾಜು, ಕೆ.ಆರ್. ಶ್ರೀನಿವಾಸ್, ಉಪನ್ಯಾಸಕರುಗಳಾದ ಚಿಕ್ಕಪುಟ್ಟಯ್ಯ, ಡಾ.ಕೃಷ್ಣ, ಮಾರಣ್ಣ, ರಾಮಕೃಷ್ಣಯ್ಯ, ನ್ಯೂ ಎಕ್ಸ್‌ಪರ್ಟ್ ಕಾಲೇಜಿನ ನಾಗರಾಜು, ಕೆ.ನಾಗೇಶ್, ಲಕ್ಷ್ಮೀಪುರ ನಾಗೇಶ್, ಪ್ರಾಂಶುಪಾಲರಾದ ರೇಖಾ, ರಾಜಣ್ಣ, ಜೆ.ಬಿ.ಚನ್ನವೀರಯ್ಯ, ಶಬೀರ್, ಖುಬೇಬ್ ಮೊದಲಾದವರು ಹಾಜರಿದ್ದರು.

### ಸೋಲನ್ನು ಸ್ವೀಕರಿಸುವ ಮನೋಭಾವ ಬದುಕಿನ ದೊಡ್ಡ ಪಾಠ: ಚಂದ್ರಯ್ಯ

ಸಮಾರಂಭ ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಚಂದ್ರಯ್ಯ, ಸೋಲನ್ನು ಸ್ವೀಕರಿಸುವ ಮನೋಭಾವವೇ ಬದುಕಿನ ಬಹುದೊಡ್ಡ ಪಾಠ. ಗೆಲುವು ವಿನಮ್ರತೆಯ ಗುಣವನ್ನು ಬೆಳೆಸುತ್ತದೆ. ಇದು ಅತ್ಯುತ್ತಮ ಜೀವನ ನೀತಿಗಳಲ್ಲಿ ಒಂದಾಗಿದೆ. ವಿನಮ್ರತೆ ಇದ್ದವರನ್ನು ಸಮಾಜ ಗುರ್ತಿಸಿ ಗೌರವಿಸುತ್ತದೆ. ಗೆದ್ದೇ ಗೆಲ್ಲುತ್ತೇನೆ ಎನ್ನುವ ಮನೋಭಾವದಿಂದ ಆಟ ಆಡಿದರೂ ಸೋತಾಗ ಕುಗ್ಗದೆ, ಮತ್ತೊಮ್ಮೆ ಪ್ರಯತ್ನಿಸುವ ಛಲ ಬೆಳೆಸಿಕೊಳ್ಳಬೇಕು ಎಂದರು. ಆಟೋಟಗಳಿಗೆ ಕೊಡುವಷ್ಟೇ ಪ್ರಾಮುಖ್ಯತೆಯನ್ನು ಓದಿಗೂ ಕೊಡಬೇಕು. ಐ. ಎ.ಎಸ್ ಹಾಗೂ ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಪ್ರಯತ್ನ ಮಾಡಿ, ಗೆಲುವು ಸಾಧಿಸಿ, ಜಿಲ್ಲೆಯ ಜನರ ಸೇವೆಗೆ ನಿಲ್ಲಬೇಕು ಎಂದರು. ಪಠ್ಯ ಮತ್ತು ಪಠ್ಯೇತರ ಎರಡರಲ್ಲೂ ಸಾಧನೆ ಮಾಡಿದಾಗ ವ್ಯಕ್ತಿಯ ಸರ್ವಾಂಗೀಣ ಪ್ರಗತಿ ಸಾಧ್ಯವಾಗಿತ್ತದೆ ಎಂದು ತಿಳಿಸಿದರು.

### ವಸ್ತುನಿಷ್ಠ ವರದಿಗಳಿಗೆ ಆದ್ಯತೆ ನೀಡಿ: ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಸಲಹೆ



ಚಾಮರಾಜನಗರ: ಭಾರತ ಸರ್ಕಾರದ ವಾರ್ತಾ ಶಾಖೆಯ ವತಿಯಿಂದ ಕೇಂದ್ರ ಸರ್ಕಾರದ ಹನ್ನೆರಡು ವರ್ಷಗಳ ಕಾರ್ಯ ಸಾಧನೆಗಳು ಹಾಗೂ ನಶಾಮುಕ್ತ ಭಾರತ ಅಭಿಯಾನದ ಕುರಿತು ಆಯೋಜಿಸಲಾಗಿದ್ದ 'ವಾರ್ತಾಲಾಪ' ಕಾರ್ಯಾಗಾರವನ್ನು ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಮಾಧ್ಯಮದ ಪಾತ್ರ ಕೇವಲ ಸಮಾಜ ಮತ್ತು ಆಡಳಿತದಲ್ಲಿರುವ ಲೋಪದೋಷಗಳನ್ನು ಎತ್ತಿಹಿಡಿಯುವುದಕ್ಕೆ ಮಾತ್ರ ಸೀಮಿತವಾಗಿರದೆ ಜನರನ್ನು ಜಾಗೃತಗೊಳಿಸುವುದರಲ್ಲೂ ಮಹತ್ತರವಾಗಿದೆ. ಸುದ್ದಿ ಮಾಧ್ಯಮದವರು ಸತ್ಯಾಸತ್ಯತೆಗೆ ಹೆಚ್ಚಿನ ಆದ್ಯತೆ ನೀಡಿ ವಸ್ತುನಿಷ್ಠ ವರದಿಗಳನ್ನು ಪ್ರಕಟಿಸಬೇಕು ಎಂದರು.

**ವಿಕಸಿತ ಭಾರತದ ಧ್ಯೇಯ್ಯ ಮತ್ತು ಮಾಧ್ಯಮಗಳ ಜವಾಬ್ದಾರಿ**

ವಾರ್ತಾ ಶಾಖೆಯ ಹೆಚ್ಚುವರಿ ಮಹಾನಿರ್ದೇಶಕ ಎಸ್.ಜಿ. ರವೀಂದ್ರ ಅವರು ಕಾರ್ಯಾಗಾರದ ಆಶಯ ನುಡಿಗಳನ್ನಾಡಿ, ವಿಕಸಿತ ಭಾರತದ ಧ್ಯೇಯ ಸಾಧನೆಗಾಗಿ ರೈತರು, ಹಿಂದುಳಿದ ವರ್ಗಗಳು, ಮಹಿಳೆಯರು ಹಾಗೂ ಯುವಜನರನ್ನು ಕೇಂದ್ರಿಕರಿಸಿ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು ಹಾಗೂ ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ, ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಮಾಧ್ಯಮಗಳು ಸತ್ಯವನ್ನು ಪರಾಮರ್ಶಿಸಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಧ್ವನಿಯಾಗಬೇಕು ಎಂದು ಅಭಿಪ್ರಾಯಪಟ್ಟರು. ಜಿಲ್ಲಾ ಪಂಚಾ ಯತ್ ಮುಖ್ಯ ಕಾರ್ಯ ನಿರ್ವಹಕ ಅಧಿಕಾರಿ ಮೋನಾ ರೋತ್ ಅವರು ಈ ಸಂವಾದ ಕಾರ್ಯಕ್ರಮವು ಸಕಾರಾತ್ಮಕ ವರದಿಗಳನ್ನು ಮಾಡಲು ಪೂರಕವಾಗಿದೆ ಎಂದರು.

**ಮಾದಕ ವಸ್ತು ತಡೆಗೆ 'ರೈಸ್' ಯೋಜನೆ ಮತ್ತು ಆಪ್ತಸಮಾಲೋಚನೆ**

ಕಾರ್ಯಾಗಾರದಲ್ಲಿ ಮಾದಕ ವಸ್ತುಗಳ ಬಳಕೆಯನ್ನು ತಡೆಗಟ್ಟುವ ಕುರಿತು ಮಾತನಾಡಿದ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ಶಶಿಧರ್, ಮಾದಕ ದ್ರವ್ಯ ತಡೆಗೆ 'ರೈಸ್' ಎಂಬ ವಿಶೇಷ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಮಾದಕ ವಸ್ತು ಗಳನ್ನು ನಿರಾಕರಿಸುವುದು, ಅವುಗಳ ಬಳಕೆಯ ಬಗ್ಗೆ ಮಾಹಿತಿ ನೀಡುವುದು, ಅಭಿಯಾನಕ್ಕೆ ಬೆಂಬಲ ನೀಡುವುದು ಹಾಗೂ ವ್ಯಸನಿಗಳನ್ನು ಮುಖ್ಯವಾಹಿನಿಗೆ ತರಲು ಸಬಲೀಕರಣಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಉಚಿತ ಸಹಾಯವಾಣಿ ಸಂಖ್ಯೆ ಯನ್ನು ಕಾಯ್ದಿರಿಸಲಾಗಿದ್ದು, ಯುವಜನರನ್ನು ವ್ಯಸನದಿಂದ ದೂರವಿಡಲು 'ಸನ್ಮಿತ್ರ' ಎಂಬ ಆಪ್ತಸಮಾಲೋಚನೆ ಕಾರ್ಯಕ್ರಮವನ್ನೂ ನಡೆಸಲಾಗುತ್ತಿದೆ ಎಂದು ವಿವರಿಸಿದರು.

**ಬುಡಕಟ್ಟು ಹಾಗೂ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಗೋಷ್ಠಿ**

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಬಿಂಧ್ಯಾ ಹೆಚ್.ಎಸ್. ಅವರು ಮಾತನಾಡಿ, ಬುಡಕಟ್ಟು ಸಮುದಾಯಗಳ ಸಮಗ್ರ ಅಭ್ಯುದಯಕ್ಕಾಗಿ ಕೇಂದ್ರ ಸರ್ಕಾರವು ಶಿಕ್ಷಣ, ಮೂಲಸೌಕರ್ಯ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಮಾಹಿತಿ ನೀಡಿದರು. ಇನ್ನುಳಿದ ಗೋಷ್ಠಿಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾ ಅಧಿಕಾರಿ ಮಂಜುಳಾ ಬಿ., ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ. ಬಾನುಪ್ರಕಾಶ್ ಯು.ಹೆಚ್. ಹಾಗೂ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ನ ವ್ಯವಸ್ಥಾಪಕರಾದ ಸುರೇಖಾ ಎಂ. ಅವರು ಉಪಯುಕ್ತ ಮಾಹಿತಿಗಳನ್ನು ಹಂಚಿಕೊಂಡರು.

# 4ನೇ ದಿನಕ್ಕೆ ಕಾಲಿಟ್ಟ ರೈತರ ಅಹೋರಾತ್ರಿ ಧರಣಿ: ಧರಣಿ ಸ್ಥಳಕ್ಕೆ ಡಿಸಿ ಭೇಟಿ

ಗುಂಡ್ಲುಪೇಟೆ: ಮೂರನೇ ಹಂತದ ಅಚ್ಚುಕಟ್ಟು ಪ್ರದೇಶದ ಕೆರೆಗಳಿಗೆ ಕಳೆದ ಮೂರು ವರ್ಷಗಳಿಂದ ನೀರು ತುಂಬಿಸುತ್ತಿಲ್ಲ ಎಂದು ಆರೋಪಿಸಿ ರೈತರು ತಾಲೂಕಿನ ಹುತ್ತೂರು ಪಂಪ್‌ಹೌಸ್ ಮುಂಭಾಗದಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ನಾಲ್ಕನೇ ದಿನಕ್ಕೂ ಮುಂದುವರಿದಿದೆ.



ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಶ್ರೀರೂಪಾ ಭೇಟಿ ನೀಡಿ ರೈತರ ಅಹವಾಲು ಆಲಿಸಿ ಮನವಿ ಸ್ವೀಕರಿಸಿ, ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ರೈತರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ, ಮೂರನೇ ಹಂತದ ಕೆರೆಗಳಿಗೆ ನೀರು ಹರಿಸುವ ಕುರಿತು ವಾರದೊಳಗೆ ನೀರಾವರಿ ನಿಗಮದ ಮುಖ್ಯ ಅಧಿಕಾರಿಗಳೊಂದಿಗೆ ಜಿಲ್ಲಾ ಡಳಿತ ಭವನದಲ್ಲಿ ಸಭೆ ಕರೆಯಲಾಗುವುದು. ರೈತರ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದು ಎಂದರು.

**ಬಿಜೆಪಿ ಬೆಂಬಲ**

ಅಹೋರಾತ್ರಿ ಧರಣಿಗೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಬೇಂದ್ರಪ್ಪ, ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಜಿಲ್ಲಾ ಕಾರ್ಯದರ್ಶಿ ನಟರಾಜು ಸೇರಿದಂತೆ ಮುಖಂಡರು ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಹುತ್ತೂರು ಪಂಪ್‌ಹೌಸ್‌ನಿಂದ ಚಾಮರಾಜನಗರ ತಾಲೂಕಿನ ಮೂರನೇ ಹಂತದ ಕೆರೆಗಳಿಗೆ ನೀರು ಹರಿಸುವ ಬದಲು ನಾಲ್ಕನೇ ಹಂತದ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಕಾನೂನು ಪ್ರಕಾರ ಮೊದಲ, ಎರಡನೇ ಹಾಗೂ ಮೂರನೇ ಹಂತದ ಕೆರೆಗಳಿಗೆ ಆದ್ಯತೆ ನೀಡಬೇಕಾಗಿದ್ದು, ಅಧಿಕಾರಿಗಳು ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ಕ್ರಮ ಕೈಗೊಳ್ಳುತ್ತಿರುವುದು ಸರಿಯಲ್ಲ ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಬೇಂದ್ರಪ್ಪ ಮಾತನಾಡಿ, ಹುತ್ತೂರು ಪಂಪ್‌ಹೌಸ್‌ನಿಂದ ಮೂರನೇ ಹಂತದ ಕೆರೆಗಳಿಗೆ ಕೇವಲ ಒಂದೇ ಬಾರಿ ನೀರು ಹರಿಸಲಾಗಿದೆ. ನಂತರ ನಿರಂತರವಾಗಿ ನಿರ್ಲಕ್ಷ್ಯ ವಹಿಸಲಾಗಿದೆ. ಬರಗಾಲದಿಂದ ಅಂತರ್ಜಲ ಮಟ್ಟ ಕುಸಿದಿದ್ದು, ಕುಡಿಯುವ ನೀರು ಹಾಗೂ ಜಾನುವಾರುಗಳ ಮೇವು ಸಮಸ್ಯೆ ತೀವ್ರಗೊಂಡಿದೆ. ಜಿಲ್ಲಾಧಿಕಾರಿಗಳು ಭೇಟಿ ನೀಡಿ ಭರವಸೆ ನೀಡಿರುವುದಕ್ಕೆ ರೈತರ ಪರವಾಗಿ ಧನ್ಯವಾದ ಸಲ್ಲಿಸುತ್ತೇವೆ ಎಂದರು.

ಕ್ಷೇತ್ರದ ಶಾಸಕರು ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಕೆರೆಗಳಿಗೆ ನೀರು ತುಂಬಿಸುವ ಮೂಲಕ ಸಂಕಷ್ಟದಲ್ಲಿರುವ ರೈತರ ನೆರವಿಗೆ ಬರಬೇಕು ಎಂದು ಅವರು ಆಗ್ರಹಿಸಿದರು. ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ: ರೈತ ಮುಖಂಡ ಮೋಹನ್ ರಾಜ್ ಮಾತನಾಡಿ, ಆಲಂಬೂರು ಏತ ಕುಡಿಯುವ ನೀರಿನ ಯೋಜನೆಯ ಮೂರನೇ ಹಂತದ ಕೊನೆಯ ಕೆರೆಯಾದ ಅಮಚವಾಡಿ ಕೆರೆ ಸೇರಿದಂತೆ ಅಚ್ಚುಕಟ್ಟು ಪ್ರದೇಶದಲ್ಲಿ ಸಾವಿರಾರು ಜನರು ಹಾಗೂ ಜಾನುವಾರುಗಳು ನೀರಿನ ಕೊರತೆಯಿಂದ ತೀವ್ರ ಸಂಕಷ್ಟ ಎದುರಿಸುತ್ತಿವೆ. ಆಲಂಬೂರಿನಿಂದ ಯಾವುದೇ ಅಡೆತಡೆಯಿಲ್ಲದೆ ಹುತ್ತೂರು ಪಂಪ್‌ಹೌಸ್‌ಗೆ ನೀರು ಸಂಗ್ರಹಿಸಿ ಅಮಚವಾಡಿ ಹಾಗೂ ಎಣ್ಣೆಹೊಳೆ ಕೆರೆಗಳನ್ನು ಭರ್ತಿ ಮಾಡಬೇಕು. ಕೆರೆಗಳಿಗೆ ನೀರು ತುಂಬಿಸುವಲ್ಲಿ ವಿಫಲರಾದ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಜವಾಬ್ದಾರಿಯುತ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಒತ್ತಾಯಿಸಿದರು. ಹೋರಾಟ ಮುಂದುವರಿಕೆ: ಕೆರೆಗಳಿಗೆ ನೀರು ಹರಿಸುವವರೆಗೆ ಅಹೋರಾತ್ರಿ ಧರಣಿಯನ್ನು ಯಾವುದೇ ಕಾರಣಕ್ಕೂ ಕೈಬಿಡುವುದಿಲ್ಲ ಎಂದು ರೈತರು ಸ್ಪಷ್ಟಪಡಿಸಿದ್ದು, ತಮ್ಮ ಬೇಡಿಕೆ ಈಡೇರುವವರೆಗೆ ಹೋರಾಟ ಮುಂದುವರಿಸುವುದಾಗಿ ತಿಳಿಸಿದ್ದಾರೆ.

# ಶೀಘ್ರ ಡಿಸಿಸಿ ಅಧ್ಯಕ್ಷರ ನೇಮಕ: ಅಭಿಜಿತ್

**ಮೈಸೂರು:** ಡಿಸಿಸಿ ಅಧ್ಯಕ್ಷರ ನೇಮಕಾತಿ ಕುರಿತಂತೆ ಆಕಾಂಕ್ಷಿಗಳಿಂದ ಅಭಿಪ್ರಾಯ ಸಂಗ್ರಹಿಸುತ್ತಿದ್ದು, ಎಐಸಿಸಿಗೆ ವರದಿ ಸಲ್ಲಿಸಿದ ಬಳಿಕ ಅಂತಿಮ ಆಯ್ಕೆ ನಡೆಯಲಿದೆ ಎಂದು ವೀಕ್ಷಕರಾಗಿ ಆಗಮಿಸಿರುವ ಕೇರಳ ಶಾಸಕ ಅಭಿಜಿತ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜ್ಯಾದ್ಯಂತ ಎಲ್ಲ ಜಿಲ್ಲಾಧ್ಯಕ್ಷರ ಬದಲಾವಣೆ ಪ್ರಕ್ರಿಯೆ ಆರಂಭವಾಗಿದ್ದು, ಪಕ್ಷದ ವರಿಷ್ಠರ ಸಭೆ ಸೂಚನೆ ಮೇರೆಗೆ ಸಂಘಟನಾ ಸೃಜನ್ ಅಭಿಯಾನ ದೇಶದಾದ್ಯಂತ ಹಮ್ಮಿಕೊಳ್ಳಲಾಗಿದೆ. ಪಕ್ಷದ ಸಂಘಟನೆ ಸದೃಢಗೊಳಿಸುವ ಉದ್ದೇಶ ಇದರದ್ದಾಗಿದೆ. ಹೀಗಾಗಿ ಅದೇ ರೀತಿ ಮೈಸೂರಿನಲ್ಲಿಯೂ ಇದು ಈಗಾಗಲೇ ಆರಂಭವಾಗಿದ್ದು, ಡಿಸಿಸಿ ಅಧ್ಯಕ್ಷರ ನೇಮಕಾತಿ ಪ್ರಕ್ರಿಯೆ ಕಾರ್ಯಗಳು ಆರಂಭವಾಗಿವೆ ಎಂದರು.

ಜನರೊಡನೆ ಒಡನಾಟ ಹೊಂದಿರುವವರು, ಸಮಾಜಕ್ಕೆ ಹಾಗೂ ಪಕ್ಷಕ್ಕೆ ಕೊಡುಗೆ ನೀಡಿರುವವರನ್ನು ಪರಿಗಣಿಸಲಾಗುವುದು. ಹೀಗಾಗಿ ಪ್ರತಿಯೊಬ್ಬ ಆಕಾಂಕ್ಷಿಯೊಡನೆಯೂ ಚರ್ಚೆ ನಡೆದಿದೆ. ಎಸ್‌ಸಿ, ಎಸ್‌ಟಿ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಎಲ್ಲರಿಗೂ ಆದ್ಯತೆ ನೀಡಲಾಗುತ್ತಿದೆ. ಹೀಗಾಗಿ ಆಸಕ್ತರು ಅರ್ಜಿ ಸಲ್ಲಿಸಬಹುದೆಂದರು. ನಗರ ಜಿಲ್ಲಾಧ್ಯಕ್ಷ ಆರ್. ಮೂರ್ತಿ, ಭೋವಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ, ಚಂದ್ರಕಲಾ, ಶಿವಣ್ಣ, ನಾಗೇಶ್, ಶಿವಣ್ಣ, ಚಿದಂಬರಂ ಹಾಗೂ ಇನ್ನಿತರರು ಇದ್ದರು.



### ಚಾಮರಾಜನಗರದಲ್ಲಿ ಕಾವೇರಿ ಕಿಚ್ಚು: ರೈತರ ಆಕ್ರೋಶ

# ಜನ ನಾಯಗನ್ ಚಿತ್ರ ಪ್ರದರ್ಶನ ರದ್ದು

ಚಾಮರಾಜನಗರ: ತಮಿಳುನಾಡಿಗೆ ಕಾವೇರಿ ನೀರು ಹರಿಸಬೇಕೆಂಬ ಆದೇಶದ ವಿರುದ್ಧ ರೈತರು ತೀವ್ರ ಆಕ್ರೋಶ ಹೊರಹಾಕಿದ್ದು ನಗರದಲ್ಲಿ ವಿಜಯ್ ನಟನೆಯ ಜನ ನಾಯಗನ್ ಚಿತ್ರ ಪ್ರದರ್ಶನ ರದ್ದು ಗೊಳಿಸಲಾಗಿದೆ.

ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ನಗರದ ಬಸವೇಶ್ವರ ಚಿತ್ರಮಂದಿರ ಮುಂಭಾಗ ಜಮಾ ಯಿಸಿದ ಪ್ರತಿಭಟನಾಕಾರರು, ಖಾಲಿ ತಟ್ಟೆ-ಲೋಟ ಹಿಡಿದು ಪ್ರತಿಭಟನೆ ನಡೆಸಿದರು. ಭಿಕ್ಷೆ ಎತ್ತಿ ಹಣ ನೀಡುತ್ತೇವೆ, ವಿಜಯ್ ಹೆಲಿಕಾಪ್ಟರ್ ಮೂಲಕ ವೈಮಾನಿಕ ಸಮೀಕ್ಷೆ ನಡೆಸಲಿ, ಕರುನಾಡಿನ ಕಷ್ಟ ಅರಿಯಬೇಕು ಎಂದು ಆಗ್ರಹಿಸಿದರು.

**ಕಾವೇರಿ ನೀರು ಬಿಡುಗಡೆಗೆ ವಿರೋಧಿಸಿ ರೈತರಿಂದ ಪ್ರತಿಭಟನೆ**

ಯಾವುದೇ ಕಾರಣಕ್ಕೂ ತಮಿಳು ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಲ್ಲ, ಕಾವೇರಿ ನೀರನ್ನು ಕೊಡಿ ಎಂದರೆ ನಮ್ಮ ಡ್ಯಾಂಗಳಲ್ಲಿ ನೀರು ತುಂಬಿದೆಯೇ ಎಂದು ತಮಿಳುನಾಡಿನ ಸಿಎಂ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು.

ಈ ವೇಳೆ ರೈತ ಮುಖಂಡ ಭಾಗ್ಯರಾಜ್ ಮಾತನಾಡಿ,



ತಮಿಳುನಾಡಿನ ಮುಖ್ಯಮಂತ್ರಿ ಕರ್ನಾಟಕಕ್ಕೆ ವಿಲನ್ ಆಗಿದ್ದಾರೆ. ವಿಜಯ್ ನಟನೆಯ ಚಿತ್ರವನ್ನು ಯಾವುದೇ ಕಾರಣಕ್ಕೂ ಪ್ರದರ್ಶನ ಮಾಡಲು ಬಿಡುವುದಿಲ್ಲ ಎಂದು ಎಚ್ಚರಿಸಿದರು. ಕರ್ನಾಟಕದ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಭೇಟಿಯಾಗಲು ವಿಜಯ್ ಬರುತ್ತಿದ್ದು ವಸ್ತುಸ್ಥಿತಿ ಅರಿಯಲಿ, ಕರ್ನಾಟಕದ ಜನರು ಕುಡಿಯಲು ನೀರಿಲ್ಲದೆ ಪರದಾಟವನ್ನು ಗಮನಿಸಲಿ ಮತ್ತೇ ಏನಾದರೂ ಖ್ಯಾತೆ ತೆಗೆದರೇ ವಿಧಾನಸೌಧದಿಂದ ಮೂರನೇ ಮಹಡಿ ಇಳಿಯಲು ಬಿಡು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ತಮಿಳುನಾಡಿಗೆ ನೀರು ಹರಿಸಿದ್ದೇ ಆದರೆ ಕರ್ನಾಟಕ-ತಮಿಳುನಾಡು ಗಡಿ ಬಂದ್??? ಮಾಡುತ್ತೇವೆ. ತಮಿಳುನಾಡು ಉತ್ಪನ್ನ ನಿರ್ಬಂಧ ತಮಿಳುನಾಡು ಚಿತ್ರ ಪ್ರದರ್ಶನ ರದ್ದಾಗಬೇಕುಎಂದು ಆಗ್ರಹಿಸಿದರು.

**ಚಿತ್ರ ಪ್ರದರ್ಶನ ರದ್ದು**

ರೈತರ ಪ್ರತಿಭಟನೆ ಮತ್ತು ಆಕ್ರೋಶ ಬೆನ್ನಲ್ಲೇ ಚಿತ್ರಮಂದಿರದ ಸಿಬ್ಬಂದಿ ಸಿಎಂ ಜೋಸೆಫ್ ವಿಜಯ್ ಪೋಸ್ಟರ್ ಗಳನ್ನು ತೆರವುಗೊಳಿಸಿ ಈ ದಿನದ ಪ್ರದರ್ಶನಗಳನ್ನು ರದ್ದು ಮಾಡಲಾಯಿತು. ವಿಜಯ್ ಭಾವಚಿತ್ರ ಹಾಗೂ ಪೋಸ್ಟರ್ ಹರಿಯುವ ಚಳುವಳಿ ಹಮ್ಮಿಕೊಂಡಿದ್ದರಿಂದ ಚಿತ್ರಮಂದಿರವೇ ಪೋಸ್ಟರ್ ತೆರವುಗೊಳಿಸಿತು

# ರಸಗೊಬ್ಬರ ಮಾರಾಟಗಾರರಿಗೆ ಜಿಲ್ಲಾ ಮಟ್ಟದ ತಾಂತ್ರಿಕ ಕಾರ್ಯಾಗಾರ: ಡೀಸಿ ಡಾ. ಕುಮಾರ



**ಮಂಡ್ಯ :** ಗುಣಮಟ್ಟದ ಕೃಷಿ ಪರಿಕರಗಳನ್ನು ರೈತರಿಗೆ ತಲುಪಿಸುವುದು ಮತ್ತು ಮಣ್ಣಿನ ಆರೋಗ್ಯ ರಕ್ಷಿಸುವುದು ಪ್ರತಿಯೊಬ್ಬ ರಸಗೊಬ್ಬರ ಮಾರಾಟಗಾರರ ಆದ್ಯ ಕರ್ತವ್ಯವಾಗಿದೆ. ಮಾರಾಟಗಾರ ರಿಗಾಗಿ ಈ ತಾಂತ್ರಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ . ವ್ಯಾಪಾರವನ್ನು ಕಾನೂನುಬದ್ಧವಾಗಿ ನಡೆಸುವುದು ಮಾತ್ರವಲ್ಲದೆ, ಹೊಸ ತಂತ್ರಜ್ಞಾನ ಮತ್ತು ಕೃಷಿ ಪದ್ಧತಿಗಳ ಬಗ್ಗೆ ಸಂಪೂರ್ಣ ಜ್ಞಾನವನ್ನು ಪಡೆಯಬಹುದು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ತಿಳಿಸಿದರು.

ಡಾ. ಬಿ. ಆರ್ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಮತ್ತು ಕೃಷಿ ಸಮಾಜ ಸಹಯೋಗದಲ್ಲಿ ದಲ್ಲಿ ಮಾರಾಟಗಾರರಿಗೆ ರಸಗೊಬ್ಬರ ಗುಣ ನಿಯಂತ್ರಣ –ಸಮರ್ಪಕ –ಸಮತೋಲನ ರಸಗೊಬ್ಬರ ನಿರ್ವಹಣೆ ಕಾರ್ಯಾಗಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಸಗೊಬ್ಬರ ತಯಾರಕರು ಮತ್ತು ವಿತರಕರು ಸರ್ಕಾರದ ಕಾನೂನು ಕಾಯಿದೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ರಸಗೊಬ್ಬರದ ಜೊತೆಗೆ ಅನಗತ್ಯ ಕೀಟನಾಶಕ ಅಥವಾ ಇತರ ಉತ್ಪನ್ನಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ರೈತರ ಮೇಲೆ ಒತ್ತಡ ಹೇರುವುದು ಅಪರಾಧವಾಗಿದ್ದು ರಸಗೊಬ್ಬರ ತಯಾರಕರು ಮತ್ತು ವಿತರಕರು ರೈತರ ಹಿತಶಕ್ತಿಗೆ ಎಲ್ಲರೂ ಸಮನ್ವಯತೆಯಿಂದ ಸಹಕಾರಿಯಾಗಬೇಕು ಎಂದರು.

ರೈತ ದೇಶದ ಬೆನ್ನೆಲುಬು ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ಫಲಿಸಿದರೆ ರೈತರು ಸ್ವಾವಲಂಬಿಯಾಗಲು ಸಾಧ್ಯವಾಗುತ್ತದೆ. ಆದ್ದರಿಂದ ರೈತರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಜವಾಬ್ದಾರಿ ಯಾಗಿದೆ. ಹಾಗಾಗಿ ಮಾರಾಟಗಾರರು ಮತ್ತು ರೈತರು ಸಾಮರಸ್ಯದಿಂದ ಇರಬೇಕು ಎಂದು ತಿಳಿಸಿದರು.

ರಸಗೊಬ್ಬರದ ಕೃತಕ ಅಭಾವ ಸೃಷ್ಟಿಸುವುದು, ಅನ್ಯ ಜಿಲ್ಲೆಗಳಿಗೆ ಕಳ್ಳಸಾಗಣೆ ಮಾಡುವುದು ಅಥವಾ ಕಳಪೆ ಗೊಬ್ಬರ ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದ್ದು ಅನಧಿಕೃತ ದಾಸ್ತಾನು ಮಾರಾಟ ಮತ್ತು ಸಾಗಾಣಿಕೆ ಕುರಿತು ಮಾಹಿತಿ ದೊರೆತಲ್ಲಿ ಕಾನೂನು ಕ್ರಮ ಕೈಗೊಳ್ಳಗುವುದು ಮತ್ತು ಪರವಾನಗಿಯನ್ನು ರದ್ದು ಮಾಡಲಾಗುತ್ತದೆ ಎಂದು ತಿಳಿಸಿದರು.

ಮುಂಗಾರು ಮಳೆ ವೈಫಲ್ಯದಿಂದ ನೀರಿನ ಕೊರತೆ ಇರುವುದರಿಂದ ರೈತರಿಗೆ ಪರ್ಯಾಯ ಬೆಳೆಗಳಾದ ರಾಗಿ, ನವಣೆ ಮುಸಗಿನಜೋಳ, ಅರ್ಕ, ಹುರುಳಿ, ಅಲಸಂದೆ ಬೆಳೆಗಳನ್ನು ಬೆಳೆಯುವಂತೆ ಮಾಹಿತಿಯನ್ನು ನೀಡಲಾಗಿದ್ದು ರೈತರು ಪರ್ಯಾಯ ಬೆಳೆಗಳನ್ನು ಬೆಳೆಯಲು ಹೆಚ್ಚು ಒತ್ತು ನೀಡಬೇಕು ಎಂದು ಕಾರ್ಯಕ್ರಮದಲ್ಲಿ ತಿಳಿಸಿದರು.

ಮಂಡ್ಯ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಸ್ವಾಮಿ ಜಿ. ಎಸ್ ರವರು ಮಾತನಾಡಿ ಮಾರಾಟಗಾರರ ಸಮಸ್ಯೆಗಳಿಗೆ ಕಾನೂನು ಅನ್ವಯ ಜಿಲ್ಲಾಡಳಿತ ಮತ್ತು ಕೃಷಿ ಇಲಾಖೆಯು ಸಹಕರಿಸುತ್ತದೆ. ರೈತರಿಗೆ ಅನುಕೂಲವಾಗುವಂತೆ ರಸಗೊಬ್ಬರ ಒದಗಿರುವುದು ನಮ್ಮ ಜವಾಬ್ದಾರಿಯಾಗಿದೆ ಆ ನಿಟ್ಟಿನಲ್ಲಿ ಮಾರಾಟಗಾರರು ಮತ್ತು ಕೃಷಿಕರು ಸಮನ್ವಯತೆಯಿಂದ ಸಹಕಾರಿಯಾಗಬೇಕು ಎಂದರು. ರಸಗೊಬ್ಬರ ತಯಾರಕರು ಮತ್ತು ವಿತರಕರು ಸರ್ಕಾರದ ಕಾನೂನು ಕಾಯಿದೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಮತ್ತು ರೈತರಿಗೆ ಉತ್ತಮ ರಸಗೊಬ್ಬರ ಒದಗಿಸುವುದರ ಜೊತೆಗೆ ರೈತರು ಸ್ವಾವಲಂಬಿಯಾಗಿ ಮತ್ತು ರೈತರ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಕಾರ್ಯಾಗಾರದಲ್ಲಿ ಮೈಸೂರು ವಿಭಾಗದ ಜಾಗೃತ ಕೋಶ ಜಂಟಿ ಕೃಷಿ ನಿರ್ದೇಶಕರಾದ ರಾಮಕೃಷ್ಣ, ಸಂಪನ್ಮೂಲ ವ್ಯಕ್ತಿಗಳಾದ ವೆಂಕಟರಮಣಪ್ಪ, ಜಿಲ್ಲಾ ಕೃಷಿ ಸಮಾಜದ ಅಧ್ಯಕ್ಷರಾದ ನಾಗರಾಜು ಸಿ. ಎಂ, ಮಂಡ್ಯ ಜಿಲ್ಲಾ ಬಿತ್ತನೆ ಬೀಜ ಕೀಟನಾಶಕ ಮತ್ತು ರಸಗೊಬ್ಬರ ಮಾರಾಟಗಾರರ ಸಂಘದ ಅಧ್ಯಕ್ಷರಾದ ರಮೇಶ್, ಮಂಡ್ಯ ಜಿಲ್ಲಾ ಸಹಾಯಕ ಕೃಷಿ ನಿರ್ದೇಶಕರು ಸುನೀತಾ ಹೆಚ್. ಎಂ. ಉಪಸ್ಥಿತರಿದ್ದರು

# ಶರಣಪ್ಪ ಸಲಾದಪುರಗೆ

## ಡಾ. ಜಿ.ಮಾದೇಗೌಡ ಸಮಾಜ ಸೇವಾ ಪ್ರಶಸ್ತಿ



**ಬೆಂಗಳೂರು:** ಡಾ. ಜಿ.ಮಾದೇಗೌಡ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 2026ನೇ ಸಾಲಿನ ಡಾ. ಜಿ.ಮಾದೇಗೌಡ ರಾಜ್ಯಮಟ್ಟದ ಸಮಾಜ ಸೇವಾ ಪ್ರಶಸ್ತಿಗೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪ್ರಧಾನ ಸಮಾರಂಭವು, ಮಂಡ್ಯ ನಗರದ ಗಾಂಧಿ ಭವನದಲ್ಲಿ ಜುಲೈ 10, 2026ರಂದು ಮಧ್ಯಾಹ್ನ 3–30 ಗಂಟೆಗೆ ನಡೆಯಲಿದೆ.

**ಶರಣಪ್ಪ ಸಲಾದಪುರ ರವರ ಪರಿಚಯ :** 21–01–1957ರಂದು ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸಲಾದಪುರ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀ ಮಲ್ಲಪ್ಪ ಹಾಗೂ ತಾಯಿ ಶ್ರೀಮತಿ ಚಂದ್ರಮ್ಮ. ಕೃಷಿಕ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಅವರು, ತಮ್ಮ ತಂದೆಯಿಂದ ಬಳುವಳಿಯಾಗಿ ಬಂದ ನಿಷ್ಠೆ, ಪ್ರಾಮಾಣಿಕತೆ, ಶಿಸ್ತು ಮತ್ತು ನೈತಿಕ ಮೌಲ್ಯಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡು ಆದರ್ಶವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ.

ರೈತ ನಾಯಕರು ಹಾಗೂ ಸಮಾಜ ಸೇವಕರಾಗಿ ಹಲವು ದಶಕಗಳಿಂದ ಜನಪರ ಸೇವೆಯಲ್ಲಿ ತೊಡಗಿಸಿಕೊಂಡಿರುವ ಅವರು, ಮೌಲ್ಯಾಧಾರಿತ ವ್ಯಕ್ತಿತ್ವದಕಾರಣದಿಂದ ಸಗರನಾಡಿನಜನರ ಪ್ರೀತಿಗೆ ಪಾತ್ರರಾಗಿ ಸಗರ ನಾಡಿನಗಾಂಧಿ" ಎಂಬ ಹೆಸರಿನಿಂದ ಜನಮಾನಸದಲ್ಲಿ ಗುರುತಿಸಿಕೊಂಡಿದ್ದಾರೆ.

ಪದವಿ ವಿದ್ಯಾರ್ಥಿಯಾಗಿದ್ದಾಗಲೇ ಲೋಕನಾಯಕ ಪ್ರೊ.ಜಯಪ್ರಕಾಶ್ ನಾರಾಯಣ, ಜಾರ್ಜ್ ಫರ್ನಾಂಡಿಸ್ ಹಾಗೂ ಪ್ರೊ. ಮಧುದಂಡವತೆ ಅವರ ವಿಚಾರಧಾರೆಗಳಿಂದ ಪ್ರೇರಿತರಾಗಿ ಸಮಾಜವಾದಿ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ನಂತರ ಮಹಾತ್ಮಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಸವಣ್ಣ ಅವರ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಮಾನವೀಯತೆಯ ಚಿಂತನೆಗಳನ್ನು ಜೀವನದ ಆದರ್ಶಗಳಾಗಿ ಅಳವಡಿಸಿಕೊಂಡು ಆರೋಗ್ಯಕರ ಹಾಗೂ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.

"ಈ ನಾಡಿನ ರೈತಾಪಿ ಸಮುದಾಯದ ಏಳಿಗೆಯೇ ಕರ್ನಾಟಕದ ಸಮೃದ್ಧಿಗೆ ಮೂಲ" ಎಂಬ ಧ್ಯೇಯವಾಕ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡು ರೈತರ ಹಿತಾಸಕ್ತಿಗಾಗಿ ಅವಿರತವಾಗಿ ಹೋರಾಟ ನಡೆಸುತ್ತಿದ್ದಾರೆ. ಕಳೆದ ಮೂರು ದಶಕಗಳಲ್ಲಿ ನೂರಾರುರೈತ ಹೋರಾಟಗಳನ್ನು ಸಂಘಟಿಸಿ, ರೈತರ ಸಮಸ್ಯೆಗಳಿಗೆ ಪರಿಹಾರ ದೊರಕಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಜಮೀನ್ದಾರರ ಪಾಳೇಗಾರಿಕೆಯ ಮನೋಭಾವವನ್ನು ದೃಢವಾಗಿ ವಿರೋಧಿಸಿ, ಹೈದರಾಬಾದ್–ಕರ್ನಾಟಕ ಭಾಗದ ರೈತಪರ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

ರೈತರ ಅಭಿವೃದ್ಧಿ, ಸಮಾಜಮುಖಿಕಾರ್ಯ, ನೈತಿಕರಾಜಕಾರಣ ಮತ್ತುಜನಪರ ಸೇವೆಯ ಮೂಲಕ ಸಲ್ಲಿಸಿರುವ ಅಮೋಘ ಕೊಡುಗೆಯನ್ನು ಗೌರವಿಸಿ, ಡಾ. ಜಿ. ಮಾದೇಗೌಡ ಪ್ರತಿಷ್ಠಾನ ವತಿಯಿಂದ 2026ನೇ ಸಾಲಿನ ರಾಜ್ಯಮಟ್ಟದ ಸಮಾಜ ಸೇವಾ ಪ್ರಶಸ್ತಿ ಮೊತ್ತ ರೂ 25,000/– (ಇಪ್ಪತ್ತೈದು ಸಾವಿರ) ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕವನ್ನು ನೀಡಿ ಶರಣಪ್ಪ ಸಲಾದಪುರಅವರನ್ನು ಗೌರವಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

# ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಅರಿವು ಅಗತ್ಯ

**ರಾಮನಗರ:** ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಜೊತೆಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ಅರಿತು ಮರಗಳನ್ನು ಬೆಳೆಸುವ ಮೂಲಕ ಪ್ರಕೃತಿ ಉಳಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಯು.ನರಸಿಂಹಯ್ಯ ಹೇಳಿದರು.

ರಾಮನಗರ ತಾಲೂಕಿನ ಶ್ಯಾನುಭೋಗನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಕೃಷಿಯೊಂದಿಗೆ ಅರಣ್ಯ ಕೃಷಿಯ ಮಹತ್ವವನ್ನು ತಿಳಿಸಬೇಕು. ಖಾಲಿ ಜಾಗಗಳಲ್ಲಿ ಹಾಗೂ ಜಮೀನಿನ ಅಂಚುಗಳಲ್ಲಿ ಮರಗಳನ್ನು ಬೆಳೆಸುವುದರಿಂದ ಪರಿಸರ ಸಮತೋಲನ ಕಾಪಾಡುವುದರ ಜೊತೆಗೆ ರೈತರಿಗೆ ಹೆಚ್ಚುವರಿ ಆದಾಯವೂ ದೊರೆಯುತ್ತದೆ ಎಂದು ತಿಳಿಸಿದರು.

ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಬೇಕಾದರೆ ಪ್ರತಿಯೊಬ್ಬರೂ ಮರ ನೆಟ್ಟು ಬೆಳೆಸುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಪ್ರಕೃತಿಯೊಂದಿಗೆ ಹೊಂದಾಣಿಕೆ ಸಾಧಿಸಿದರೆ ಮಾತ್ರ ಸುಸ್ಥಿರ ಜೀವನ ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಬ್ಯಾಂಕ್‌ನ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಎಂ.ಆರ್.ಶಿವಕುಮಾರಸ್ವಾಮಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಅರಣ್ಯ ಪ್ರದೇಶಗಳು ಕ್ಷೀಣಿಸುತ್ತಿದ್ದು, ಜನಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಸಮತೋಲನಕ್ಕೆ ಹೆಚ್ಚಿನ ಮರಗಳ ಅಗತ್ಯವಿದೆ. ಅಭಿವೃದ್ಧಿ ಕಾಮಗಾರಿಗಳಿಂದ ನಾಶವಾಗುತ್ತಿರುವ ಮರಗಳಿಗೆ ಪರ್ಯಾಯವಾಗಿ ಹೊಸ ಗಿಡಗಳನ್ನು ನೆಟ್ಟು ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹೇಳಿದರು.

ಬ್ಯಾಂಕ್ ಉಪಾಧ್ಯಕ್ಷ ವಿನೋದ್ ಕೆ.ಪಟೇಲ್ ಮಾತನಾಡಿ, ಅರಣ್ಯ ನಾಶದಿಂದ ಕಾಡುಪ್ರಾಣಿಗಳು ನಾಡಿಗೆ ಬರುತ್ತಿರುವ ಘಟನೆಗಳು ಹೆಚ್ಚಾಗುತ್ತಿವೆ. ಪ್ರಕೃತಿಯನ್ನು ನಿರ್ಲಕ್ಷಿಸಿದ ಪರಿಣಾಮವಾಗಿ ಹವಾಮಾನ ವೈಪರೀತ್ಯ ಸೇರಿದಂತೆ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಉತ್ತಮ ಪರಿಸರ ನಿರ್ಮಾಣಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಗಿಡಗಳನ್ನು ಬೆಳೆಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಬ್ಯಾಂಕ್ ನಿರ್ದೇಶಕರಾದ ಆರ್.ಮಲ್ಲೇಶ್, ಹೆಚ್.ಕೆ.ನಂಜಪ್ಪ (ಗೋಪಿ), ಶಿವಣ್ಣ, ಎಲ್.ಎಂ. ಸಂತೋಷ್, ಜೆ.ಬಿ.ಪುಟ್ಟಮಾರೇಗೌಡ, ರಾಜಣ್ಣ, ಜಯಲಕ್ಷ್ಮಮ್ಮ, ಗೋವಿಂದನಾಯಕ, ಚಂದ್ರೇಗೌಡ, ಹೆಚ್.ಎಸ್.ಸುಮಿತ್ರಾ, ಕರಿಹುಚ್ಚಮ್ಮ, ಜಿಲ್ಲಾ ವ್ಯವಸ್ಥಾಪಕ ಸುರೇಶ್ ಹಾಗೂ ಬ್ಯಾಂಕ್ ವ್ಯವಸ್ಥಾಪಕ ರಾಜೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಸಹಕಾರದಿಂದ ಅಭಿವೃದ್ಧಿ ಸಾಧ್ಯ: ಡಾ.ಎಂ.ವಿ.ವೆಂಕಟೇಶ್

**ರಾಮನಗರ:** ಮನುಷ್ಯ ಹುಟ್ಟಿನಿಂದ ಸಾವಿನವರೆಗೂ ಸಹಕಾರದೊಂದಿಗೆ ಜೀವನ ನಡೆಸುತ್ತಾನೆ. ಸಹಕಾರ ಕ್ಷೇತ್ರವು ಸಮಾಜದ ಎಲ್ಲ ಚಟುವಟಿಕೆಗಳಲ್ಲೂ ಮಹತ್ವದ ಪಾತ್ರ ವಹಿಸುತ್ತಿದ್ದು, ಸಹಕಾರದಿಂದ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರಾದ ಡಾ. ಎಂ.ವಿ. ವೆಂಕಟೇಶ್ ಹೇಳಿದರು.



ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ದಕ್ಷಿಣ ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ಜಿಲ್ಲೆಯ ವಿವಿಧ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಹಕಾರ ಸಪ್ತಾಹ ಆಚರಣೆ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಇಲಾಖೆಯನ್ನು ಇನ್ನಷ್ಟು ಬಲಪಡಿಸಲು ಹಾಗೂ ಸಹಕಾರ ಕ್ಷೇತ್ರದ ಮಹತ್ವವನ್ನು ಜನರಿಗೆ ತಿಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿವರ್ಷ ಸಹಕಾರ ಸಪ್ತಾಹವನ್ನು ಆಚರಿಸುತ್ತಿವೆ. 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯದೊಂದಿಗೆ ಜೂನ್ 29ರಿಂದ ಜುಲೈ 6ರವರೆಗೆ ರಾಜ್ಯಾದ್ಯಂತ ಸಹಕಾರ ಸಪ್ತಾಹವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಮನುಷ್ಯನ ಜೀವನದ ಪ್ರತಿಯೊಂದು ಹಂತದಲ್ಲೂ ಸಹಕಾರ ಕ್ಷೇತ್ರದ ನೇರ ಅಥವಾ ಪರೋಕ್ಷ ಸಂಬಂಧವಿದೆ. ರೈತರ ಅಭಿವೃದ್ಧಿ, ಬಡತನ ನಿರ್ಮೂಲನೆ, ಗ್ರಾಮೀಣ ಆರ್ಥಿಕ ಪ್ರಗತಿ ಸೇರಿದಂತೆ ದೇಶದ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಮಹಾರಾಷ್ಟ್ರ, ಗುಜರಾತ್ ಹಾಗೂ ಕೇರಳ ರಾಜ್ಯಗಳಲ್ಲಿ ಸಹಕಾರ ಕ್ಷೇತ್ರವು ಅತ್ಯಂತ ಬಲಿಷ್ಠವಾಗಿದೆ. ಸಹಕಾರ ಸಂಘಗಳನ್ನು ಇನ್ನಷ್ಟು ಸದೃಢಗೊಳಿಸುವ ಮೂಲಕ ರೈತರ ಆದಾಯ ಹೆಚ್ಚಿಸುವುದು, ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವುದು ಹಾಗೂ ದೇಶದ ಅಭಿವೃದ್ಧಿಗೆ ವೇಗ ನೀಡಬಹುದು ಎಂದು ತಿಳಿಸಿದರು.

ರಾಜ್ಯದ ಪ್ರತಿಯೊಂದು ಗ್ರಾಮದಲ್ಲೂ ಸಹಕಾರ ಸಂಘಗಳನ್ನು ಶಕ್ತಿಕೇಂದ್ರಗಳನ್ನಾಗಿ ರೂಪಿಸುವ ಉದ್ದೇಶದಿಂದ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಕೇವಲ ಸಾಲ ವಿತರಣೆ ಮಾತ್ರವಲ್ಲದೆ, 25ಕ್ಕೂ ಹೆಚ್ಚು ವಿವಿಧ ಸೇವೆಗಳನ್ನು ಒದಗಿಸುವ ಬಹುಉದ್ದೇಶದ ವಾಣಿಜ್ಯ ಕೇಂದ್ರಗಳಾಗಿ ಸಹಕಾರ ಸಂಘಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ರೈತರ ಮೂಲಭೂತ ಅಗತ್ಯಗಳನ್ನು ಪೂರೈಸುವಲ್ಲಿ ಸಹಕಾರ ಇಲಾಖೆಯ ಪಾತ್ರ ಮಹತ್ವದ್ದಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವಿವಿಧ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುವವರು ಪ್ರಾಮಾಣಿಕತೆ ಹಾಗೂ ದಕ್ಷತೆಯಿಂದ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಚ್.ಎನ್. ಅಶೋಕ್ ಮಾತನಾಡಿ, ಸರ್ಕಾರಿ ನೌಕರರ ವೇತನ ಸೇರಿದಂತೆ ವಿವಿಧ ಸರ್ಕಾರಿ ವಹಿವಾಟುಗಳು ಜಿಲ್ಲಾ ಮಟ್ಟದ ಡಿಸಿಸಿ ಬ್ಯಾಂಕ್‌ಗಳ ಮೂಲಕ ನಡೆಯುವಂತಾದರೆ ಸಹಕಾರಿ ಬ್ಯಾಂಕುಗಳ ಬೆಳವಣಿಗೆಗೆ ನೆರವಾಗುತ್ತದೆ. ಈ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಉತ್ತಮ ಅವಕಾಶಗಳಿವೆ. ಹಾಲು ಉತ್ಪಾದನೆಯಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಧನಂಜಯ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಂಜು, ಲಿಂಗೇಶ್ ಕುಮಾರ್, ಜೆಆರ್‌ಸಿಎಸ್ ಡಾ.ಉಮೇಶ್, ಜಂಟಿ ನಿಬಂಧಕ ಪುಂಡಲೀಕ ಎಲ್.ಸಾಧುರೆ, ನಿರ್ದೇಶಕರಾದ ಚಂದ್ರೇಗೌಡ, ರಾಜಣ್ಣ, ಕ್ಯಾಸಾಪುರ ಶ್ರೀಧರ್, ಕೆ.ಪಿ. ಗುರುಸ್ವಾಮಿ, ಸಹಕಾರ ಉಪನಿಬಂಧಕಿ ಕವಿತಾ, ಸಹಾಯಕ ನಿಬಂಧಕ ಪ್ರದೀಪ್ ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಸೇರಿದಂತೆ ವಿವಿಧ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಹಸ್ರ ಸಸಿ ನೆಡುವ ಅಭಿಯಾನ ಜು.12ಕ್ಕೆ

**ಮಂಡ್ಯ:** ಪರಿಸರ ಸಂರಕ್ಷಣೆಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜು.12 ರಂದು ಬೆಳಿಗ್ಗೆ 9.30ಕ್ಕೆ ವಿಶ್ವ ಪರಿಸರ ದಿನಾಚರಣೆ–2026 ಅಂಗವಾಗಿ ಮಾತೃಗೊಂದು ಮರುಸಹಸ್ರ ಸಸಿ ನೆಡುವ ಅಭಿಯಾನ 4ನೇ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾಗಮಂಗಲ ತಾಲೂಕಿನ ಪಡುವಳಪಟ್ಟಣ ಗ್ರಾಮದ ಕಾನನ್ ಬ್ರಹ್ಮದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಸಸಿ ನೆಡುವ ಮೂಲಕ ಹಸಿರು ವಿಸ್ತರಣೆಗೆ ಮಹತ್ವದ ಕೊಡುಗೆ ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮವನ್ನು ಶಿಸ್ತಿನಿಂದ ಹಾಗೂ ಯಶಸ್ವಿಯಾಗಿ ನಡೆಸಲು ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಸ್ಥಳದ ಸ್ವಚ್ಛತೆ, ನೀರಿನ ವ್ಯವಸ್ಥೆ, ನೆರಳಿನ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಸರಿಯಾಗಿ ಕಲ್ಪಿಸಬೇಕು ಎಂದು ಸೂಚಿಸಿದರು. ಯಾವುದೇ ಲೋಪವಾಗದಂತೆ ಪೂರ್ವಸಿದ್ಧತೆ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕಾರ್ಯಕ್ರಮದ ದಿನ ಶಾಲಾಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ವಿವಿಧ ಸಂಘಸಂಸ್ಥೆಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಯಿತು. ಪರಿಸರ ಸಂರಕ್ಷಣೆಯ ಮಹತ್ವವನ್ನು ಜನರಿಗೆ ತಲುಪಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು, ಸದಸ್ಯ ಕಾರ್ಯದರ್ಶಿಗಳು, ಜಿಪಂ ಸಿಇಓ ಕೆ.ಆರ್.ನಂದಿನಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



# ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಯನ್ನು ಸೇವೆಯಿಂದ ವಜಾಗೊಳಿಸಲು ಒತ್ತಾಯ

**ಮಂಡ್ಯ:** ಪತಿಯ ಜಮೀನು ಪತ್ನಿ ಹೆಸರಿಗೆ ಪೌತಿಕಾತೆ ಮಾಡದ ಕೆ.ಆರ್.ಪೇಟೆ ತಹಶೀಲ್ದಾರ್ ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿಯನ್ನು ಸೇವೆ ಯಿಂದ ವಜಾ ಮಾಡುವಂತೆ ಒತ್ತಾಯಿಸಿ ಜು.9ರಂದು ಪಾಂಡವಪುರ ಉಪವಿಭಾಗಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮಾಡುವುದಾಗಿ ದಲಿತ ಸಂಘರ್ಷ ಸಮಿತಿಯ ದೇವರಾಜು ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರದಿಂದ ನೀಡಲಾದ ದರಕಾಸ್ತು ಜಮೀನನ್ನು ಪತಿಯ ಸಾವಿನ ನಂತರ ಚೌಡಮ್ಮ ಹೆಸರಿಗೆ ಮಾಡಲು ಅನಗತ್ಯ ತೊಂದರೆ ನೀಡಲಾಗುತ್ತಿದೆ. ಇದು ಅಧಿಕಾರಿಗಳ ಜಾತಿವಾದಿತನ, ದನದಾಹಿ, ದಲಿತ ವಿರೋಧಿ ನೀತಿಯನ್ನು ತೋರುತ್ತದೆ ಎಂದು ಆರೋಪಿಸಿದರು.

ಈ ಸಂಬಂಧ ರಾಜಸ್ವ ನಿರೀಕ್ಷಕಿ ಚಂದ್ರಕಲಾ ಅವರು ಪಾಂಡವಪುರ ಉಪವಿಭಾಗಾಧಿಕಾರಿ ನ್ಯಾಯಾಲಯದ ಆದೇಶ ನಿರ್ಲಕ್ಷಿಸಿ ತಹಶೀಲ್ದಾರ್ ಅವರಿಗೆ ತಪ್ಪಾದ ವರದಿ ನೀಡಿದ್ದಾರೆ. ಇದರಿಂದ ಹಾಲಿ ಉಪವಿಭಾಗಾಧಿಕಾರಿಗಳು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಬರದ ಪಿಟಿಸಿಎಲ್ ಪ್ರಕರಣವಾಗಿ ಪರಿಗಣಿಸಿ ಆದೇಶ ನೀಡಿದ್ದಾರೆ ಎಂದು ದೂರಿದರು.

ಈ ಹಿಂದೆ ಇದ್ದ ಉಪವಿಭಾಗಾಧಿಕಾರಿಗಳ ಆದೇಶ ಧಿಕ್ಕರಿಸಿ ಪಿಟಿಸಿಎಲ್ ಕಾಯ್ದೆಯ ಅರಿವಿಲ್ಲದೇ ಗಂಡನ ಜಮೀನನ್ನು ಪೌತಿಕಾತೆ ಮಾಡದೇ ಕಾನೂನು ಬಾಹಿರವಾಗಿ ತಹಶೀಲ್ದಾರ್ ಮತ್ತು ಪಾಂಡವಪುರ ಹಾಲಿ ಉಪವಿಭಾಗಾಧಿಕಾರಿಗಳು ತಮ್ಮ ಕೇಸ್‌ವರ್ಕರ್ ಪುನೀತ್ ಹೇಳಿದಂತೆ ನಡೆದುಕೊಳ್ಳುತ್ತಿದ್ದಾರೆ. ಈ ಸಂಬಂಧ ಕಂದಾಯ ಇಲಾಖೆಯಿಂದ ತನಿಖೆ ನಡೆಸಬೇಕು. ಕಾನೂನು ವಿರೋಧಿ ನೀತಿ ಅನುಸರಿಸುತ್ತಿರುವ ಉಪವಿಭಾಗಾಧಿಕಾರಿ ಶ್ರೀನಿವಾಸ್ ಹಾಗೂ ತಹಶೀಲ್ದಾರ್ ಉಮಮಹೇಶ್ವರಪ್ಪ ಅಶೋಕ, ಮತ್ತವರ ಕೇಸ್‌ವರ್ಕರ್ ಪುನೀತ್, ಬೂಕನಕೆರೆ ರಾಜಸ್ವ ನಿರೀಕ್ಷಕಿ ಚಂದ್ರಕಲಾ ಅವರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ರಮೇಶ್, ಗಂಗಾಧರ್, ಚೌಡಮ್ಮ, ಶಿವಲಿಂಗಯ್ಯ ಇತರರಿದ್ದರು.

# ವಿದ್ಯಾರ್ಥಿಗಳು ಸತತ ಪರಿಶ್ರಮದಿಂದ ಓದಿದಾಗ ಮಾತ್ರ ಯಶಸ್ಸು ಸಾಧ್ಯ: ಪ್ರಸನ್ನಕುಮಾರ್ ಅಭಿಮತ

**ಮಳವಳ್ಳಿ:** ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿ ಗಳು ಪರೀಕ್ಷೆ ಹತ್ತಿರ ಬರು ವವರೆಗೂ ಉದಾಸೀನತೆಯಿಂದ ನಡೆದು ಕೊಳ್ಳುತ್ತಾರೆ. ಪರೀಕ್ಷೆ ಸಮೀಪಿಸಿದಾಗ ಪುಸ್ತಕ ಹಿಡಿದು ಓದಲು ಮುಂದಾಗುತ್ತಾರೆ. ಇದು ಒಳ್ಳೆಯ ದಲ್ಲ. ಸತತ ಪರಿಶ್ರಮದಿಂದ ಓದಿದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಶಾಲಾಶಿಕ್ಷಣ(ಪದವಿ ಪೂರ್ವ) ಇಲಾಖೆಯ ಉಪನಿರ್ದೇಶಕರಾದ ಪ್ರಸನ್ನಕುಮಾರ್ ತಿಳಿಸಿದರು.




ತಾಲ್ಲೂಕಿನ ಸರಗೂರು ಹ್ಯಾಂಡ್ ಪೋಸ್ಟ್ ನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜುಲೈ 03ರ ಶುಕ್ರವಾರ ಸಾಂಸ್ಕೃತಿಕ, ಕ್ರೀಡಾಚಟುವಟಿಕೆಗಳ ಉದ್ಘಾಟನೆ ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಸರ್ಕಾರಿ ಶುಲ್ಕ ಪಾವತಿ,ಸಮವಸ್ತ್ರ, ನೋಟ್ ಬುಕ್,ಪ್ರಾಕ್ಟಿಕಲ್ ಬುಕ್ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಗುರುಗಳು ಹೇಳಿಕೊಟ್ಟ ಪಾಠ ಪ್ರವಚನಗಳನ್ನು ಶ್ರದ್ಧೆಯಿಂದ ಓದಬೇಕು. ಮನೆಗೆ ಹೋದ ಬಳಿಕ ಅಂದಿನ ಪಾಠಗಳನ್ನು ಅಂದೇ ಮನನ ಮಾಡಿಕೊಳ್ಳಬೇಕು. ನೂರಕ್ಕೆ ನೂರರಷ್ಟು ಫಲಿತಾಂಶಕ್ಕೆ ಶ್ರಮಿಸಿ ಓದಬೇಕು, ನಿಮ್ಮ ತಂದೆ ತಾಯಿ, ನಿಮ್ಮ ಊರಿಗೆ ಕೀರ್ತಿ ತರುವಂತರಾಗಬೇಕು" ಎಂದು ತಿಳಿಸಿದರು

ಲಯನ್ಸ್ ಜಿಲ್ಲೆ317ಉ ನ ಎರಡನೇ ಉಪಜಿಲ್ಲಾ ರಾಜ್ಯಪಾಲರಾದ ಲಯನ್ ಎಂ ಸಿದ್ದೇಗೌಡ ಮಾತನಾಡಿ"ಈ ಹಿಂದೆ ನಾವು ವಿದ್ಯಾಭ್ಯಾಸ ಮಾಡುವ ವೇಳೆ ಸುಮಾರು ಐದರಿಂದ ಆರು ಕಿಲೋಮೀಟರ್ ದೂರ ನಡೆದು ಕೊಂಡು ಶಾಲೆಗೆ ಹೋಗುತ್ತಿದ್ದವು. ಅಂದು ನಾವು ಪಟ್ಟಂತ ಶ್ರಮದ ಫಲದಿಂದಲೇ ಇಂದು ಉನ್ನತ ಹುದ್ದೆಯಲ್ಲಿದ್ದೇವೆ ಪ್ರಾಂಶುಪಾಲರಾದ ಹನುಮಂತಯ್ಯ ರವರು ಬರೀ ಪಾಠಮಾಡಬಹುದಿತ್ತು. ಆದರೆ ಗ್ರಾಮೀಣಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ದಾನಿಗಳ ನೆರವಿನಿಂದ ಸಮವಸ್ತ್ರ, ನೋಟ್ ಬುಕ್ ಕೊಡಿಸುವುದರ ಜೊತೆಗೆ,ಸರ್ಕಾರಿ ಶುಲ್ಕ ಪಾವತಿ ಮಾಡಿಸುತ್ತಿದ್ದಾರೆ.ನೀವು ಇದರ ಉಪಯೋಗ ಪಡೆದುಕೊಂಡು ಉನ್ನತ ಅಧಿಕಾರಿಗಳಾಗಿ ಬಡ ವಿದ್ಯಾರ್ಥಿಗಳಿಗೆ ತಮ್ಮ ಕೈಲಾದ ಸೇವೆ ಮಾಡಿ"ಎಂದು ತಿಳಿಸಿದರು.

ಪ್ರಾಂಶುಪಾಲರಾದ ಹನುಮಂತಯ್ಯ ಅಧ್ಯಕ್ಷತೆ ವಹಿಸಿದ್ದರು.

ದ್ವಿತೀಯ ಪಿಯುಸಿಯಲ್ಲಿ ನೂರಕ್ಕೆ ನೂರು ಫಲಿತಾಂಶ ನೀಡಿರುವ ಉಪನ್ಯಾಸಕರನ್ನು ಮತ್ತು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಲಯನ್ಸ್ ಲಿಯೋ ಕ್ಲಬ್ ನ ಜಿಲ್ಲಾ ಅಧ್ಯಕ್ಷ ರಾದ ಲ.ಬಿ ಜೆ ಮನು,ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ ಕುಮಾರಸ್ವಾಮಿ, ಮಂಡ್ಯದ ಪ್ರಾಂಶುಪಾಲರಾದ ಗುರು ಲಿಂಗೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಉಪನ್ಯಾಸಕರಾದ ಡಾ.ಎನ್ ಕೃಷ್ಣಪ್ಪ, ಎಸ್ ಜಯಶ್ರೀ, ಶೋಭ,ವಿ.ಗಿರಿಧರ,ಕುಂದೂರನಾಯಕ, ಲೋಕೇಶ್ ಕುಮಾರ್ ಮುಂತಾದವರು ಉಪಸ್ಥಿತರಿದ್ದರು

# ದಡ್ಡರನ್ನು ದೊಡ್ಡವರನ್ನಾಗಿ ಬೆಳೆಸುವುದು, ವಿದ್ಯಾವಂತ ದಡ್ಡರಿಂದಲೇ ಸಾಧ್ಯ!



ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಸಮಾಜವನ್ನು ಮುನ್ನಡೆಸುವುದು ಕೇವಲ ಪದವಿಗಳಲ್ಲ, ವಿವೇಕ. ವಿಶ್ವವಿದ್ಯಾಲಯಗಳು ಜ್ಞಾನವನ್ನು ನೀಡಬಹುದು; ಆದರೆ ಸತ್ಯವನ್ನು ಗುರುತಿಸುವ ಧೈರ್ಯವನ್ನು ಪ್ರತಿಯೊಬ್ಬರೂ ತಮ್ಮೊಳಗೆ ಬೆಳೆಸಿಕೊಳ್ಳಬೇಕು. ವಿದ್ಯೆ ಎನ್ನುವುದು ಕೇವಲ ಅಂಕಪಟ್ಟಿಯಲ್ಲಿ ಕಾಣುವ ಸಾಧನೆಯಲ್ಲ; ಅದು ಮಾನವೀಯತೆ, ತರ್ಕ, ಜವಾಬ್ದಾರಿ ಮತ್ತು ನೈತಿಕತೆಯೊಂದಿಗೆ ಸೇರಿಕೊಂಡಾಗ ಮಾತ್ರ ನಿಜವಾದ ಬೆಳಕಾಗುತ್ತದೆ.

ಈ ಕಾರಣಕ್ಕೇ, "ದಡ್ಡರನ್ನು ದೊಡ್ಡವರನ್ನಾಗಿ ಬೆಳೆಸುವುದು, ವಿದ್ಯಾವಂತ ದಡ್ಡರಿಂದಲೇ ಸಾಧ್ಯ!" ಎಂಬ ವಾಕ್ಯವು ವ್ಯಕ್ತಿಗಳನ್ನು ಅಲ್ಲ, ಒಂದು ಸಾಮಾಜಿಕ ಪ್ರವೃತ್ತಿಯನ್ನು ಪ್ರಶ್ನಿಸುವ ಚಿಂತನೆಯಾಗಿದೆ.

ವಿದ್ಯಾವಂತನಾಗುವುದು ಸುಲಭ. ಆದರೆ ವಿವೇಕವಂತನಾಗುವುದು ಕಷ್ಟ. ಪದವಿಗಳನ್ನು ಪಡೆಯಲು ವರ್ಷಗಳು ಬೇಕಾಗಬಹುದು; ಆದರೆ ಸತ್ಯದ ಪರವಾಗಿ ನಿಲ್ಲಲು ಕೇವಲ ಒಂದು ದೃಢ ಮನಸ್ಸು ಸಾಕು. ಕೆಲವೊಮ್ಮೆ ಉನ್ನತ ಶಿಕ್ಷಣ ಪಡೆದವರೇ ಅಸತ್ಯವನ್ನು ಪ್ರಶ್ನಿಸದೆ ಒಪ್ಪಿಕೊಂಡಾಗ, ಅಯೋಗ್ಯರು ಮತ್ತು ಅಜ್ಞಾನಿಗಳು ಸಮಾಜದಲ್ಲಿ ದೊಡ್ಡವರಂತೆ ಕಾಣಲು ಆರಂಭಿಸುತ್ತಾರೆ. ಅದು ಅವರ ಸಾಮರ್ಥ್ಯದಿಂದಲ್ಲ; ಪ್ರಶ್ನಿಸಬೇಕಾದವರು ಮೌನವಾಗಿರುವುದರಿಂದ.

ಮೌನಕ್ಕೂ ಒಂದು ಬೆಲೆ ಇದೆ. ಅನ್ಯಾಯದ ಎದುರು ಮೌನ ವಹಿಸಿದಾಗ, ಆ ಮೌನವೇ ಅನ್ಯಾಯಕ್ಕೆ ಬೆಂಬಲವಾಗುತ್ತದೆ. ಸುಳ್ಳು ಹರಡಿದಾಗ ಅದನ್ನು ತಿದ್ದದಿರುವುದು, ಅಸತ್ಯವನ್ನು ಬಲಪಡಿಸುವಂತೆಯೇ ಆಗುತ್ತದೆ. ಸಮಾಜದಲ್ಲಿ ತಪ್ಪು ಮಾಹಿತಿಗಳು, ಮೂಢನಂಬಿಕೆಗಳು ಅಥವಾ ವ್ಯಕ್ತಿಪೂಜೆಗಳು ಬೆಳೆದುಬರುವುದು, ಅವುಗಳನ್ನು ಪ್ರಶ್ನಿಸುವ ಧೈರ್ಯ ಕಡಿಮೆಯಾಗುವಾಗ.




ನಿಜವಾದ ವಿದ್ಯಾವಂತನು ತನ್ನ ಜ್ಞಾನವನ್ನು ಪ್ರದರ್ಶನಕ್ಕೆ ಬಳಸುವುದಿಲ್ಲ; ಸಮಾಜದ ಒಳಿತಿಗಾಗಿ ಬಳಸುತ್ತಾನೆ. ಅವನು ತಪ್ಪನ್ನು ತಪ್ಪೆಂದು ಹೇಳುತ್ತಾನೆ, ಸತ್ಯವನ್ನು ಸತ್ಯವೆಂದು ಒಪ್ಪಿಕೊಳ್ಳುತ್ತಾನೆ. ಪ್ರಶಂಸೆಗಾಗಿ ಅಲ್ಲ, ಪ್ರಾಮಾಣಿಕತೆಯಿಗಾಗಿ ಬದುಕುತ್ತಾನೆ.

ಇಂದು ಮಾಹಿತಿ ಕ್ಷಣಾರ್ಧದಲ್ಲಿ ಹರಡುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಒಂದು ಸುಳ್ಳು ಸಾವಿರ ಬಾರಿ ಹಂಚಿಕೆಯಾದರೆ, ಕೆಲವರಿಗೆ ಅದು ಸತ್ಯವೆಂದು ಕಾಣಬಹುದು. ಇಂತಹ ಸಂದರ್ಭದಲ್ಲಿ ಓದಿರುವವರು ತರ್ಕಬದ್ಧವಾಗಿ ಪರಿಶೀಲಿಸಿ ಸತ್ಯವನ್ನು ಹೇಳುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಅವರು ಕೂಡ ಪರಿಶೀಲಿಸದೆ ಸುಳ್ಳನ್ನು ಹರಡಿದರೆ, ಅವರ ವಿದ್ಯೆ ಸಮಾಜಕ್ಕೆ ಬೆಳಕಾಗದೆ ನೆರಳಾಗುತ್ತದೆ.

ಇಲ್ಲಿ "ದಡ್ಡ" ಎಂಬ ಪದವನ್ನು ಯಾರನ್ನಾದರೂ ಅವಮಾನಿಸಲು ಬಳಸಬಾರದು. ಅದು ವಿವೇಕವಿಲ್ಲದೆ ನಡೆದುಕೊಳ್ಳುವ, ಪ್ರಶ್ನಿಸದೆ ನಂಬುವ, ಅಥವಾ ತಿಳಿದಿದ್ದೂ ತಪ್ಪಿಗೆ ಬೆಂಬಲ ನೀಡುವ ಮನೋಭಾವದ ರೂಪಕವಾಗಿ ಅರ್ಥೈಸಬಹುದು. ಒಬ್ಬ ವ್ಯಕ್ತಿಯ ಮೌಲ್ಯವನ್ನು ಅವನ ವಿದ್ಯೆ ಮಾತ್ರ ನಿರ್ಧರಿಸುವುದಿಲ್ಲ; ಅವನ ನಡೆ-ನುಡಿ ನಿರ್ಧರಿಸುತ್ತದೆ.

ಇತಿಹಾಸದಲ್ಲಿ ಅನೇಕ ಬದಲಾವಣೆಗಳನ್ನು ತಂದವರು ದೊಡ್ಡ ಹುದ್ದೆಯವರೇ ಆಗಿರಲಿಲ್ಲ. ಆದರೆ ಸತ್ಯದ ಪರವಾಗಿ ನಿಂತವರು. ಅವರಿಗೆ ಸಮಾಜದ ಹಿತವೇ ಮುಖ್ಯವಾಗಿತ್ತು. ಅವರು ಜನರನ್ನು ಯೋಚಿಸಲು ಕಲಿಸಿದರು, ಅಂಧಾನುಕರಣ ಮಾಡಲು ಅಲ್ಲ.

ಪ್ರತಿಯೊಬ್ಬ ಶಿಕ್ಷಕ, ಲೇಖಕ, ಪತ್ರಕರ್ತ, ವಿಜ್ಞಾನಿ, ನ್ಯಾಯವಾದಿ, ವೈದ್ಯ, ಅಧಿಕಾರಿ ಅಥವಾ ನಾಯಕ ಸಮಾಜದ ಮೇಲೆ ಪ್ರಭಾವ ಬೀರುತ್ತಾನೆ. ಅವರ ಮಾತು ಮತ್ತು ನಡೆ ಅನೇಕ ಜನರಿಗೆ ದಾರಿದೀಪವಾಗಬಹುದು. ಆದ್ದರಿಂದ ಜ್ಞಾನ ಹೊಂದಿರುವವರ ಜವಾಬ್ದಾರಿಯೂ ಹೆಚ್ಚಿರುತ್ತದೆ. ಆ ಜ್ಞಾನವನ್ನು ತಪ್ಪು ದಾರಿಗೆ ಬಳಸಿದರೆ, ಅದರ ಪರಿಣಾಮವೂ ದೊಡ್ಡದಾಗಬಹುದು.

ಒಬ್ಬ ಸಾಮಾನ್ಯ ವ್ಯಕ್ತಿ ತಪ್ಪು ಮಾಡಿದರೆ ಅದರ ಪರಿಣಾಮ ಸೀಮಿತವಾಗಿರಬಹುದು. ಆದರೆ ಜ್ಞಾನ ಮತ್ತು ಪ್ರಭಾವ ಹೊಂದಿರುವವರು ತಪ್ಪನ್ನು ಸಮರ್ಥಿಸಿದರೆ, ಅನೇಕರು ಅದನ್ನೇ ಅನುಸರಿಸುವ ಸಾಧ್ಯತೆ ಇದೆ. ಆದ್ದರಿಂದ ವಿದ್ಯೆ ಜೊತೆಗೂಡಿ ವಿನಯ, ತರ್ಕ ಮತ್ತು ನೈತಿಕತೆ ಬೆಳೆಯಬೇಕು.

ಸಮಾಜಕ್ಕೆ ಬೇಕಾಗಿರುವುದು ಹೆಚ್ಚು ಪದವೀಧರರಲ್ಲ; ಹೆಚ್ಚು ಜವಾಬ್ದಾರಿಯುತ ನಾಗರಿಕರು. ಶಾಲೆಗಳು ಅಕ್ಷರಜ್ಞಾನ ಕಲಿಸುತ್ತವೆ. ಆದರೆ ಬದುಕಿನ ಜ್ಞಾನವನ್ನು ನಮ್ಮ ಆಯ್ಕೆಗಳು ರೂಪಿಸುತ್ತವೆ. ಪ್ರತಿಯೊಬ್ಬರೂ ಕೇಳಬೇಕಾದ ಪ್ರಶ್ನೆ ಒಂದೇ "ನಾನು ಸತ್ಯವನ್ನು ಬೆಂಬಲಿಸುತ್ತಿದ್ದೀನೆಯೇ, ಅಥವಾ ಜನಪ್ರಿಯತೆಯನ್ನು?"

ಯಾರನ್ನೂ ದೇವರನ್ನಾಗಿ ಕಾಣುವ ಅಗತ್ಯವಿಲ್ಲ; ಯಾರನ್ನೂ ಶತ್ರುವೆಂದು ಕಾಣುವ ಅಗತ್ಯವೂ ಇಲ್ಲ. ವ್ಯಕ್ತಿಗಿಂತ ಮೌಲ್ಯಗಳು ದೊಡ್ಡವು. ಅಭಿಪ್ರಾಯಕ್ಕಿಂತ ಸತ್ಯ ದೊಡ್ಡದು. ಹೊಗಳಿಕೆಗೆ ಮೀರಿದದ್ದು ಪ್ರಾಮಾಣಿಕ ವಿಮರ್ಶೆ.

ವಿವೇಕವಿಲ್ಲದ ವಿದ್ಯೆ, ದಿಕ್ಕಿಲ್ಲದ ಹಡಗಿನಂತಿದೆ. ಅದು ಎಷ್ಟು ದೊಡ್ಡದಾಗಿದ್ದರೂ ಸರಿಯಾದ ತೀರ ತಲುಪುವುದಿಲ್ಲ. ಅದೇ ರೀತಿ, ಮಾನವೀಯತೆ ಇಲ್ಲದ ಜ್ಞಾನ ಸಮಾಜಕ್ಕೆ ಭಾರವಾಗಬಹುದು. ನಿಜವಾದ ಶಿಕ್ಷಣ ಮನುಷ್ಯನನ್ನು ವಿನಮ್ರನನ್ನಾಗಿ ಮಾಡಬೇಕು; ಅಹಂಕಾರಿಯನ್ನಾಗಿ ಅಲ್ಲ.

ನಮ್ಮ ಮಕ್ಕಳಿಗೂ ಕೇವಲ ಅಂಕಗಳ ಸ್ಪರ್ಧೆ ಕಲಿಸದೆ, ಪ್ರಶ್ನಿಸುವ ಗುಣ, ತರ್ಕಬದ್ಧ ಚಿಂತನೆ, ಭಿನ್ನಾಭಿಪ್ರಾಯವನ್ನು ಗೌರವಿಸುವ ಸಂಸ್ಕೃತಿ ಮತ್ತು ಸತ್ಯವನ್ನು ಒಪ್ಪಿಕೊಳ್ಳುವ ಧೈರ್ಯವನ್ನು ಕಲಿಸಬೇಕು. ಇದೇ ಶಿಕ್ಷಣದ ನಿಜವಾದ ಗುರಿ. ಯಾವುದೇ ಸಮಾಜದ ಪ್ರಗತಿ ಅದರ ಕಟ್ಟಡಗಳ ಎತ್ತರದಿಂದ ಅಳೆಯುವುದಿಲ್ಲ; ಅದರ ನಾಗರಿಕರ ಚಿಂತನೆಯ ಎತ್ತರದಿಂದ ಅಳೆಯಲಾಗುತ್ತದೆ. ಪುಸ್ತಕಗಳನ್ನು ಓದುವುದು ಮುಖ್ಯ. ಆದರೆ ಬದುಕನ್ನೂ ಓದಬೇಕು. ಮಾಹಿತಿಯನ್ನು ಕಲೆಹಾಕುವುದು ಮುಖ್ಯ. ಆದರೆ ಅದನ್ನು ವಿವೇಕದಿಂದ ಪರಿಶೀಲಿಸುವುದು ಇನ್ನೂ ಮುಖ್ಯ.

ವಿದ್ಯೆ ನಮ್ಮನ್ನು ದೊಡ್ಡವರನ್ನಾಗಿಸಬಹುದು; ಆದರೆ ವಿವೇಕವೇ ನಮ್ಮನ್ನು ಉತ್ತಮ ಮನುಷ್ಯರನ್ನಾಗಿಸುತ್ತದೆ. ಜ್ಞಾನವು ಸತ್ಯದ ಜೊತೆ ಕೈಜೋಡಿಸಿದಾಗ ಮಾತ್ರ ಸಮಾಜಕ್ಕೆ ಬೆಳಕು ನೀಡುತ್ತದೆ. ಇಲ್ಲದಿದ್ದರೆ, ಜ್ಞಾನವೇ ತಪ್ಪನ್ನು ಸಮರ್ಥಿಸುವ ಸಾಧನವಾಗುವ ಅಪಾಯವಿದೆ.

ಆದ್ದರಿಂದ, ಶಿಕ್ಷಣವನ್ನು ಕೇವಲ ಉದ್ಯೋಗಕ್ಕಾಗಿ ಮಾತ್ರವಲ್ಲ, ಉತ್ತಮ ಸಮಾಜಕ್ಕಾಗಿ ಬಳಸೋಣ. ಪ್ರಶ್ನಿಸೋಣ, ಪರಿಶೀಲಿಸೋಣ, ಸತ್ಯವನ್ನು ಗೌರವಿಸೋಣ. ಏಕೆಂದರೆ ನಿಜವಾದ ವಿದ್ಯಾವಂತನು ಯಾರನ್ನೂ ಅಂಧವಾಗಿ ದೊಡ್ಡವರನ್ನಾಗಿಸುವುದಿಲ್ಲ; ಬದಲಾಗಿ ಪ್ರತಿಯೊಬ್ಬರಲ್ಲೂ ವಿವೇಕವನ್ನು ಬೆಳೆಸಲು ಪ್ರಯತ್ನಿಸುತ್ತಾನೆ. ಅದುವೇ ಶಿಕ್ಷಣದ ಸಾರ್ಥಕತೆ, ಅದುವೇ ಸಮಾಜದ ನಿಜವಾದ ಪ್ರಗತಿ.

---



# ಲೆಕ್ಕಾಚಾರದ ಜೀವನ



ಪುಷ್ಪ ಪ್ರಸಾದ್

ಒಲವೇ ಜೀವನ ಲೆಕ್ಕಚಾರ ಅಲ್ಲ ಬದುಕೇ ಜೀವನದ ಲೆಕ್ಕಚಾರ ಆಗ್ಬಿಟ್ಟಿದೆ ಇಂದು. ನಮ್ಮೆಲ್ಲರ ಜೀವನ ಲೆಕ್ಕಚಾರದ ಮೇಲೆಯೇ ನಿಂತಿದೆ ಎಂದರೆ ತಪ್ಪಾಗಲಾರದು. ನಾನು ನನ್ನದು ಅನ್ನುವ ಲೆಕ್ಕಾಚಾರದೊಳಗಡೆ ಬದುಕು ನಮ್ಮೊಳಗಿನ ಪ್ರತಿಭೆಯನ್ನು ಹುಡುಕುವ ಕಲೆ, ಹೊಸತನ್ನು ಅನ್ವೇಷಿಸಿ, ಅನುಕರಿಸುವ ವಿಜ್ಞಾನವಾಗಿದೆ ಆದ್ರೆ ನಾವೆಲ್ಲರೂ ಬದುಕನ್ನ ವಾಣಿಜ್ಯ ಮಾಡಿಕೊಂಡು, ಕೊಟ್ಟು ತೆಗೆದುಕೊಳ್ಳುವ ವ್ಯವಹಾರಕ್ಕೆ ಹೊಂದಿಕೊಂಡಿದ್ದೇವೆ. 2+2 =4 ಅಂತ ಅಷ್ಟೇ ಯೋಚನೆ ಮಾಡುತ್ತೇವೆ ಹೊರತು 3+1= 4 ಈ ತರನೂ ಆಗುತ್ತದೆ ಎಂದು ಒಪ್ಪಿಕೊಳ್ಳಲು ತಯಾರಿರುವುದಿಲ್ಲ. ನಮ್ಮೆಲ್ಲರ ಆಯ್ಕೆ, ನಿರ್ಧಾರಗಳು ನಮ್ಮ ಮೂಗಿನ ನೇರಕ್ಕೆ ಇರತ್ತವೆ, ಎಲ್ಲರಿಗೂ ಅವರು ಮಾಡಿದ್ದೆ ಸರಿ, ಅವರ ನಿರ್ಧಾರವೇ ನ್ಯಾಯಯುತವಾಗಿರುತ್ತವೆ ಎಂದುಕೊಳ್ಳುತ್ತೇವೆ.

ಇಟ್ಟಿಗೆಯಿಂದ ಗೋಡೆನೂ ಕಟ್ಟಬಹುದು, ಸೇತುವೆನೂ ಕಟ್ಟಬಹುದು, ಆದ್ರೆ ನಾವೆಲ್ಲ ಆಗಿರುವ ಸಣ್ಣ ಮನಸ್ತಾಪಕ್ಕೆ ಆಡಿರುವ ಒಂದು ಮಾತನ್ನೆ ಇಟ್ಟುಕೊಂಡು ಸಂಬಂಧಗಳ ನಡುವೆ ಗೋಡೆ ಕಟ್ಟಿಬಿಡ್ತೀವಿ. ಅದೇ ಕ್ಷಮಿಸಿ ಅನ್ನುವ ಒಂದು ಪದ ಹೇಳುವುದರಿಂದ ಆಗಿರುವ ಎಷ್ಟೊ ಮನಸ್ತಾಪಗಳ ನಡುವೆ ಮನಸುಗಳ ನಡುವೆ ಸೇತುವೆ ನಿರ್ಮಾಣವಾಗಿಬಿಡುತ್ತದೆ. ಒಂದು ಕ್ಷಮೆ ಕೇಳುವುದರಿಂದ ಯಾರೂ ಸೋಲುವುದಿಲ್ಲ ಹಾಗೂ ಒಂದುವೇಳೆ ಸೋಲುತ್ತೇವೆ ಎಂದಾದರೆ ಸೋಲುವುದಾದರೂ ಯಾರ ಮುಂದೆ? ನಮ್ಮನ್ನ ಅತಿಯಾಗಿ ಪ್ರೀತಿಸಿದವರ ಮುಂದೆ ಅಲ್ಲವೇ? ಅವರ ಮುಂದೆ ಗೆದ್ದು ಪಡೆದುಕೊಳ್ಳುವುದಾದರೂ ಏನಿದೆ? ಇನ್ನೂ ಕೆಲವರು ಅಂದುಕೊಳ್ಳುತ್ತೇವೆ ಬ್ರಾಂಡೆಡ್ ಬಟ್ಟೆಗಳನ್ನ, ವಸ್ತುಗಳನ್ನ, ತೆಗೆದುಕೊಂಡರೆ ಜೀವನ ಬ್ರಾಂಡೆಡ್ ಆಗಿರುತ್ತದೆ ಅಂತ, ಎಲ್ಲರೂ ನಮಗೆ ಬೆಲೆ ಕೊಡಬಹುದು ಅಂತ. ಪಾಪಸ್ ಕಳ್ಳಿ ಹೂ ಬೆಟ್ಟದ ಮೇಲೆಯೇ ಬಿಟ್ಟರೂ ಅದನ್ನ ದೇವರಿಗೆ ಮುಡಿಸುವುದಿಲ್ಲ, ಕಮಲ ಕೆಸರಲ್ಲೆ ಬಿಡುತ್ತದೆ ಆದರೂ ದೇವರಿಗೆ ಮುಡಿಸುತ್ತ?ವೆ. ನಾವು ಎಲ್ಲಿರುತ್ತೇವೆ, ಹೇಗೆ ಬದುಕುತ್ತಿದ್ದೇವೆ ಅನ್ನುವುದಕ್ಕಿಂತ ನಾವು ಎಲ್ಲಿದ್ದರೂ ನಮ್ಮತನ ಉಳಿಸಿಕೊಂಡಿದ್ದರೆ ಮಾತ್ರ ಬೆಲೆ ತಂತಾನೆ ಬರುತ್ತದೆ. ದೀಪ ಸುಡುತ್ತೆ ಕೈ ಹಾಕಬೇಡಿ ಅಂದರೂ ಹೇಗೆ ಸುಡುತ್ತೆ ನೋಡೋಣ ಅನ್ನುವ ಕುತೂಹಲ ಎಲ್ಲರಿಗೂ ಇದ್ದೇ ಇದೆ, ಹಾಗೆ ಪ್ರೀತಿ ಕೂಡ. ಪ್ರೀತಿಲಿ ನೋವು, ಮೋಸ, ಕಣ್ಣೀರು ಎಲ್ಲಾ ಇದೆ ಅಂತ ಗೊತ್ತಿದ್ರು ಪ್ರೀತಿ ಮಾಡ್ತಿವಿ. ಯಾರಾದ್ರು ನಮ್ಮಿಂದ ದೂರ ಹೋಗ್ತಾರೆ ಅಂದ್ರೆ ನಮ್ಮಲ್ಲಿ ಅವರಿಗೆ ಇಷ್ಟ ಆಗದೆ ಇರುವ ಯಾವುದೋ ಒಂದು ಗುಣದಿಂದಾನೆ ಅಲ್ವ? ನಮ್ಮಲ್ಲೆ ತಪ್ಪು ಇಟ್ಟುಕೊಂಡು ಬಿಟ್ಟು ಹೋದವರನ್ನ ಮಾತ್ರ ದೂರುತ್ತಾ ಇರುತ್ತೇವೆ ಅಷ್ಟೆ. ಹಾಳಾದ ಈ ಪ್ರೀತಿನೆ ಹೀಗೆ ಅನ್ಸುತ್ತೆ ಅಲ್ವಾ? ಜಗತ್ತಲ್ಲಿ ಎಷ್ಟೇ ಜನ ಹುಡುಗ/ಹುಡುಗಿ ಇದ್ರು ನಮಗೆ ಮಾತ್ರ ಮತ್ತೆ ಮತ್ತೆ ಪ್ರೀತಿ ಹುಟ್ಟೋದು ನಮ್ಮನ್ನ ಬಿಟ್ಟು ಹೋದವರ ಮೇಲೆನೆ ಅಲ್ವಾ? ಹೌದು ನಾವೆಲ್ಲರೂ ತುಂಬಾ ಬ್ಯುಸಿಯಾಗಿರ್ತಿವಿ, ಯಾವುದ್ರಲ್ಲಿ? ಮನೆಯಲ್ಲಿ ಅಮ್ಮ ಸೀರಿಯಲ್ಗಳಲ್ಲಿ, ಅಪ್ಪ ಪಾರ್ಟಿಗಳಲ್ಲಿ, ಮಕ್ಕಳು ಮೊಬೈಲ್ ಗೇಮಲ್ಲಿ, ಇನ್ನೂ 14–18 ವರ್ಷದ ಓದುವ ವಯಸ್ಸಿನ ಮಕ್ಕಳು ಪ್ರೀತಿ–ಪ್ರೇಮದಲ್ಲಿ, 30–40 ವಯಸ್ಸಿನವರು ಮದುವೆ ಆಗಿ ಈಗಲೇ ಮಕ್ಕಳು ಮಾಡಿಕೊಳ್ಳುವುದು ಸರಿಯೇ ಅಥವಾ ಈಗಲೇ ಬೇಡವೋ ಅನ್ನುವ ಯೋಚನೆಯಲ್ಲಿ, ಇದನ್ನೆಲ್ಲಾ ಮಾಡಬೇಕಾಗಿರುವ ಸರಿಯಾದ ವಯಸ್ಸಿನವರು ಅಂದರೆ 23–30 ಅವರು ದುಡಿಮೆ, ದುಡ್ಡು ಮಾಡುವುದರಲ್ಲಿ, ಗೊನೆ ಬಿಟ್ಟ ಬಾಳೆನೂ ಬಾಗುತ್ತದೆ, ತೆನೆ ಬಿಟ್ಟ ಪೈರು ಕೂಡ ಬಾಗುತ್ತದೆ, ಆದರೆ ಈ ಮನುಷ್ಯ ಜೀವ ಮಾತ್ರ ನಾನು ನನ್ನದು ಅನ್ನುವ ಅಹಂ ನಲ್ಲಿ ಬೀಗುತ್ತಿದ್ದಾನೆ. ಈ ಲೋಕವೇ ಹುಚ್ಚು ಅದರಲ್ಲೂ ನಮಗೆ ಸ್ವಲ್ಪ ಹೆಚ್ಚು ಅನ್ನುವುದೇ ಮರ್ತು, ಇನ್ನೊಬ್ಬರ ತಪ್ಪುಗಳನ್ನ ಎತ್ತಿ ತೋರಿಸುವುದರಲ್ಲಿಯೇ ಬದುಕು ಕಳೆದು ಹೋಗಿರುತ್ತದೆ. ಜಗತ್ತಿನಲ್ಲಿ ಬಿಟ್ಟಿಯಾಗಿ ಸಿಗುವುದು ಅಂದರೆ ಭೋದನೆ ಒಂದೇ. ಸುಳ್ಳು ಅನ್ನಿಸಿದ್ರೆ ನೀವು ಹತ್ತು ಜನರ ಹತ್ತಿರ ಸಹಾಯ ಕೇಳಿ ಒಬ್ಬರು ಬರುವುದಿಲ್ಲ ಸಹಾಯಕ್ಕೆ, ಅದೇ ಒಬ್ಬರ ಹತ್ತಿರ ಸಲಹೆ ಕೇಳಿ ಬೇಡ ಅಂದ್ರು ಹತ್ತು ಜನ ಬರುತ್ತಾರೆ ಬಿಟ್ಟಿ ಸಲಹೆ ಕೊಡುವುದಕ್ಕೆ. ವಿದ್ಯೆ ಜೊತೆ ವಿನಯವೂ ಇದ್ದಾಗಲೇ ವಿದ್ಯಾರ್ಥಿಗೆ ಶೋಭೆ. ಆದ್ರೆ ನಾಲ್ಕಾರು ಊರು ಸುತ್ಕೊಂಡು, ಒಂದೆರಡು ಡಿಗ್ರಿ ತೆಗೆದುಕೊಂಡಿದ್ರೆ ಸಾಕು ಪ್ರಪಂಚವನ್ನೆ ಗೆದ್ದಿದಿವಿ ಅನ್ನುವ ಭ್ರಮೆಲಿ ಬದುಕ್ತಿರ್ತಿವಿ. ನಾವು ಎಷ್ಟು ಓದಿದಿವಿ ಎಂಬುದಕ್ಕಿಂತ ನಾವು ಓದಿರುವ ವಿದ್ಯೆ ನಮಗೆಷ್ಟು ಸಂಸ್ಕಾರ ಕೊಟ್ಟಿದೆ ಎಂಬುದು ಮುಖ್ಯ. ಎಲ್ಲಾ ಕಡೆ ಬೀಗುವುದಲ್ಲ ಸಂಸ್ಕಾರ, ಬಲಹೀನರ ಎದುರು ಕೂಡ ಬಾಗುವುದೇ ಸಂಸ್ಕಾರ. ಈಗ ನಾನೇನಾದರೂ ಈ ರೀತಿ ಬರೆದಿರುವುದು ಸರಿ ಅಂತ ನೀವೇನು ಒಪ್ಪಿಕೊಳ್ಳಲೇ ಬೇಕಿಲ್ಲ ಅಲ್ವ? ನಮಗೆ ಗೊತ್ತು ನಾವು ಮಾಡುತ್ತಿರುವ ಕೆಲಸ, ನಮ್ಮ ನಿರ್ಧಾರ ಸರಿ ಇದೆ ಅಂತ. ಹಾಗೆ ಎಲ್ಲರಿಗೂ ಕೂಡ ಅವರು ಮಾಡಿದ್ದೆ ಸರಿ ಇರತ್ತದೆ ಕೂಡ. ಇನ್ನೊಬ್ಬರ ನಿರ್ಧಾರವನ್ನ ನಮ್ಮ ದೃಷ್ಟಿ ಕೋನದಲ್ಲಿ ನಿಂತು ನಿರ್ಣಯಿಸುವ ಬದಲು ಬೇರೆಯವರ ನಿರ್ಧಾರವನ್ನು ಅವರ ಜಾಗದಲ್ಲಿ ನಿಂತು ಸ್ವಲ್ಪ ನೋಡಬೇಕಲ್ಲವೇ? ನಿಮಗೂ ಇದೇ ತರ ಪ್ರಶ್ನೆ ಮೂಡಿರಬೇಕಲ್ಲವೆ?

---

# ಕಲಬೆರಕೆ ಮುಕ್ತ ಹಾಲು ಪೂರೈಕೆಯಿಂದ ರೈತರಿಗೆ ಹೆಚ್ಚು ಲಾಭ

## ಬೆಟ್ಟದತುಂಗ ಹಾಲು ಉತ್ಪಾದಕರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ಅಧಿಕಾರಿಗಳ ಕರೆ

**ಪಿರಿಯಾಪಟ್ಟಣ :** ಡೇರಿಗೆ ಉತ್ಪಾದಕರು ಕಲಬೆರಕೆ ಮುಕ್ತ ಹಾಲನ್ನು ಸರಬರಾಜು ಮಾಡಿದಾಗ ಹೆಚ್ಚು ಲಾಭಗಳಿಸುವುದಲ್ಲದೆ ಸಂಘದ ಅಭಿವೃದ್ಧಿಗೆ ಸಹಕಾರವಾಗುತ್ತದೆ ಎಂದು ಮೈಮುಲ್‌ನ ಪ್ರಭಾರ ಉಪವ್ಯವಸ್ಥಾಪಕ ಡಾ.ಎಂ.ಸಿ. ಸತೀಶ್ ತಿಳಿಸಿದರು.

ತಾಲೂಕಿನ ಬೆಟ್ಟದತುಂಗ ಗ್ರಾಮದ ಹಾಲು ಉತ್ಪಾದಕರ ಸಂಘದ ಆವರಣದಲ್ಲಿ ಆಯೋಜಿಸಿದ್ದ 2025–26ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ತಾಲೂಕಿನಲ್ಲಿ ಇರುವ 57 ಬಿಎಂಸಿ ಕೇಂದ್ರಗಳಲ್ಲಿ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವುದರಲ್ಲಿ ಈ ಸಂಘ ಪ್ರಥಮ ಸ್ಥಾನದಲ್ಲಿದೆ, ಇದೇ ರೀತಿ ಮುಂದೆ ಕೂಡ ಗುಣಮಟ್ಟದ ಹಾಲಿಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು. ಪ್ರತಿಯೊಬ್ಬ ಉತ್ಪಾದಕರು ತಮ್ಮ ರಾಸುಗಳಿಗೆ ವಿಮೆ ಮಾಡಿಸಿಕೊಳ್ಳುವಂತೆ ಮಾಹಿತಿ ನೀಡಿದರು. ಈ ಸಂಘದಲ್ಲಿ ಈಗ 3000 ಲೀ.ಹಾಲು ಸಂಗ್ರಹ ಮಾಡುತ್ತಿದ್ದು, ಇನ್ನು ಮುಂದೆ 5000 ಲೀ.ಹಾಲು ಸಂಗ್ರಹ ಮಾಡಲು ಅನುಕೂಲವಾಗುವಂತೆ ಹೊಸ ಟ್ಯಾಂಕ್ ಸೆಟ್‌ಅನ್ನು ಅಳವಡಿಸಿ, ಮೇಲ್ದರ್ಜೆಗೇರಿಸಲಾವುದು.




ಈ ಸಂದರ್ಭದಲ್ಲಿ ಮೈಮುಲ್ ವಿಸ್ತರಣಾಧಿಕಾರಿ ಹಸುವಿನಕಾವಲು ಸತೀಶ್ ಮಾತನಾಡಿ 2025–26ನೇ ಸಾಲಿನ ವರದಿಯನ್ನು ಸಭೆಯಲ್ಲಿ ಮಂಡಿಸಿದರು.ಪ್ರಸ್ತುತ ಸಂಘವು 621670 ರೂ. ಗಳಷ್ಟು ನಿವ್ವಳ ಲಾಭ ಗಳಿಸಿದೆ. ಒಕ್ಕೂಟವು ಹೈನುಗಾರಿಕೆಯನ್ನು ಉತ್ತೇಜಿಸುವ ಸಲುವಾಗಿ ಮ್ಯಾಟು, ಹಾಲು ಕರೆಯುವ ಯಂತ್ರ, ಚಾಪ್‌ಕಟರ್, ಪ್ರೋತ್ಸಾಹ ಧನ ಸೇರಿದಂತೆ ಹಲವಾರು ಸವಲತ್ತುಗಳನ್ನು ಉತ್ಪಾದಕರಿಗೆ ನೀಡುತ್ತಿದ್ದು, ಅದನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲೀಕರಣ ಹೊಂದುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘಕ್ಕೆ ಅತಿ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರಾದ ಉದ್ದೇಶ್, ಚಂದ್ರೇಗೌಡ, ಪುಟ್ಟಣ್ಣಯ್ಯರವರಿಗೆ ಬಹುಮಾನ ನೀಡಿ, ಸನ್ಮಾನಿಸಿ ಗೌರವಿಸಲಾಯಿತು, ದ್ವಿತೀಯ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಯಲ್ಲಿ ಅತಿ ಹೆಚ್ಚು ಉತ್ಪಾದಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಟಿ.ಎಲ್ ರಾಮೇಗೌಡ, ಉಪಾಧ್ಯಕ್ಷೆ ಪುಷ್ಪಕಲಾ ಆರಸ್, ನಿರ್ದೇಶಕರಾದ ಕೆ. ರಾಮೇಗೌಡ, ವಿನಯ್ ಅರಸ್, ಉದೇಶ್, ಸುಮ, ಶೇಖರ್, ಮಲ್ಲೇಶ್, ಸೋಮಣ್ಣ, ಚೆಲುವಯ್ಯ, ಸಿಇಒ ಸವಿತಾ, ಸಿಬ್ಬಂದಿ ಸ್ವಾಮಿ, ಚಂದ್ರಹಾಸ, ಸಂಘದ ಉತ್ಪಾದಕರು, ಸದಸ್ಯರು ಹಾಜರಿದ್ದರು.

---

# ಕಟ್ಟಿಗೆ ಹೊತ್ತ ಹೆಗಲಲ್ಲಿ ಚಿನ್ನದ ಸಿರಿ

ಸ್ಫೂರ್ತಿ ಸುಧೆ - 84



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಮಣಿಪುರದ ಮಣ್ಣು ಇತಿಹಾಸದಲ್ಲೂ ಸಾಹಸದಲ್ಲೂ ಸಮೃದ್ಧ. ಮಹಾಭಾರತದ ಚಿತ್ರಾಂಗದೆಯ ನೆಲದಲ್ಲಿ ಇಂದು ಮತ್ತೊಬ್ಬ ಧೀರಾಂಗನೆ ಜನ್ಮ ತಾಳಿದ್ದಾಳೆ – ಸೈಖೋಮ್ ಮೀರಾಬಾಯಿ ಚಾನು. ಬಡತನದ ಬೇಗೆಯಲ್ಲಿ ಹುಟ್ಟಿ, ಕಷ್ಟದ ಕಾಡಿನಲ್ಲಿ ಬೆಳೆದ ಈ ಹೆಣ್ಣುಮಗಳು ಇಂದು ಜಗತ್ತಿನ ಎದೆಯಲ್ಲಿ ಭಾರತದ ಕೀರ್ತಿಯನ್ನು ಕೆತ್ತಿದ್ದಾಳೆ.

ಆರು ಮಕ್ಕಳಲ್ಲಿ ಕಿರಿಯವಳು. ತಂದೆ ದಿನಗೂಲಿ, ತಾಯಿ ಟೀ ಅಂಗಡಿ. ಜೀವನಕ್ಕಾಗಿ 12ನೇ ವಯಸ್ಸಿನಿಂದಲೇ ಕಾಡಿಗೆ ಹೋಗಿ ಭಾರವಾದ ದಿಮ್ಮಿ ಹೊತ್ತು ತರುತ್ತಿದ್ದಳು. 16 ವರ್ಷದ ಅಣ್ಣನಿಂದಲೂ ಎತ್ತಲಾಗದ ಭಾರವನ್ನು ಈ ಪುಟ್ಟ ಕೈಗಳು ಅನಾಯಾಸವಾಗಿ ಹೊರುತ್ತಿದ್ದವು. ಅದೇ ಶಕ್ತಿ ಮುಂದೆ




ವೇಟ್ ಲಿಫ್ಟಿಂಗ್ ವೇದಿಕೆಯಲ್ಲಿ ಸಿಡಿದು ನಿಂತಿತು. ಸಾಧನವಿಲ್ಲದ ದಿನಗಳಲ್ಲಿ ಬಿದಿರು ಕಾಂಡವನ್ನೇ ಎತ್ತಿ ಅಭ್ಯಾಸ ಮಾಡಿದಳು. 40 ಕಿ.ಮೀ ದೂರದ ಕ್ರೀಡಾಂಗಣಕ್ಕೆ ಹೋಗಲು ಮುಂಜಾನೆ ನಾಲ್ಕು ಗಂಟೆಗೆ ಮರಳಿನ ಲಾರಿ ಹತ್ತುತ್ತಿದ್ದಳು. "ಅಣ್ಣಾ" ಎಂಬ ಒಂದು ಮಾತಿನಲ್ಲಿ ಅಪರಿಚಿತರಲ್ಲೂ ಆತ್ಮೀಯತೆ ಕಂಡುಕೊಂಡ ಧೈರ್ಯ ಅವಳದ್ದು. ಫಲಿತಾಂಶ ರಾಷ್ಟ್ರದ ಹೆಮ್ಮೆಯಾಯಿತು. 2018, 2022, 2026 ರ ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಹ್ಯಾಟ್ರಿಕ್ ಚಿನ್ನ. ವಿಶ್ವ ಚಾಂಪಿಯನ್‌ಶಿಪ್, ಕಾಮನ್‌ವೆಲ್ತ್ ಚಾಂಪಿಯನ್‌ಶಿಪ್, ಸೌತ್ ಏಷ್ಯನ್ ಗೇಮ್ಸ್ ಸೇರಿ ಒಟ್ಟು ಒಂಬತ್ತು ಚಿನ್ನದ ಪದಕಗಳು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ. ರಾಷ್ಟ್ರಗೀತೆ ಮೊಳಗಿದಾಗ ಅವಳ ಕಣ್ಣಂಚಿನಲ್ಲಿ ತುಂಬಿದ್ದು ಕೇವಲ ನೀರಲ್ಲ, ಕೋಟ್ಯಂತರ ಜನರ ಭರವಸೆ.

ಶಿಖರದ ತುದಿ ಮುಟ್ಟಿದ ಮೇಲೂ ಬೇರು ಮರೆತಿಲ್ಲ. ತನಗೆ ನೆರವಾದ ಲಾರಿ ಚಾಲಕರನ್ನು ಮನೆಗೆ ಕರೆಸಿ ಸತ್ಕರಿಸಿದ ಮಾನವೀಯತೆ ಮೀರಾಬಾಯಿಯನ್ನು ಇನ್ನಷ್ಟು ದೊಡ್ಡವಳನ್ನಾಗಿಸಿತು. ಕಟ್ಟಿಗೆ ಹೊತ್ತ ಹೆಗಲೇ ಇಂದು ಚಿನ್ನದ ಸಿರಿ ಹೊತ್ತಿದೆ. ಅವಳು ಎತ್ತಿದ್ದು ತೂಕವಲ್ಲ, ಭಾರತ ಮಾತೆಯ ಸ್ವಾಭಿಮಾನ. ಯುವ ಪೀಳಿಗೆಗೆ ಇದು ಸದಾ ಮಿನುಗುವ ಸ್ಫೂರ್ತಿಯ ಸಾಗರ.

---

# ಲೋಕಮಾನ್ಯ ಬಾಲಗಂಗಾಧರ ತಿಲಕ



ಗಿರಿಜಾ.ಎಸ್. ದೇಶಪಾಂಡೆ.
ಬೆಂಗಳೂರು.

ಬಾಲಗಂಗಾಧರ ತಿಲಕರು ಮಹಾರಾಷ್ಟ್ರದ ರತ್ನಗಿರಿಯ ಮಧ್ಯಮ ವರ್ಗದ ಕುಟುಂಬದಲ್ಲಿ ಜುಲೈ 23 1856 ರಲ್ಲಿ ಜನಿಸಿದರು.ಆಗ ಆಧುನಿಕ ಕಾಲೇಜ ಶಿಕ್ಷಣ ಪಡೆದುಕೊಂಡ ನವಪೀಳಿಗೆಯ ಯುವಕರಲ್ಲಿ ತಿಲಕರೂ ಒಬ್ಬರಾಗಿದ್ದರು.ಶಾಲೆಯೊಂದರಲ್ಲಿ ಗಣಿತ ಶಿಕ್ಷಕರಾಗಿ ಸೇರಿದ ಇವರು ಪರ್ತಕರ್ತರೂ ಆದರು.ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲಿ ಎಂಬ ಉದ್ದೇಶದಿಂದ ಪುಣೆಯಲ್ಲಿ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು. ತಿಲಕರು ಸ್ಥಾಪಿಸಿದ ' ಕೇಸರಿ' ಮರಾಠಿ ಪತ್ರಿಕೆ ಬಹುಬೇಗ ಜನಸಾಮಾನ್ಯರ ಮನೆ ಮಾತಾಯಿತು.ಭಾರತೀಯರಿಗೆ ಸ್ವರಾಜ್ಯದ ಹಕ್ಕನ್ನು ಬಿಟ್ಟುಕೊಡಬೇಕೆಂದು ಪ್ರತಿಪಾದಿಸಿದರು.

ತಿಲಕರು ಮೂಲತಃ ಅದ್ವೈತ ವೇದಾಂತದ ಪ್ರತಿಪಾದಕರಾಗಿದ್ದರು.ಅದ್ವೈತದ ಜ್ಞಾನವೊಂದರಿಂದಲೇ ಮುಕ್ತಿ ಎಂಬ ನಂಬಿಕೆಗೆ ಸರಿಸಮಾನವಾಗಿ ಕರ್ಮಯೋಗವನ್ನು ಸೇರಿಸಿದರು.ವಿವಾಹಕ್ಕೆ ಕನಿಷ್ಠ ವಯೋಮಿತಿಯೇ ಮೊದಲಾಗಿ ತಿಲಕರು ಅನೇಕ ಸಾಮಾಜಿಕ ಸುಧಾರಣೆಗಳನ್ನು ಮುಂದಿಟ್ಟರು.ಶಿಕ್ಷಣ,ರಾಜಕೀಯ ಜೀವನದ ಬಗ್ಗೆ ಅವರ ವಿಚಾರಗಳು ಬಹಳ ಪ್ರಭಾವಶಾಲಿಯಾಗಿದ್ದವು. ತಿಲಕರ ಇನ್ನೊಂದು ಕಾಣಿಕೆಯೆಂದರೆ ಸಾರ್ವಜನಿಕ ಗಣೇಶೋತ್ಸವ .ಭಾದ್ರಪದ ಶುಕ್ಲ ಚತುರ್ಥಿಯಿಂದ ಅನಂತಚತುರ್ದಶಿವರೆಗಿನ ಹನ್ನೊಂದು ದಿನಗಳ ಉತ್ಸವ ಖಾಸಗೀ ಧಾರ್ಮಿಕ ಆಚರಣೆಯನ್ನು ಜನಸಾಮಾನ್ಯರು ಒಟ್ಟುಗೂಡಿ ಆಚರಿಸುವ ಮಾಧ್ಯಮವಾಗಿ ಬದಲಾಯಿಸಿದರು. ತಿಲಕರು ಪ್ರಾರಂಭಿಸಿದ ಈ ಪರಂಪರೆ ದೇಶದ ಅನೇಕ ಕಡೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಮಹಾರಾಷ್ಟ್ರ,ಕರ್ನಾಟಕದಲ್ಲಿ ಇಂದಿಗೂ ಮುಂದುವರೆಯುತ್ತಿದೆ.ಪರದೇಶಿ ವಸ್ತುಗಳನ್ನು ಬಹಿಷ್ಕರಿಸುವಂತೆ ಅವರು ನೀಡಿದ ಕರೆ ಬಹಳಷ್ಟು ಭಾರತೀಯರಲ್ಲಿ ದೇಶಭಕ್ತಿ ಉಕ್ಕಿಸಿತು.ಸ್ವರಾಜ್ಯ ಮತ್ತು ರಾಜಕೀಯ ಸ್ವತಂತ್ರಕ್ಕಾಗಿ ಹೋರಾಟವನ್ನು ಜನಸಾಮಾನ್ಯರವರೆಗೆ ಕೊಂಡೊಯ್ದ ತಿಲಕರನ್ನು ಸ್ವಾತಂತ್ರ್ಯ ಚಳುವಳಿಯ ಜನಕನೆಂದು ಪರಿಗಣಿಸಲಾಗಿದೆ.



ಭಾರತೀಯ ಸಂಸ್ಕೃತಿ ಇತಿಹಾಸ ಹಾಗೂ ಧರ್ಮದ ಬಗ್ಗೆ ತಮ್ಮ ಲೇಖನಗಳಿಂದ ಲಕ್ಷಾಂತರ ಭಾರತೀಯರಿಗೆ ತಮ್ಮ ಭವ್ಯ ಪರಂಪರೆಯ ಹಾಗೂ ನಾಗರಿಕತೆಗಳ ಅರಿವು ಮಾಡಿಕೊಟ್ಟು ನಮ್ಮ ದೇಶದ ಬಗ್ಗೆ ಅಭಿಮಾನ ಮೂಡಿಸಿದವರಾಗಿದ್ದಾರೆ.

1920 ಅಗಷ್ಟ 1 ರಂದು ತಿಲಕರು ಸ್ವರ್ಗಸ್ಥರಾದಾಗ ಅವರ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಿದ ಮಹಾತ್ಮಾ ಗಾಂಧೀಜಿಯವರು ತಿಲಕರನ್ನು ' ಭಾರತದೇಶದ ಚಳುವಳಿಯ ಜನಕ' ನೆಂದು ಬಣ್ಣಿಸಿದ್ದರು.ಇಂದೂ ಹಿಂದೂ ರಾಷ್ಟ್ರೀಯ ವಾದವನ್ನು ಹುಟ್ಟುಹಾಕಿದವರೆಂದು ಹೇಳಲಾಗುತ್ತದೆ.

ಲೋಕಮಾನ್ಯ ಬಾಲಗಂಗಾಧರ ತಿಲಕರು "ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು" ಎಂದು ಘೋಷಿಸಿದ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ನಿರ್ಭೀತ ನಾಯಕನನ್ನು ನೆನೆಯುವಂತಾಗಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,